ಸೋಮವಾರ, ಅಕ್ಟೋಬರ್ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 290 | ಪುಟ 16
prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

24 ದೇಶಗಳಿಗೆ ಭಾರತದ ರಫ್ತು ಹೆಚ್ಚಳ 10
15 ಜಿಲ್ಲೆಗಳ ಕೈತಪ್ಪಲಿದೆ 'ಪಿಎಂಜಿಎಸ್‌ವೈ' 6

ಜಾತಿವಾರು ಸಮೀಕ್ಷೆ: 31ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿವಾರು ಸಮೀಕ್ಷೆ) ಅವಧಿಯನ್ನು ಇದೇ 31ರವರೆಗೆ ವಿಸ್ತರಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ತಿಳಿಸಿದರು.

ದಸರಾ ರಜೆ ಕಳೆದು ಶಾಲೆಗಳು ಆರಂಭವಾಗಿರುವ ಕಾರಣ ಮುಂದಿನ ಒಂಬತ್ತು ದಿನ ನಡೆಯಲಿರುವ ಸಮೀಕ್ಷಾ ಕಾರ್ಯದಲ್ಲಿ ಶಿಕ್ಷಕರನ್ನು ಬಳಕೆ ಮಾಡಿ-ಕೊಳ್ಳದಿರಲು ತೀರ್ಮಾನಿಸಲಾಗಿದೆ ಎಂದರು.

ಸಮೀಕ್ಷಕರಿಗೆ 3 ದಿನ ರಜೆ: 'ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಸಿಬ್ಬಂದಿಗೆ ದೀಪಾವಳಿ ಹಬ್ಬದ ಕಾರಣ ಇದೇ 20, 21 ಮತ್ತು 22ರಂದು ರಜೆ ನೀಡಲಾಗಿದೆ. 23ರಿಂದ ಮತ್ತೆ ಸಮೀಕ್ಷೆ ಆರಂಭವಾಗಲಿದೆ. ಆಯಾ ಜಿಲ್ಲಾಧಿಕಾರಿಗಳು ವಿವಿಧ ಇಲಾಖೆಗಳ ಸಿಬ್ಬಂದಿಯನ್ನು ಬಳಸಿಕೊಂಡು ಸಮೀಕ್ಷೆ ಕಾರ್ಯ ಪೂರ್ಣಗೊಳಿಸಲಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

7

ವರದಿಗೆ ಹೈಕೋರ್ಟ್ ಆದೇಶ

ಚಿತ್ತಾಪುರದಲ್ಲಿ ನ.2ಕ್ಕೆ ಆರ್‌ಎಸ್‌ಎಸ್ ಪಥಸಂಚಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಸನ್ನಿವೇಶದಲ್ಲಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಬರುವ ನವೆಂಬರ್ 2ಕ್ಕೆ ನಡೆಸಲು ಯೋಜಿಸಿರುವ ಪಥಸಂಚಲನದ ಸ್ಥಳ ಮತ್ತು ಸಮಯಕ್ಕೆ ಸಂಬಂಧಿಸಿದಂತೆ ಕೈಗೊಳ್ಳುವ ನಿರ್ಣಯದ ವರದಿಯನ್ನು ಇದೇ 24ಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಚಿತ್ತಾಪುರದಲ್ಲಿ ಭಾನುವಾರ (ಅ.19) ಮಧ್ಯಾಹ್ನ 3 ಗಂಟೆಗೆ ನಡೆಯಬೇಕಿದ್ದ ಪಥಸಂಚಲನಕ್ಕೆ ಅನುಮತಿ ನಿರಾಕರಿಸಿದ ತಹಶೀಲ್ದಾರ್ ಕ್ರಮವನ್ನು ಆಕ್ಷೇಪಿಸಿ ಪಥಸಂಚಲನದ ಸಂಚಾಲಕರೂ ಆದ ಚಿಂಚೋಳಿಯ ಹಿರಿಯ ನಾಗರಿಕ ಅಶೋಕ್ ಪಾಟೀಲ (70) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರಿದ್ದ ನಿಯೋಜಿತ ಏಕಸದಸ್ಯ ವಿಶೇಷ ನ್ಯಾಯಪೀಠ (ಕಲಬುರಗಿ) ಭಾನುವಾರ ಬೆಳಿಗ್ಗೆ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್, 'ಆರ್‌ಎಸ್‌ಎಸ್‌ಗೆ 100 ವರ್ಷ ತುಂಬಿರುವ ಸಂದರ್ಭದಲ್ಲಿ ಮತ್ತು ವಿಜಯದಶಮಿ ಪ್ರಯುಕ್ತ ಎಲ್ಲೆಡೆ ಪಥಸಂಚಲನ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸ-ಲಾಗುತ್ತಿದೆ. ಹಾಗೆಯೇ ಚಿತ್ತಾಪುರದಲ್ಲಿ ಇದೇ 19ರಂದು ಮಧ್ಯಾಹ್ನ 3 ಗಂಟೆಗೆ ಪಥಸಂಚಲನ ಹಮ್ಮಿಕೊಳ್ಳಲಾಗಿತ್ತು. ಇದಕ್ಕಾಗಿ ಕಲಬುರಗಿ ಜಿಲ್ಲೆಯ ಆರ್‌ಎಸ್‌ಎಸ್ ವ್ಯವಸ್ಥಾಪಕ ಪ್ರಲ್ಹಾದ ವಿಶ್ವಕರ್ಮ ಅವರು ಸ್ಥಳೀಯ ತಹಶಿಲ್ದಾರ್‌ಗೆ ಮನವಿ ಸಲ್ಲಿಸಿದ್ದರು. ಆದರೆ, ಮನವಿಯನ್ನು ನಿರಾಕರಿಸಲಾಗಿದೆ' ಎಂದರು.

'ರಾತ್ರೋರಾತ್ರಿ ಅನುಮತಿ ನಿರಾಕರಿಸಿರುವುದರ ಹಿಂದೆ ರಾಜಕೀಯ ದುರುದ್ದೇಶ ಅಡಗಿದೆ. ಭೀಮ್ ಆರ್ಮಿ ಮತ್ತು ದಲಿತ ಪ್ಯಾಂಥರ್ ಸಂಘಟನೆಗಳೂ ಇಂದೇ (ಅ.19) ಮೆರವಣಿಗೆಗೆ ಅವಕಾಶ ಕೋರಿವೆ ಎಂಬುದನ್ನು ನೆಪವಾಗಿಟ್ಟು-ಕೊಂಡು ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ನಿರಾಕರಿಸಲಾಗಿದೆ' ಎಂದು ದೂರಿದರು.

'ಆರ್‌ಎಸ್‌ಎಸ್‌ಗೆ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಅಪಾರ ಕಳಕಳಿ ಇದೆ. ರಾಜ್ಯದಾದ್ಯಂತ ಇದುವರೆಗೆ 250 ಸಮಾವೇಶಗಳನ್ನು ನಡೆಸಲಾಗಿದೆ. ಎಲ್ಲಿಯೂ ಯಾವುದೇ ರೀತಿಯ ಶಾಂತಿ ಭಂಗವಾಗುವಂತಹ ಕೃತ್ಯಗಳು ನಡೆದಿಲ್ಲ. ಸಂಘವು ಶಿಸ್ತು, ಸಂಯಮ ಮತ್ತು ದೇಶಭಕ್ತಿಗೆ ಹೆಸರಾದ ಸಂಘಟನೆ. ತನ್ನ ಕಾರ್ಯಕ್ರಮಗಳಲ್ಲಿ ನಿಯಮ ಪಾಲಿಸಲು ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ' ಎಂದರು.

6

'ಪಥ ಸಂಚಲನಕ್ಕೆ ಅವಕಾಶ ನಿರಾಕರಣೆ'

'ಮತ್ತೊಮ್ಮೆ ಅರ್ಜಿ ಹಾಕಿದರೆ ಪರಿಗಣಿಸಿ ಎಂದು ಹೈಕೋರ್ಟ್ ಹೇಳುವ ಮೂಲಕ, ಆರ್‌ಎಸ್‌ಎಸ್ ಪಥ ಸಂಚಲನವನ್ನು ಭಾನುವಾರ (ಅ.19) ನಡೆಸುವುದಕ್ಕೆ ಅವಕಾಶ ನಿರಾಕರಿಸಿದೆ. ಸಮಾಜದಲ್ಲಿ ಶಾಂತಿ ಕಾಪಾಡುವುದು ಬಹಳ ಮುಖ್ಯ' ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಹೈಕೋರ್ಟ್ ನೀಡಿರುವ ತೀರ್ಪಿಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಅವರು ಮತ್ತೊಮ್ಮೆ ಅರ್ಜಿ ಕೊಡಲಿ, ಆಗ ಸರ್ಕಾರ ಮತ್ತೆ ಯೋಚನೆ ಮಾಡುತ್ತದೆ. ಇದು ಸ್ಪಷ್ಟ ಸಂದೇಶ' ಎಂದರು. 'ನೋಂದಣಿ ಪ್ರಮಾಣಪತ್ರ, ಪಥ ಸಂಚಲನದಲ್ಲಿ ಎಷ್ಟು ಜನಭಾಗವಹಿಸುತ್ತಾರೆ ಮತ್ತಿತರ ಮಾಹಿತಿ ನೀಡದ ಕಾರಣ ತಹಶೀಲ್ದಾರ್ ಅನುಮತಿ ನೀಡಿಲ್ಲ. ಇದನ್ನು ಪ್ರಶ್ನಿಸಿ ಆರ್‌ಎಸ್‌ಎಸ್‌ನವರು ಕೋರ್ಟ್ ಮೆಟ್ಟಿಲೇರಿದ್ದಾರೆ' ಎಂದರು.

6

'ಭೂಗತ ಸಂಘಟನೆ ಅಲ್ಲವೇ?'

'ಸಮಾಜ ಸೇವೆ ಮಾಡಲು ಆರ್‌ಎಸ್‌ಎಸ್ ಸರ್ಕಾರಿ ಸಂಸ್ಥೆಯೂ ಅಲ್ಲ, ಸರ್ಕಾರೇತರ ಸಂಸ್ಥೆಯೂ ಅಲ್ಲ. ಕನಿಷ್ಠ ನೋಂದಣಿಯೂ ಆಗಿಲ್ಲ. ಹಾಗಾದರೆ ಇದೊಂದು ಭೂಗತ ಸಂಘಟನೆ ಅಲ್ಲವೇ' ಎಂದು ಬಿ.ಎಲ್. ಸಂತೋಷ್ (ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ) ಅವರನ್ನು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದ್ದಾರೆ.

6

'ಚಿತ್ತಾಪುರದ 'ರಜಾಕ'ರಿಗೆ ಚಾಟಿ'

ಚಿತ್ತಾಪುರ ರಿಪಬ್ಲಿಕ್‌ನ 'ರಜಾಕ'ರಿಗೆ ಹೈಕೋರ್ಟ್ ಚಾಟಿ ಬೀಸಿದೆ. ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ವಿಧಿಸಿದ್ದ ನಿಷೇಧವನ್ನು ಹೈಕೋರ್ಟ್ ರದ್ದು ಮಾಡಿ, ನವೆಂಬರ್ 2 ರಂದು ನಡೆಸಲು ಅನುಮತಿ ನೀಡಿದೆ. ಜನರು ಮತಭಿಕ್ಷೆ ನೀಡಿ ಗೆಲ್ಲಿಸಿರುವ ಕ್ಷೇತ್ರವನ್ನು ತಮ್ಮದೇ ರಿಪಬ್ಲಿಕ್ ಎಂದು ಭಾವಿಸಿಕೊಂಡು, ದೇಶಭಕ್ತರ ಪಥಸಂಚಲನವನ್ನು ತಡೆಯಲು ಯತ್ನಿಸಿದ ಚಿತ್ತಾಪುರದ 'ರಜಾಕರ' ಇಂದು ನ್ಯಾಯದ ಮುಂದೆ ತಲೆಬಾಗಬೇಕಾಗಿದೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಸಕ್ಕರೆ ರಹಿತ ತಿನಿಸು ಮಾರುಕಟ್ಟೆಗೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳ ದೀಪಾವಳಿ ಹಬ್ಬದ ಪ್ರಯುಕ್ತ, ಸಕ್ಕರೆ ರಹಿತ ನಂದಿನಿ ಸಿಹಿ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ. ನಂದಿನಿ ಖೋವಾ ಗುಲಾಬ್ ಜಾಮೂನ್, ನಂದಿನಿ ಹಾಲಿನ ಪೇಡಾವನ್ನು ಮಾರುಕಟ್ಟೆಗೆ ಪರಿಚಯಿಸಿದೆ.

7

'ರಾಜ್ಯಕ್ಕೆ ₹384 ಕೋಟಿ ಪ್ರವಾಹ ಪರಿಹಾರ'

ನವದೆಹಲಿ (ಪಿಟಿಐ): ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಿಗೆ ₹1,950.80 ಕೋಟಿ ಪರಿಹಾರವನ್ನು 2025-26ನೇ ಸಾಲಿನ ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಅಡಿ ಮುಂಗಡವಾಗಿ ನೀಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಅನುಮೋದನೆ ನೀಡಿದ್ದಾರೆ. ಪರಿಹಾರದ ಎರಡನೇ ಕಂತಿನ ಮೊತ್ತ ಇದಾಗಿದೆ.

ಈ ವರ್ಷದ ನೈರುತ್ಯ ಮುಂಗಾರಿನಿಂದ ತೀವ್ರ ಹಾನಿಗೊಳಗಾದ ಜನರಿಗೆ ತ್ವರಿತವಾಗಿ ನೆರವು ಒದಗಿಸಲು ಒಟ್ಟು ಮೊತ್ತದಲ್ಲಿ ಕರ್ನಾಟಕಕ್ಕೆ ₹384.40 ಕೋಟಿ ಹಾಗೂ ಮಹಾರಾಷ್ಟ್ರಕ್ಕೆ ₹1,566.40 ಕೋಟಿ ನೀಡಲು ಅನುಮೋದನೆ ನೀಡಲಾಗಿದೆ.

'ಪ್ರವಾಹ, ಭೂಕುಸಿತ ಹಾಗೂ ಮೇಘಸ್ಫೋಟಕ್ಕೆ ಒಳಗಾದ ರಾಜ್ಯಗಳಿಗೆ ಎಲ್ಲ ರೀತಿಯ ನೆರವು ಒದಗಿಸಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಸಲಹೆಯಂತೆ ಕೇಂದ್ರ ಸರ್ಕಾರ ತನ್ನ ಬದ್ಧತೆ ವ್ಯಕ್ತಪಡಿಸಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಸ್‌ಡಿಆರ್‌ಎಫ್‌ನ ಅಡಿಯಲ್ಲಿ ಕೇಂದ್ರದ ಪಾಲಾದ ₹13,603.20 ಕೋಟಿಯನ್ನು 27 ರಾಜ್ಯಗಳಿಗೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯ ಅಡಿಯಲ್ಲಿ 15 ರಾಜ್ಯಗಳಿಗೆ ₹2,189.28 ಕೋಟಿ ಮೊತ್ತವನ್ನು ಕೇಂದ್ರ ಸರ್ಕಾರವು ಈ ವರ್ಷ ಬಿಡುಗಡೆ ಮಾಡಿದೆ. ಇದಲ್ಲದೇ, ಹೆಚ್ಚುವರಿಯಾಗಿ ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಎಂಎಫ್)ನ ಅಡಿಯಲ್ಲಿ 21 ರಾಜ್ಯಗಳಿಗೆ ₹4,571.30 ಕೋಟಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಎಂಎಫ್) ಅಡಿಯಲ್ಲಿ 9 ರಾಜ್ಯಗಳಿಗೆ ₹372.09 ಕೋಟಿ ನೆರವು ನೀಡಲಾಗಿದೆ.

ಚಂದ್ರಶೇಖರ ಶಿಲ್ಪಿಗೆ ರಾಷ್ಟ್ರೀಯ ಶಿಲ್ಪಕಲಾ ಪ್ರಶಸ್ತಿ

ಕಲಬುರಗಿ: ಹಿರಿಯ ಕಲಾವಿದ ಚಂದ್ರಶೇಖರ ವೈ.ಶಿಲ್ಪಿ ಅವರಿಗೆ ಜವಳಿ ಸಚಿವಾಲಯವು ನೀಡುವ 2024ನೇ ಸಾಲಿನ 'ರಾಷ್ಟ್ರೀಯ ಶಿಲ್ಪಕಲಾ ಪ್ರಶಸ್ತಿ' ದೊರೆತಿದೆ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಶಿಲ್ಪಿ ಅವರು ಕೆತ್ತನೆ ಮಾಡಿದ ವಿಶಿಷ್ಟ ಕಲಾ ನೈಪುಣ್ಯದ ಬಾಗಿಲಿಗೆ ಪ್ರಶಸ್ತಿ ಲಭಿಸಿದೆ.

7

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಡಕತ್ತರಿಯಲ್ಲಿ 56% ಮೀಸಲು

ವಿವಿಧ ಹುದ್ದೆ ನೇಮಕಾತಿಗೆ ಅಡ್ಡಿ • ರಾಜ್ಯ ಸರ್ಕಾರಕ್ಕೆ ಸವಾಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಾರಣಕ್ಕೆ ಸ್ಥಗಿತಗೊಂಡಿದ್ದ ವಿವಿಧ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆಗಳಿಗೆ ಚಾಲನೆ ಸಿಕ್ಕಿದರೂ ಜಾತಿವಾರು ಒಟ್ಟು ಮೀಸಲಾತಿ ಪ್ರಮಾಣವನ್ನು ಈ ಹಿಂದೆ ಶೇ 50ರಿಂದ ಶೇ 56ಕ್ಕೆ ಹೆಚ್ಚಿಸಿರುವುದನ್ನು 'ಕಾನೂನು' ಪ್ರಕಾರ ಸಮರ್ಥಿಸಿಕೊಳ್ಳಬೇಕಾದ ಸವಾಲು ರಾಜ್ಯ ಸರ್ಕಾರಕ್ಕೆ ಎದುರಾಗಿದೆ.

ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಹೊರಡಿಸಿದ್ದ ಅಧಿಸೂಚನೆಯಲ್ಲಿ ಶೇ 56 ಮೀಸಲಾತಿ ಅನ್ವಯಿಸಿ ಈ ಹುದ್ದೆಗಳ ವರ್ಗೀಕರಣವನ್ನು ಮತ್ತು ಶೇ 56 ಮೀಸಲಾತಿ ಅನ್ವಯಿಸಿ ರೋಸ್ಟರ್ ಪರಿಷ್ಕರಿಸಿ ಸರ್ಕಾರ 2022ರ ಡಿ. 28ರಂದು ಹೊರಡಿಸಿದ್ದ ಆದೇಶವನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) 2025ರ ಮೇ 28ರಂದು ರದ್ದುಪಡಿಸಿದೆ.

ವಿವಿಧ ಪ್ರವರ್ಗಗಳಿಗೆ ಒಟ್ಟು ಶೇ 56 ಮೀಸಲಾತಿಯನ್ನು ಅನ್ವಯಿಸಿ, 100 ಬಿಂದುಗಳ ರೋಸ್ಟರ್ ಪರಿಷ್ಕರಿಸಿ (100 ಹುದ್ದೆಗಳಲ್ಲಿ ಎಷ್ಟನೇ ಹುದ್ದೆ ಯಾವ ಜಾತಿಗೆ ಮೀಸಲು ಎಂಬ ಪಟ್ಟಿ) 2022ರ ಡಿಸೆಂಬರ್ 28ರಂದು ಸರ್ಕಾರ ಹೊರಡಿಸಿದ್ದ ಆದೇಶದಂತೆ ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುತ್ತಿತ್ತು. ಈ ಆದೇಶವನ್ನೇ ಕೆಎಟಿ ರದ್ದುಪ-ಡಿಸಿರುವ ಕಾರಣ, ಕಳೆದ ಎರಡು ವರ್ಷಗಳಿಂದ ಕೆಪಿಎಸ್‌ಸಿ ನಡೆಸಿರುವ ವಿವಿಧ ಹಂತದಲ್ಲಿರುವ ನೇಮಕಾತಿ ಪ್ರಕ್ರಿಯೆ ಮತ್ತು ಅಂತಿಮ ಆಯ್ಕೆ ಪಟ್ಟಿ ಸಿದ್ಧಗೊಂಡಿರುವ ಅಧಿಸೂಚನೆಗಳು ಅಡಕತ್ತರಿಗೆ ಸಿಲುಕಿವೆ.

ಕೆಎಟಿ ಆದೇಶದ ಪರಿಣಾಮವನ್ನು ಅರಿತ ಸರ್ಕಾರ, ಈ ಆದೇಶದ ವಿರುದ್ಧ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಜುಲೈ 31ರಂದು ಈ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, 'ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ಆಯ್ಕೆ ಪ್ರಕ್ರಿಯೆಯನ್ನು ಕೆಪಿಎಸ್‌ಸಿ ಮುಂದುವರಿಸಬಹುದು. ಆದರೆ, ಕೋರ್ಟ್ ಅನುಮತಿ ಇಲ್ಲದೆ ಆಯ್ಕೆ ಫಲಿತಾಂಶ ಪ್ರಕಟಿಸ-ಬಾರದು' ಎಂದು ಮಧ್ಯಂತರ ಆದೇಶ ನೀಡಿತ್ತು.

ಮೀಸಲಾತಿಯನ್ನು ಶೇ 56ಕ್ಕೆ ಹೆಚ್ಚಿಸಿರುವ ಕ್ರಮವು ಕಾನೂನುಬದ್ಧವೇ ಎಂಬುದು ಇತ್ಯರ್ಥ ಆಗುವವರೆಗೆ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪ್ರಕ್ರಿಯೆಗೆ ತಡೆ ನೀಡಬೇಕೆಂಬ ಅರ್ಜಿದಾರರ ಮನವಿಯನ್ನು ಹೈಕೋರ್ಟ್ ಪುರಸ್ಕರಿಸಿಲ್ಲ. ಪ್ರಕರಣದ ಮುಂದಿನ ವಿಚಾರಣೆ ನ. 4ರಂದು ನಿಗದಿಯಾಗಿದೆ.

7

'ತಾಂತ್ರಿಕ ಕಾರಣಕ್ಕೆ ಆದೇಶ ರದ್ದು'

ಮೀಸಲಾತಿ ಹೆಚ್ಚಿಸಲು ರೂಪಿಸಿರುವ ಕಾಯ್ದೆಯನ್ನು ಕೆಎಟಿ ವಜಾ ಮಾಡಿಲ್ಲ. ಮೀಸಲು ಅನ್ವಯಿಸಿ ರೋಸ್ಟರ್ ಪರಿಷ್ಕರಿಸಿ ಹೊರಡಿಸಿದ್ದ ಆದೇಶವನ್ನು ಕೆಲವು ತಾಂತ್ರಿಕ ಕಾರಣಗಳಿಗೆ ಕೆಎಟಿ ರದ್ದು ಮಾಡಿದೆ. ಸುಗ್ರೀವಾಜ್ಞೆಯ ಮೇಲೆ ಈ ಆದೇಶ ಹೊರಡಿಸಲಾಗಿದೆ. ಕಾಯ್ದೆ ಮಾಡಿದ ನಂತರ ಆದೇಶವನ್ನು ಬದಲಾ-ಯಿಸಬೇಕಿತ್ತು ಎನ್ನುವುದು ವಾದ. ಸುಗ್ರೀವಾಜ್ಞೆ ಜಾರಿಗೆ ಬಂದ ದಿನದಿಂದ ಆ ಆದೇಶವೂ ಜಾರಿಗೆ ಬರುತ್ತದೆ ಎಂದು ಕಾಯ್ದೆಯಲ್ಲಿದೆ. ಈ ವಿಚಾರದಲ್ಲಿ ಕಾನೂನು ಹೋರಾಟ ನಡೆಸಲಾಗುವುದು.

ಕೆ.ಜಿ. ಜಗದೀಶ್, ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಕಾರು ತಯಾರಿಕಾ ಕಂಪನಿಗಳ ಜೊತೆ ಒಪ್ಪಂದ ಕುದುರಿಸಿದ ಜೈನ ಸಂಘಟನೆ

186 ಕಾರು ಖರೀದಿ, ₹21 ಕೋಟಿ ರಿಯಾಯಿತಿ

ಅಹಮದಾಬಾದ್ (ಪಿಟಿಐ): ಒಟ್ಟು ₹21 ಕೋಟಿ ಮೊತ್ತದ ರಿಯಾಯಿತಿ ಪಡೆದು, ಒಟ್ಟು 186 ಐಷಾರಾಮಿ ಕಾರುಗಳನ್ನು ಖರೀದಿಸಿ ಜೈನ ಸಮುದಾಯವು ತನ್ನ ಕೊಳ್ಳುವ ಶಕ್ತಿಯನ್ನು ಪ್ರದರ್ಶಿಸಿದೆ.

ದೇಶದಲ್ಲಿ ಐಷಾರಾಮಿ ಕಾರುಗಳನ್ನು ಮಾರಾಟ ಮಾಡುವ ಬಿಎಂಡಬ್ಲ್ಯು, ಔಡಿ, ಮರ್ಸಿಡಿಸ್ ನಂತಹ ಕಂಪನಿಗಳು ಇಷ್ಟು ಸಂಖ್ಯೆಯಲ್ಲಿ ಕಾರುಗಳನ್ನು ಈ ರೀತಿಯಲ್ಲಿ ಮಾರಾಟ ಮಾಡಿರುವುದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ.

ಈ ಪ್ರಮಾಣದ ರಿಯಾಯಿತಿಯನ್ನು ಐಷಾರಾಮಿ ಕಾರು ಕಂಪನಿಗಳ ಬಳಿ ಕುದುರಿಸಿದ್ದು 'ಜೈನ್ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್' (ಜೆಐಟಿಒ) ಎಂದು ಅದರ ಉಪಾಧ್ಯಕ್ಷ ಹಿಮಾಂಶು ಶಾ ಅವರು ತಿಳಿಸಿದರು.

ಜೆಐಟಿಒ ಲಾಭದ ಉದ್ದೇಶ ಇಲ್ಲದ ಸಮುದಾಯ ಸಂಘಟನೆ. ಇದು ದೇಶದಾದ್ಯಂತ 65 ಸಾವಿರ ಸದಸ್ಯರನ್ನು ಹೊಂದಿದೆ ಎಂದು ಅವರು ಹೇಳಿದರು.

'₹60 ಲಕ್ಷದಿಂದ ₹1.3 ಕೋಟಿಯವರೆಗೆ ಬೆಲೆ ಇರುವ ಒಟ್ಟು 186 ಕಾರುಗಳನ್ನು ಖರೀದಿದಾರರಿಗೆ ಜನವರಿಯಿಂದ ಜೂನ್‌ವರೆಗಿನ ಅವಧಿಯಲ್ಲಿ ಹಸ್ತಾಂತರ ಮಾಡಲಾಗಿದೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ಕಾರು ಹಸ್ತಾಂತರ ನಡೆದಿದೆ. ಜೆಐಟಿಒ ನಡೆಸಿದ ರಾಷ್ಟ್ರವ್ಯಾಪಿ ಅಭಿಯಾನವೊಂದು ನಮ್ಮ ಸದಸ್ಯರು ಒಟ್ಟು ರಿಯಾಯಿತಿ ರೂಪದಲ್ಲಿ ₹21 ಕೋಟಿ ಉಳಿತಾಯ ಮಾಡಲು ನೆರವಾಗಿದೆ' ಎಂದು ಶಾ ತಿಳಿಸಿದರು.

ಈ ವಹಿವಾಟಿಗೆ ಸಂಘಟನೆಯು ನೆರವು ಮಾತ್ರ ನೀಡಿದೆ, ವಹಿವಾಟಿನ ಮೂಲಕ ಲಾಭ ಮಾಡಿಕೊಳ್ಳುವ ಕೆಲಸ ಮಾಡಿಲ್ಲ ಎಂದು ಅವರು ಸ್ಪಷ್ಟನೆ ನೀಡಿದರು. ಹೆಚ್ಚಿನ ಕಾರುಗಳನ್ನು ಖರೀದಿಸಿದವರು ಗುಜರಾತಿನ ಜೈನರು ಎಂದು ಅವರು ಹೇಳಿದರು.

ಜೈನ ಸಮುದಾಯದ ಕೊಳ್ಳುವ ಶಕ್ತಿಯು ಬಹಳ ದೊಡ್ಡ ಮಟ್ಟದಲ್ಲಿದೆ. ಅದನ್ನು ಬಳಸಿಕೊಂಡು ಕಾರು ತಯಾರಿಕಾ ಕಂಪನಿಗಳಿಂದ ಉತ್ತಮ ರಿಯಾಯಿತಿಯನ್ನು ಪಡೆಯಬಹುದು ಎಂದು ಜೆಐಟಿಒ ಸಂಘಟನೆಯ ಕೆಲವು ಸದಸ್ಯರು ಸಲಹೆ ನೀಡಿದರು. ಆ ಸಲಹೆ ಆಧರಿಸಿ ಮುಂದಡಿ ಇರಿಸಿ, ಈ ಒಪ್ಪಂದವನ್ನು ಕುದುರಿಸಲಾಯಿತು ಎಂದು ನಿತಿನ್ ಜೈನ್ ಅವರು ವಿವರಿಸಿದರು. ಈ ಒಪ್ಪಂದವನ್ನು ಸಾಧ್ಯವಾಗಿಸುವಲ್ಲಿ ಇವರೂ ಮಹತ್ವದ ಪಾತ್ರ ವಹಿಸಿದ್ದರು.

10

ಮುಖ್ಯಾಂಶಗಳು

- ಕಂಪನಿಗಳ ಜೊತೆ ಸಂಘಟನೆಯಿಂದ ನೇರ ಮಾತುಕತೆ
- ಪ್ರತಿ ಕಾರಿಗೆ ₹17 ಲಕ್ಷದವರೆಗೆ ರಿಯಾಯಿತಿ
- ಇತರ ಖರೀದಿಗಳಲ್ಲಿಯೂ ಇದೇ ಕಾರ್ಯತಂತ್ರ

ಮತ್ತೆ 'ಉತ್ಸವ'

ಐಷಾರಾಮಿ ಕಾರುಗಳ ಖರೀದಿಯಲ್ಲಿ ಪಡೆದ ರಿಯಾಯಿತಿಯಿಂದ ಉತ್ತೇಜಿತವಾಗಿರುವ ಜೆಐಟಿಒ ಸಂಘಟನೆಯು ಈಗ 'ಉತ್ಸವ' ಹೆಸರಿನಲ್ಲಿ ಹೊಸ ಉಪಕ್ರಮ ಆರಂಭಿಸಿದೆ. ಆಭರಣ, ಗ್ರಾಹಕ ಬಳಕೆ ಉಪಕರಣಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳ ಖರೀದಿಯ ವೇಳೆಯೂ ಇದೇ ಬಗೆಯಲ್ಲಿ ರಿಯಾಯಿತಿ ಪಡೆದುಕೊಳ್ಳಲು ಸಂಘಟನೆ ಮುಂದಾಗಿದೆ.

The BIG Xperience
HARSHA
Happiness. Redefined.
ಸಂಭ್ರಮವನ್ನು
ಇನ್ನಷ್ಟು ಬೆಳಗಿಸುವ
ಆಕರ್ಷಕ ಕೊಡುಗೆಗಳು!
FESTIVAL OF
HAPPINESS
ಕ್ಯಾಶ್ ಬ್ಯಾಕ್
₹30,000* ದವರೆಗೆ
ಇಎಮ್ಐನಲ್ಲಿ ಖರೀದಿಸಿ
1 ಒಂದು ಇಎಮ್ಐ ಉಚಿತವಾಗಿ ಪಡೆಯಿರಿ
ಎಕ್ಸ್ಚೇಂಜ್ ಬೋನಸ್
₹10,000* ದವರೆಗೆ
ಇನ್ಸ್ಟಂಟ್ ಕ್ಯಾಶ್ ಬ್ಯಾಕ್
₹26,000* ದವರೆಗೆ
Refrigerator
Up to ₹25,000* Cashback
Up to ₹10,000* Exchange Bonus
Pay just ₹5,999* & get Morphy Richards Air Fryer worth ₹15,990*
Washing Machine
Up to 20%* Cashback
Up to ₹5,000* Exchange Bonus
Pay just ₹5,999* & get Morphy Richards Air Fryer worth ₹15,990*
Dishwasher
Up to ₹10,000* Cashback
Pay just ₹5,499* & get Haier Microwave Oven worth ₹8,500*
Fixed EMI of ₹2,000*
Microwave Oven
Up to ₹3,000* Cashback
Up to ₹2,000* Exchange Bonus
Pay just ₹1,100* & get Philips Hand Mixer worth ₹2,495*
COMBO benefits ₹49,000*
Electrolux REF SBS +
Electrolux WM Auto +
Electrolux Dish Washer
Cash Back worth ₹24,000*
Gift Voucher worth ₹25,000*
Air Conditioners
Up to ₹4,000* Cashback
Upgrade Bonus ₹6,000*
5 years Comprehensive Warranty*
Pay just ₹5,999* & get Morphy Richards Air Fryer worth ₹15,990*
HARSHA
DEEPAVALI BAZAAR
11th Oct. - 3rd Nov. 2025
BAJAJ FINSERV
Cashback Offer up to ₹15,000*
केनरा बैंक Canara Bank
Flat 7.5% OFF upto ₹2,000* on Credit Card EMI & Non-EMI transaction
HDB FINANCIAL SERVICES
Cashback Offer up to ₹25,000*
HDFC BANK
Instant Discount upto ₹2,500* with HDFC Bank Debit/Credit Card EMI
IDFC FIRST Bank
Cashback Offer up to ₹30,000*
ICICI Bank
Flat 7.5% OFF upto ₹3,000* on Credit Card EMI & Debit Card EMI
SBI card
Instant Discount upto ₹12,000 * on EMI transactions
Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits.
BLUE STAR | BOSCH | Electrolux | Godrej | Haier | Hisense | IFB | LG | LIEBHERR | LLOYD | MITSUBISHI ELECTRIC | Panasonic | SAMSUNG | SONY | TCL | VOLTAS | Whirlpool
ಉಡುಪಿ | ಬ್ರಹ್ಮಾವರ | ಕುಂದಾಪುರ | ಸುರತ್ಕಲ್ | ಮಂಗಳೂರು | ಪುತ್ತೂರು | ಶಿವಮೊಗ್ಗ | ಸಾಗರ | ಹುಬ್ಬಳ್ಳಿ | ಧಾರವಾಡ | ಬೆಳಗಾವಿ | ಕಲಬುರಗಿ | ಮೈಸೂರು | ಬೆಂಗಳೂರು
eHarsha.India
digital_harsha
www.harshaindia.com

ರಮೇಶ ಕತ್ತಿ ವಿರುದ್ಧ ಜಾತಿ ನಿಂದನೆ ಪ್ರಕರಣ

ಯಾದಗಿರಿ: ವಾಲ್ಮೀಕಿ ಸಮುದಾಯಕ್ಕೆ ಅವಾಚ್ಯ ಪದ ಬಳಸಿ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ ಮಾಜಿ ಸಂಸದ, ಬೆಳಗಾವಿ ಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ ಕತ್ತಿ ಅವರ ವಿರುದ್ಧ ಸುರಪುರ ಪೊಲೀಸ್ ಠಾಣೆಯಲ್ಲಿ ಭಾನುವಾರ ಜಾತಿ ನಿಂದನೆ ಪ್ರಕರಣ ದಾಖಲಿಸಲಾಗಿದೆ.

ನಗರದಲ್ಲಿ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಗಳಿಗೆ ಮತದಾನ ನಡೆದಿತ್ತು. ಮತದಾನ ಸಂದರ್ಭದಲ್ಲಿ ವಾಲ್ಮೀಕಿ ಸಮುದಾಯಕ್ಕೆ ಅವಾಚ್ಯ ಪದ ಬಳಸಿದ್ದಾರೆ ಎಂದು ತಾಲ್ಲೂಕು ಮಹರ್ಷಿ ವಾಲ್ಮೀಕಿ ನಾಯಕ ಸಂಘದ ಪ್ರಧಾನ ಕಾರ್ಯದರ್ಶಿ ನಾಗರಾಜ ದಶರಥ ದೂರು ನೀಡಿದ್ದಾರೆ.

ದೀಪಾವಳಿಯ ಶುಭಾಶಯಗಳು!

ಬಿಡಿಸಿಸಿ: ಜಾರಕಿಹೊಳಿ ಬಣದ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಏಳು ನಿರ್ದೇಶಕ ಸ್ಥಾನಗಳಿಗೆ ಭಾನುವಾರ ಮತದಾನ ನಡೆಯಿತು. ಮೂರು ಕ್ಷೇತ್ರಗಳ ವಿಜೇತರನ್ನು ಘೋಷಣೆ ಮಾಡಲಾಗಿದ್ದು, ನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣ ನಾಲ್ಕು ಕ್ಷೇತ್ರಗಳ ಫಲಿತಾಂಶ ಘೋಷಣೆ ಮಾಡಲಿಲ್ಲ. ಇದರೊಂದಿಗೆ ಜಾರಕಿಹೊಳಿ ಸಹೋದರರ ಬಣಕ್ಕೆ ಬಲ ಬಂದಂತಾಗಿದೆ.

ಅಥಣಿಯಲ್ಲಿ ಶಾಸಕ ಲಕ್ಷ್ಮಣ ಸವದಿ 122 ಮತ ಪಡೆದು ಗೆದ್ದರೆ ಅವರ ವಿರುದ್ಧ ಮಾಜಿ ಶಾಸಕ ಮಹೇಶ ಕುಮಠಳ್ಳಿ ಕೇವಲ ಮೂರು ಮತ ಪಡೆದರು. ರಾಮ-ದುರ್ಗದಲ್ಲಿ ಮಲ್ಲಣ್ಣ ಯಾದವಾಡ 19 ಮತ ಪಡೆದು ಶ್ರೀಕಾಂತ ಢವಣ (16 ಮತ) ಅವರನ್ನು ಸೋಲಿಸಿದರು. ರಾಯಬಾಗದಲ್ಲಿ ಅಪ್ಪಾಸಾಹೇಬ ಕುಲಗೂಡೆ 120 ಮತ ಗಿಟ್ಟಿಸಿದರೆ, ಬಸಗೌಡ ಆಸಂಗಿ 64 ಮತ ಮಾತ್ರ ಪಡೆದರು.

ನಿಪ್ಪಾಣಿ, ಚನ್ನಮ್ಮನ ಕಿತ್ತೂರು, ಬೈಲಹೊಂಗಲ ಹಾಗೂ ಹುಕ್ಕೇರಿ ಕ್ಷೇತ್ರದ ಫಲಿತಾಂಶವನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಅ.28ರವರೆಗೆ ಫಲಿತಾಂಶ ಘೋಷಣೆ ಮಾಡದಂತೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಫಲಿತಾಂಶ ಪ್ರಕಟಿಸದಿದ್ದರೂ ಅಣ್ಣಾಸಾಹೇಬ ಜೊಲ್ಲೆ (ನಿಪ್ಪಾಣಿ), ರಮೇಶ ಕತ್ತಿ (ಹುಕ್ಕೇರಿ), ಮಹಾಂತೇಶ ದೊಡ್ಡಗಡರ (ಬೈಲಹೊಂಗಲ), ನಾನಾಸಾಹೇಬ ಪಾಟೀಲ (ಚನ್ನಮ್ಮನ ಕಿತ್ತೂರು) ಬೆಂಬಲಿಗರು ವಿಜಯೋತ್ಸವ ಆಚರಿಸಿದರು.

> **ವಿರೋಧಿ ಅಭ್ಯರ್ಥಿಯ ಡೆಲಿಗೇಷನ್ ಪ್ರತಿಗಳನ್ನು ಕದ್ದು ಇಟ್ಟುಕೊಂಡ ಬಗ್ಗೆ ದಾಖಲೆ ಇದ್ದರೆ ತೋರಿಸಲಿ. ದೂರು ದಾಖಲಿಸಿದ್ದಾರೆ. ಎಫ್‌ಐಆರ್ ಆಗಿಲ್ಲ**
> **ಸತೀಶ ಜಾರಕಿಹೊಳಿ**
> ಲೋಕೋಪಯೋಗಿ ಸಚಿವ



ಯಾಮಿನಿ ಪ್ರಿಯಾ ಪೋಷಕರ ಪ್ರತಿಭಟನೆ

ಅಪರಾಧ ಸುದ್ದಿ

ಬೆಂಗಳೂರು: ಪ್ರೀತಿ ನಿರಾಕರಿಸಿದ ಬಿ-ಫಾರ್ಮ ವಿದ್ಯಾರ್ಥಿನಿ ಯಾಮಿನಿ ಪ್ರಿಯಾಳನ್ನು ಚಾಕುವಿನಿಂದ ಕತ್ತು ಕೊಯ್ದು ಹತ್ಯೆಗೈದ ಆರೋಪಿ ವಿಘ್ನೇಶ್ ಮತ್ತು ಆತನಿಗೆ ಸಹಕಾರ ನೀಡಿದ ಹರೀಶ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪ್ರಿಯಾ ಸಂಬಂಧಿಕರು, ಕುಟುಂಬಸ್ಥರು ಶ್ರೀರಾಂಪುರ ಪೊಲೀಸ್ ಠಾಣೆ ಮತ್ತು ವಿಘ್ನೇಶ್ ಮನೆ ಎದುರು ಭಾನುವಾರ ಪ್ರತಿಭಟನೆ ನಡೆಸಿದರು.

ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಎನ್‌ಕೌಂಟರ್ ಮಾಡಬೇಕು. ಇಲ್ಲವೇ ನಮಗೆ ಒಪ್ಪಿಸಿ. ಆರೋಪಿಗಳಿಗೆ ಶಿಕ್ಷೆ ನೀಡುತ್ತೇವೆ' ಎಂದು ಪ್ರತಿಭಟನಕಾರರು ಒತ್ತಾಯಿಸಿದರು. ಬಳಿಕ ಪೊಲೀಸರು, ಮನವೊಲಿಸಿ ಪ್ರತಿಭಟನನಿರತರನ್ನು ಕಳುಹಿಸಿದರು. ವಿಘ್ನೇಶ್ ಮನೆ ಬಳಿ ಸೇರಿದ್ದವರಿಗೂ ಮನವಿ ಮಾಡಿ ಕಳುಹಿಸಿದರು. ಆರೋಪಿ ಮನೆ ಬಳಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಸ್ವತಂತ್ರಪಾಳ್ಯ ನಿವಾಸಿ ಯಾಮಿನಿ ಪ್ರಿಯಾ (20) ಅವರನ್ನು ವಿಘ್ನೇಶ್ ಅ.16ರಂದು ಮಂತ್ರಿಮಾಲ್ ಹಿಂಭಾಗದ ರಸ್ತೆಯ ರೈಲ್ವೆ ಹಳಿ ಬಳಿ ಕತ್ತು ಕೊಯ್ದು ಹತ್ಯೆಗೈದಿದ್ದ.

ನಗರದಲ್ಲಿ ಇಂದು

ಮಕ್ಕಳ ವಚನ ಮೇಳ: ವಚನ ವಿವೇಚನ, ವಚನ ರೂಪಕ ಪ್ರದರ್ಶನ: ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಮೈಸೂರು ಶೈಲಿಯ ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ: ಆರ್.ಜಿ. ಸಿಂಗ್, ಅತಿಥಿಗಳು: ಶ್ರೀಹರಿ, ರಾಮಕೃಷ್ಣ, ಚಂದ್ರಿಕಾ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಮಧ್ಯಾಹ್ನ 12.05

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

Terms and Conditions applied. *Approval of the loan is at the sole discretion of the financiers, and additional documentation may be required. *The interest rates, loan amount, down payment, tenure options and EMI are based on the financier's assessment of the applicant's credit profile. *Low EMI offers are applicable for select HMSI models as follows: ₹49/- per day for Shine100 DX ; ₹79/- per day for Shine125, SP125 & CB125 Hornet; ₹1999/- per month for Activa. *Some of the mentioned components of the scheme cannot be clubbed together. *The offers/features may be modified or withdrawn at any time without prior intimation. *Offer valid until 31st October 2025. **Instant Cashback up to ₹5000 is available on selected HMSI models for EMI transactions using HDFC Bank credit cards with a minimum transaction value of ₹40000. **An instant cashback of flat ₹2000 is applicable on a minimum full swipe transaction of ₹40000, and flat ₹3000 Instant cashback on a minimum full swipe transaction of ₹75002. **Instant Cashback up to ₹4000 is available on selected HMSI models for EMI transactions made using IDFC Bank credit cards with a minimum transaction value of ₹40000. **The offer is valid on credit card transactions processed through Pine Labs machines only and is applicable for one transaction per card/order during the offer period. **The Instant Cashback offers from HDFC Bank and IDFC Bank are valid until 31st October 2025. ^GST benefit is based on a reduction from 28% to 18% GST on the Ex-showroom price of NX 200. ^The actual savings may vary depending on the selected model and state. Product shown in the picture may vary from actual product available in the market. Accessories shown in the picture are not part of standard equipment.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122052, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 9880458863; **City Honda - ST. JOHNS ROAD:** 08025139199; **H.R.B.R:** 9845941305; **FRAZER TOWN:** 9480812353; **LALBAGH:** 9480812397; **Haiku Honda - DOMLUR:** 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 9343968419; **THANISANDRA (NAGAWARA):** 7353030333; **YELAHANKA:** 9343968407; **VIDYARANYAPURA:** 8150866333; **MALLESHWARAM:** 8971887792; **Raja Honda - KORAMANGALA:** 08067329000; **Prime Honda - VIJAYNAGAR:** : 080-23010300; **NAGARBHAVI:** 080-23010700; **KAMAKSHIPALYA:** 080-23019700; **Silicon Honda - RV ROAD:** 9844502222; **BANSHANKARI:** 9844502444; **R.R. NAGAR:** 9964388333; **MONOTYPE:** 7353744400; **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885; **HENNUR ROAD:** 9108989811; **Tansi Honda - HOODI:** 7259030091; **MARTHAHALLI:** 7259030100; **VARTHUR RD:** 8105597877; **GUNJUR:** 9606450642; **Turbo Honda - DODDABALLAPURA:** 7022620885; **NELAMANAGALA:** 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610; **CHINTAMANI:** 9606060620; **BAGEPALLI:** 9611596112; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Shantinath Honda - TUMKUR:** 9972433799; **KUNIGAL:** 08132-295609; **KUNIGAL ROAD:** 9844351599; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9964605093; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030; **KANAKAPURA:** 9606036053; **CHANNAPATNA:** 9606490034; **ART Honda - BIDADI:** 9945966771; **Springs Honda - KENGERI:** 9513771114; **Nideesh Honda - DEVANAHALLI:** 9108871999; **VIJAYAPURA:** 9108871999.

For Bulk/Institutional enquiries, please write us at: institutionalsales@honda.hmsi.in

ಸುಷ್ಮಾ ಮಹಾಬಲ

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

1. ಇಎಸ್‌ಎಸ್‌ಐ ಇಂಟಿಗ್ರೇಟೆಡ್ ಟೆಕ್ನಾಲಜೀಸ್ ಸಂಸ್ಥೆಯು ಟೆಕ್ನಾಲಜಿ ಬೆಂಚ್‌ಮಾರ್ಕಿಂಗ್ & ಐಪಿ ಆ್ಯನಲಿಸ್ಟ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಮನೆಯಿಂದಲೇ ಕೆಲಸ ಮಾಡಬಹುದು. ಎಲೆಕ್ಟ್ರಿಕಲ್ ಮಷೀನ್ಸ್, ಮೆಕ್ಯಾನಿಕಲ್ ಆ್ಯಂಡ್ ಎಲೆಕ್ಟ್ರಿಕಲ್ ಪ್ರಾಡಕ್ಟ್ ಡಿಸೈನ್, ಭೌತವಿಜ್ಞಾನ ಮತ್ತು ಪ್ರಾಂಪ್ಟ್ ಎಂಜಿನಿಯರಿಂಗ್‌ನ ಜ್ಞಾನ ಇರುವ ವಿದ್ಯಾರ್ಥಿಗಳು ನ. 14ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್: ₹25000–30,000. ಸಂಪರ್ಕ: https://shorturl.at/amxNK.
2. ಲುಸಿರಾ ಜುವೆಲರಿಯು ಇ–ಕಾಮರ್ಸ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಮನೆಯಿಂದಲೇ ಕೆಲಸ ಮಾಡಬಹುದು. ಸರ್ಚ್ ಎಂಜಿನ್ ಆಪ್ಟಿಮೈಸೇಷನ್‌ನಲ್ಲಿ (ಎಸ್‌ಇಒ) ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ನ. 12ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್: ₹10,000–15,000. ಸಂಪರ್ಕ: https://shorturl.at/Q8iHB.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

1. ಎಲ್‌ಐ–ಎಂಎಟಿ ಸಾಫ್ಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಡಿಜಿಟಲ್ ಮಾರ್ಕೆಟಿಂಗ್, ಗೂಗಲ್ ಆ್ಯನಲಿಟಿಕ್ಸ್, ಸರ್ಚ್ ಎಂಜಿನ್ ಮಾರ್ಕೆಟಿಂಗ್ (ಎಸ್‌ಇಎಂ), ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ನ. 3ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್: ₹10,000–15,000. ಸಂಪರ್ಕ: https://shorturl.at/0EFum.
2. ಎನ್‌ಲೈಟನ್ಡ್ ಥಾಟ್ ವರ್ಕ್ಸ್ ಸಂಸ್ಥೆಯು ಬಿಸಿನೆಸ್ ಡೆವಲಪ್‌ಮೆಂಟ್ (ಸೇಲ್ಸ್) ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಎ.ಐ ವಿಡಿಯೊ ಜನರೇಷನ್, ಕ್ಯಾನ್ವ, ಇಂಗ್ಲಿಷ್‌ನಲ್ಲಿ ಬರೆಯುವ ಸಾಮರ್ಥ್ಯ, ಹಿಂದಿಯಲ್ಲಿ ಮಾತನಾಡುವ ನೈಪುಣ್ಯ, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಮತ್ತು ವಿಡಿಯೊ ಎಡಿಟಿಂಗ್‌ನಲ್ಲಿ ಜ್ಞಾನವುಳ್ಳ ವಿದ್ಯಾರ್ಥಿಗಳು ನ. 5ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್: ₹15,000. ಸಂಪರ್ಕ: https://shorturl.at/6E1wZ.

ವಿದೇಶಿ ವಿ.ವಿ. ಸ್ವದೇಶಿ ಕ್ಯಾಂಪಸ್ ಹಲವು ಒಪ್ಪಂದ

ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವ ಆಕಾಂಕ್ಷೆ ಇದ್ದರೂ ನಾನಾ ಕಾರಣಗಳಿಂದ ಅದು ಸಾಧ್ಯವಾಗುತ್ತಿರುವುದಿಲ್ಲ. ಅಂತಹವರ ಬಯಕೆಯನ್ನು ಈಡೇರಿಸಲಿವೆ, ನಮ್ಮ ರಾಜ್ಯದಲ್ಲೇ ಆರಂಭವಾಗಲಿರುವ ಹಲವು ವಿದೇಶಿ ವಿಶ್ವವಿದ್ಯಾಲಯ ಕ್ಯಾಂಪಸ್‌ಗಳು

• ಚಂದ್ರಹಾಸ ಹಿರೇಮಳಲಿ

ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಬೇಕೆಂಬ ಹಂಬಲ ಬಹುತೇಕರಲ್ಲಿ ಇರುತ್ತದೆ. ಆದರೆ, ವಿದೇಶಕ್ಕೆ ತೆರಳಿ, ಬಯಸಿದ ಕೋರ್ಸ್‌ನಲ್ಲಿ ಪದವಿ, ಸ್ನಾತಕೋತ್ತರ ಪದವಿಗೆ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವುದು ಸುಲಭದ ಮಾತಲ್ಲ. ಪ್ರತಿಭೆಯ ಜತೆಗೆ ಕುಟುಂಬದ ಆರ್ಥಿಕ ಸ್ಥಿತಿಯೂ ಹೊಂದಿಕೆಯಾಗಬೇಕು.

ಇಂತಹ ವಿದ್ಯಾರ್ಥಿಗಳ ಕನಸನ್ನು ನನಸಾಗಿಸಲು ಅನುವಾಗುವಂತೆ ಹಲವು ವಿದ್ಯಾರ್ಥಿವೇತನ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ರೂಪಿಸಿದೆ. ಪದವಿ ವಿದ್ಯಾರ್ಥಿಗಳಿಗೆ ಬ್ರಿಟನ್ ವಿಶ್ವವಿದ್ಯಾಲಯಗಳಲ್ಲಿ ಕಲಿಯುವ ಅವಕಾಶ ಒದಗಿಸಲು ಬ್ರಿಟಿಷ್ ಕೌನ್ಸಿಲ್ ಜತೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಒಪ್ಪಂದ ಮಾಡಿಕೊಂಡಿದೆ. ಮೊದಲ ಕಂತಿನಲ್ಲಿ, ರಾಜ್ಯದ 30 ವಿದ್ಯಾರ್ಥಿಗಳು ಪೂರ್ವ ಲಂಡನ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಬಂದಿದ್ದಾರೆ. ಉನ್ನತ ಶಿಕ್ಷಣದಲ್ಲಿ ಹೆಣ್ಣುಮಕ್ಕಳಿಗೆ ಉತ್ತೇಜನ ನೀಡಲು ಚೆವನಿಂಗ್- ಕರ್ನಾಟಕ ಸ್ನಾತಕೋತ್ತರ ವಿದ್ಯಾರ್ಥಿವೇತನ ನಿಧಿ ಸ್ಥಾಪಿಸಲಾಗಿದೆ. ರಾಜ್ಯದ ಸರ್ಕಾರಿ ಕಾಲೇಜು ಮತ್ತು ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದ ಐವರು, ತಲಾ ₹40 ಲಕ್ಷ ಒಳಗೊಂಡ ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆ. ಬ್ರಿಟಿಷ್ ಹೈಕಮಿಷನ್ ಹಾಗೂ ರಾಜ್ಯ ಸರ್ಕಾರ ಈ ಹಣವನ್ನು ಸಮನಾಗಿ ಭರಿಸಲಿವೆ. ವಿದ್ಯಾರ್ಥಿನಿಯರು ಬ್ರಿಟನ್ನಿನ ತಮ್ಮ ಆಯ್ಕೆಯ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪಡೆಯಬಹುದು.

ಆದರೆ, ವಿದ್ಯಾರ್ಥಿವೇತನ, ಸಾಲಸೌಲಭ್ಯ, ಆರ್ಥಿಕ ನೆರವು ಪಡೆದರೂ ವಿದೇಶಗಳಿಗೆ ತೆರಳಿ ಅಧ್ಯಯನ ಮಾಡುವವರ ಸಂಖ್ಯೆ ತೀರಾ ವಿರಳ. ಇದನ್ನು ಮನಗಂಡ ಸರ್ಕಾರ, ಕರ್ನಾಟಕದಲ್ಲಿ ಶಾಖೆಗಳನ್ನು ತೆರೆಯುವಂತೆ ವಿದೇಶಗಳ ಹತ್ತುಹಲವು ವಿಶ್ವವಿದ್ಯಾಲಯಗಳನ್ನು ಆಹ್ವಾನಿಸಿದೆ. ಒಪ್ಪಂದ ಮಾಡಿಕೊಂಡಿದೆ. ವೋಲ್ವರ್‌ಹ್ಯಾಮ್ಟನ್ ವಿಶ್ವವಿದ್ಯಾಲಯವು ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಈಗಾಗಲೇ ಚಟುವಟಿಕೆ ಆರಂಭಿಸಿದೆ. ಬ್ರಿಟನ್‌ನ ಲ್ಯಾಂಕಾಸ್ಟರ್ ವಿಶ್ವವಿದ್ಯಾಲಯ ಬರುವ ಫೆಬ್ರುವರಿಯಿಂದ ಕಾರ್ಯಾರಂಭ ಮಾಡಲಿದೆ. ಲಿವರ್‌ಪೂಲ್, ಕೇಂಬ್ರಿಡ್ಜ್, ವೇಲ್ಸ್ ವಿಶ್ವವಿದ್ಯಾಲಯಗಳು, ಇಂಪೀರಿಯಲ್ ಕಾಲೇಜು ಸಹ ಒಪ್ಪಂದ ಮಾಡಿಕೊಂಡಿವೆ.

ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ರಜುತಾ ಚಾಜೆದ್

ಸಂಶೋಧನೆ ಮತ್ತು ಶೈಕ್ಷಣಿಕ ಸಹಯೋಗಕ್ಕೆ ಅಮೆರಿಕದ ನ್ಯೂಜೆರ್ಸಿ ಗವರ್ನರ್ ಫಿಲ್‌ಮರ್ಫಿ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಒಪ್ಪಂದ

ಬೆಂಗಳೂರಿನಲ್ಲಿ ಕ್ಯಾಂಪಸ್ ತೆರೆಯಲು 30 ವಿಶ್ವವಿದ್ಯಾಲಯಗಳು ಸಮ್ಮತಿಸಿವೆ. 9 ವಿಶ್ವವಿದ್ಯಾಲಯಗಳು ಈಗಾಗಲೇ ಒಪ್ಪಂದಕ್ಕೆ ಸಹಿ ಹಾಕಿವೆ. ಕರ್ನಾಟಕದತ್ತ ಮುಖ ಮಾಡಲು ಸೇಂಟ್‌ಜಾನ್ಸ್, ತೋಟಗಾರಿಕೆ ಕ್ಷೇತ್ರದ ವರ್ಲ್ಡ್ ಹಾರ್ಟಿ ಸೆಂಟರ್ ಆಸಕ್ತಿ ತೋರಿವೆ. ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ, ಬ್ಲೂಮ್ಸ್‌ಬರ್ಗ್ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಉನ್ನತ ಅಧಿಕಾರಿಗಳ ಜತೆಗೆ ಮಾತುಕತೆ ನಡೆದಿದೆ. ಬ್ರಿಟನ್‌ಗೆ ತೆರಳಿ ಒಂದು ವಾರ ಬೀಡುಬಿಟ್ಟಿದ್ದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್, ಹಲವು ವಿಶ್ವವಿದ್ಯಾಲಯಗಳ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೆಲವು ವಿಶ್ವವಿದ್ಯಾಲಯಗಳು ಈಗಾಗಲೇ ರಾಜ್ಯದ ಸರ್ಕಾರಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷಾ ಕೌಶಲ ತರಬೇತಿ, ಅಧ್ಯಾಪಕರು, ಅಧಿಕಾರಿಗಳಿಗೆ ಸಾಮರ್ಥ್ಯ ವೃದ್ಧಿ ತರಬೇತಿ ನೀಡುತ್ತಿವೆ. ವಿದೇಶಿ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟಕ್ಕೆ ಪೂರಕವಾಗಿ ರಾಜ್ಯದ ಪ್ರಾಧ್ಯಾಪಕರನ್ನು ಸಜ್ಜುಗೊಳಿಸಲು ಬ್ರಿಟಿಷ್ ಕೌನ್ಸಿಲ್ ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ. ಇಂಗ್ಲಿಷ್, ಕಂಪ್ಯೂಟರ್ ಸೈನ್ಸ್, ವ್ಯವಹಾರ ನಿರ್ವಹಣೆ, ಕ್ರೀಡಾ ವ್ಯವಸ್ಥಾಪನೆ, ಕ್ರೀಡಾ ಮನೋವಿಜ್ಞಾನ, ಭೂಗೋಳ, ಭೂ ಮಾಹಿತಿ ವಿಜ್ಞಾನ ಪದವಿ ಕೋರ್ಸ್‌ಗಳಂತಹ ವಿಭಾಗಗಳಲ್ಲಿ ವಿಚಾರ ವಿನಿಮಯ ನಡೆಯುತ್ತಿದೆ.


ಚೆವನಿಂಗ್ ವಿದ್ಯಾರ್ಥಿವೇತನದ ಫಲಾನುಭವಿ ರೋಶನಿ ಮೆನನ್

‘ಕರ್ನಾಟಕದ ಬಹಳಷ್ಟು ವಿದ್ಯಾರ್ಥಿಗಳು ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸಿದರೂ ಆರ್ಥಿಕ ಸಮಸ್ಯೆಯಿಂದ ಸಾಧ್ಯವಾಗುವುದಿಲ್ಲ. ರಾಜ್ಯದಲ್ಲೇ ವಿದೇಶಿ ವಿಶ್ವವಿದ್ಯಾಲಯಗಳ ಕ್ಯಾಂಪಸ್ ಆರಂಭಿಸುವುದರಿಂದ ಅವರ ಕನಸನ್ನು ನನಸು ಮಾಡಬಹುದು. ಇಲ್ಲಿ ಅತ್ಯುತ್ತಮ ಗುಣಮಟ್ಟದ ಹೊಸ ಸಂಶೋಧನೆಗಳನ್ನು ಉತ್ತೇಜಿಸಲಾಗುವುದು. ಈ ಮೂಲಕ ಶಿಕ್ಷಣದಲ್ಲಿ ಜಾಗತಿಕ ಗುಣಮಟ್ಟ ತರಲಾಗುವುದು. ಉನ್ನತ ಶಿಕ್ಷಣದಲ್ಲಿ ರಾಜ್ಯವು ದೇಶದಲ್ಲಿ 12ನೇ ಸ್ಥಾನದಲ್ಲಿದ್ದು, ಮೊದಲ ರಾಜ್ಯವಾಗಿಸಲು ಹಲವು ಯೋಜನೆಗಳನ್ನು ರೂಪಿಸಲಾಗುತ್ತಿದೆ’ ಎಂದಿದ್ದಾರೆ ಸಚಿವ ಸುಧಾಕರ್.

ಪ್ರಸ್ತುತ ರಾಜ್ಯದಲ್ಲಿ ಒಟ್ಟು 24 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಇವರಲ್ಲಿ 5 ಲಕ್ಷ ಮಂದಿ ಸರ್ಕಾರಿ ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ.

> **ರಾಜ್ಯದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೀಸಲಾತಿ ಸೌಲಭ್ಯ ಒದಗಿಸಲು ವಿದೇಶಿ ವಿಶ್ವವಿದ್ಯಾಲಯಗಳು ಹಾಗೂ ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಗಳು ಒಲವು ತೋರಿವೆ. ಇದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಮಕ್ಕಳೂ ವಿದೇಶಿ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗಲಿದೆ. ಕರ್ನಾಟಕದ ವಿದ್ಯಾರ್ಥಿಗಳು ವಿದೇಶಗಳಲ್ಲಿ ಉದ್ಯೋಗ ಪಡೆಯಲು ಅವಕಾಶ ಸಿಗಲಿದೆ**
>
> **ಡಾ. ಎಂ.ಸಿ.ಸುಧಾಕರ್**, ಉನ್ನತ ಶಿಕ್ಷಣ ಸಚಿವ

ಮಗಳು ಮೌನದ ಗೂಡು ಸೇರಿದ್ದಾಳೆ...

• ಮಗಳು ಅನ್ಯಮನಸ್ಕಳಾಗಿ ಇರುತ್ತಾಳೆ. ಏನು ಕೇಳಿದರೂ ಸರಿಯಾಗಿ ಮಾತನಾಡುವುದಿಲ್ಲ. ಅವಳ ನಡೆ ನನಗೆ ತೀವ್ರ ಭಯ ಹುಟ್ಟಿಸಿದೆ. ಸದಾ ಪಟಪಟನೆ ಮಾತನಾಡುತ್ತಿದ್ದ ಹುಡುಗಿ ಹರೆಯಕ್ಕೆ ಕಾಲಿಟ್ಟಾಗಿನಿಂದ ಹೀಗಾಗಿದ್ದಾಳೆ. ಅವಳನ್ನು ಸಹಜ ಸ್ಥಿತಿಗೆ ತರಲು ಯಾವ ರೀತಿಯ ಪ್ರಯತ್ನಗಳನ್ನು ಮಾಡಬೇಕು ತಿಳಿಸುತ್ತೀರಾ ಸರ್.

ಆಶಾ, ಬಾಳೇಸರ

ಸಮಾಧಾನ

ಡಾ. ಡಿ.ಎಂ. ಹೆಗಡೆ, ಸಮಾಲೋಚಕ

ಹದಿಹರೆಯಕ್ಕೆ ಕಾಲಿಟ್ಟಿರುವ ಆಕೆಯಲ್ಲಿ ವಯೋಸಹಜವಾದ ಮನೋದೈಹಿಕ ಬದಲಾವಣೆಗಳಾಗುತ್ತಿವೆ. ಅವೆಲ್ಲವೂ ಆಕೆಗೆ ಹೊಸವು. ಕೆಲವೊಂದು ಕಿರಿಕಿರಿಯನ್ನು ಉಂಟು ಮಾಡಿರಬಹುದು. ಇನ್ನು ಕೆಲವು ಅವಳಲ್ಲಿ ಆತಂಕ, ಭಯವನ್ನು ಹುಟ್ಟುಹಾಕಿರಬಹುದು. ಹಾರ್ಮೋನುಗಳ ಪ್ರಭಾವದಿಂದ ಆಕೆಯಲ್ಲಿ ಮೂಡ್ ಸ್ವಿಂಗ್ ಆಗುತ್ತಿರಬಹುದು. ಹೆಣ್ಣಾಗಿ ಬೆಳೆಯುವುದರಿಂದ ಜೀವನದಲ್ಲಿ ಬಹಳ ಕಷ್ಟಪಡಬೇಕಾಗುತ್ತದೆ ಎನ್ನುವಂಥದ್ದೇನಾದರೂ ಅವಳ ಮನಸ್ಸಿಗೆ ನಾಟಿರಬಹುದು. ಇವೆಲ್ಲವುಗಳನ್ನು ನೀವೂ ಅನುಭವಿಸಿದ್ದೀರಿ, ದಾಟಿ ಬಂದಿದ್ದೀರಿ. ಈಗ ಮರೆತಿರಬಹುದು!

ತನ್ನಲ್ಲಾಗುತ್ತಿರುವ ಬದಲಾವಣೆಗಳ ಬಗ್ಗೆ, ತನ್ನ ಮನಃಸ್ಥಿತಿಯ ಬಗ್ಗೆ ಮುಕ್ತವಾಗಿ ಮಾತನಾಡಲಿಕ್ಕೆ ಆಗದೆ ಅವಳಿಗೆ ಒಂಟಿತನ ಕಾಡುತ್ತಿರಬಹುದು. ಭಾವನೆಗಳ ತಾಕಲಾಟವನ್ನು ಮ್ಯಾನೇಜ್ ಮಾಡಲಿಕ್ಕಾಗದೆ ಆಕೆ ಮೌನದ ಗೂಡು ಸೇರಿರಬಹುದು. ಅವಳಲ್ಲಿ ನೀವು ಮುಕ್ತವಾಗಿ ಮಾತನಾಡಬೇಕು. ಹುಡುಗಿ ಹೆಣ್ಣಾಗುವ ದಿವ್ಯತೆಯ ಬಗ್ಗೆ, ಅದರ ಮಹತ್ವದ ಬಗ್ಗೆ ಅವಳಿಗೆ ಬಿಡಿಸಿ ಬಿಡಿಸಿ, ತಿಳಿಸಿ ಹೇಳಬೇಕು. ಅವಳ ಗೆಳತಿಯರನ್ನು ಗಮನಿಸಬೇಕು. ಆಕೆ ಯಾರೊಂದಿಗೆ ಆತ್ಮೀಯಳಾಗಿದ್ದಾಳೆ ಎನ್ನುವುದನ್ನು ಗಮನಿಸಬೇಕು. ಅವಳ ಸಹಾಯದಿಂದ ಇವಳ ಮನಸ್ಸಿನ ತಾಕಲಾಟವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬಹುದು. ಅವಳಲ್ಲಾದ ಬದಲಾವಣೆಗಳ ಬಗ್ಗೆ ಆಕೆಯ ಶಿಕ್ಷಕಿಯರಲ್ಲಿ ಒಬ್ಬರೊಂದಿಗೆ ನೀವು ಚರ್ಚಿಸಬಹುದು. ಅವರಿಂದ ಸೂಕ್ತವಾದ ಮಾರ್ಗದರ್ಶನವನ್ನು ಕೊಡಿಸಬಹುದು. ಆಕೆಗೆ ಶಾಲೆಯಲ್ಲಾಗಲೀ ಮನೆಯಲ್ಲಾಗಲೀ ಹೊರಗೆಲ್ಲಾಗಲೀ ಏನಾದರೂ ಅವಘಡಗಳಾಗಿವೆಯೇ ಎನ್ನುವುದನ್ನು ಸಮಾಧಾನದಿಂದ ತಿಳಿದುಕೊಳ್ಳಲು ಪ್ರಯತ್ನಿಸಿ. ಅವಳ ಮನಸ್ಸು ಗಾಸಿಯಾಗದಂತೆ ನೀವು ವ್ಯವಹರಿಸಬೇಕು. ಆಕೆಯ ಊಟೋಪಚಾರ, ನಿದ್ರೆಯ ಬಗ್ಗೆ ಗಮನಿಸಬೇಕು. ಅಗತ್ಯವಿರುವಷ್ಟು ನೀರು ಕುಡಿಯುವಂತೆ ನೋಡಿಕೊಳ್ಳಬೇಕು ಹಾಗೂ ಸಮತೋಲಿತ ಆಹಾರವನ್ನು ಕೊಡಬೇಕು. ಅವಳ ಸೋಷಿಯಲ್ ಮೀಡಿಯಾ ಅಕೌಂಟ್‌ಗಳ ಬಗ್ಗೆ, ಸ್ಕ್ರೀನ್‌ಟೈಮ್ ಬಗ್ಗೆ ಎಚ್ಚರಿಕೆ ವಹಿಸುವುದು ಒಳಿತು. ಮನೆಯ ಜನರಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ, ಮುಕ್ತತೆ ಹೆಚ್ಚಿದಷ್ಟೂ ಮಕ್ಕಳ ಬೆಳವಣಿಗೆ ಸಹಜವಾಗಿಯೂ ಸರಳವಾಗಿಯೂ ಇರಲಿಕ್ಕೆ ಸಹಾಯಕವಾಗುತ್ತದೆ.

ನಿಮ್ಮ ಇಷ್ಟೆಲ್ಲ ಪ್ರಯತ್ನದ ನಂತರವೂ ಅವಳ ವರ್ತನೆಯಲ್ಲಿ ಸಕಾರಾತ್ಮಕ ಬದಲಾವಣೆ ಕಾಣದಿದ್ದರೆ, ಸಮರ್ಥ ಮನೋವೈದ್ಯರನ್ನು ಸಂಪರ್ಕಿಸುವುದು ಸೂಕ್ತ.

ವಿದ್ಯಾರ್ಥಿ ವೇತನ ಕೈಪಿಡಿ

ಕೋಲ್ಗೇಟ್ ಕೀಪ್ ಇಂಡಿಯಾ ಸ್ಮೈಲಿಂಗ್ ಸ್ಕಾಲರ್‌ಷಿಪ್

ಕೋಲ್ಗೇಟ್- ಪಾಮೋಲಿವ್ (ಇಂಡಿಯಾ) ಲಿಮಿಟೆಡ್‌ನ ಒಂದು ಉಪಕ್ರಮ ಇದಾಗಿದೆ.

ಅರ್ಹತೆ: ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ (ಬಿಡಿಎಸ್–ಯಾವುದೇ ವರ್ಷ) ಅಥವಾ ಮಾಸ್ಟರ್ ಆಫ್ ಡೆಂಟಲ್ ಸರ್ಜರಿ (ಎಂಡಿಎಸ್) ಕೋರ್ಸ್‌ಗಳಿಗೆ ದಾಖಲಾಗಿರುವ ಭಾರತೀಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 12ನೇ ತರಗತಿಯಲ್ಲಿ ಕನಿಷ್ಠ ಶೇ 65ರಷ್ಟು ಅಂಕಗಳನ್ನು ಗಳಿಸಿರಬೇಕು. ಎಂಡಿಎಸ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವವರು ಬಿಡಿಎಸ್‌ನಲ್ಲಿ ಒಟ್ಟಾರೆ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಹೊಂದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹8 ಲಕ್ಷ ಮೀರಿರಬಾರದು.

ಆರ್ಥಿಕ ನೆರವು: ₹75,000

ಅರ್ಜಿ ಸಲ್ಲಿಸಲು ಕೊನೇ ದಿನ: 09-11-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/CKISSP7

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

24) 1892ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು ಯಾವುವು?

ಉತ್ತರ:– 1892ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು:– 1. ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ಹೆಚ್ಚುವರಿ ಸದಸ್ಯರ ಸಂಖ್ಯೆಯನ್ನು ಅಧಿಕಗೊಳಿಸಲಾಯಿತು.
2. ಶಾಸನ ಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಅಧಿಕಾರವನ್ನು ಹೆಚ್ಚಿಸಿ ಅವುಗಳಲ್ಲಿ ಬಜೆಟ್ ಬಗ್ಗೆ ಚರ್ಚಿಸುವ ಅಧಿಕಾರವನ್ನು ನೀಡಲಾಯಿತು.
3. ಆರು ದಿನಗಳ ಮುಂಚೆ ಮುನ್ಸೂಚನೆ ನೀಡಿ ಸಾರ್ವಜನಿಕ ಆಸಕ್ತಿಯ ವಿಷಯಗಳ ಬಗ್ಗೆ ಸರಕಾರವನ್ನು ಪ್ರಶ್ನಿಸುವ ಹಕ್ಕನ್ನು ನೀಡಲಾಯಿತು

25) 1909 ಭಾರತೀಯ ಪರಿಷತ್ ಕಾಯ್ದೆ ಕುರಿತು ಬರೆಯಿರಿ

ಉತ್ತರ:– ಈ ಕಾಯ್ದೆಯನ್ನು ‘ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ’ ಎಂತಲೂ ಕರೆಯುವರು. ಏಕೆಂದರೆ, ಲಾರ್ಡ್ ಮಿಂಟೋ ಭಾರತದ ವೈಸ್‌ರಾಯ್ ಆಗಿದ್ದರು. ಲಾರ್ಡ್ ಮಾರ್ಲೆ ಭಾರತದ ಸಕ್ರೆಟರಿ ಆಫ್ ಸ್ಟೇಟ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ಈ ಕಾಯ್ದೆಯನ್ನು ಬಳಸಿಕೊಂಡರು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ 60ಕ್ಕೆ ಹೆಚ್ಚಿಸಲಾಯಿತು.
2. ಪ್ರಾಂತ್ಯಗಳಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.
3. ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ನೀಡಲಾಯಿತು.
4. ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ “ಪ್ರತ್ಯೇಕ ಚುನಾವಣಾ ಮತಗಟ್ಟೆ” ವ್ಯವಸ್ಥೆಯನ್ನು ಜಾರಿಗೆ ತರಲಾಯಿತು

25) 1919 ಭಾರತೀಯ ಪರಿಷತ್ ಕಾಯ್ದೆ ಕುರಿತು ಬರೆಯಿರಿ

ಉತ್ತರ:– ಈ ಕಾಯ್ದೆಯನ್ನು ಮಾಂಟೆಗೋ–ಚೆಮ್ಸ್‌ಫರ್ಡ್ ಸುಧಾರಣಾ ಕಾಯ್ದೆ ಎಂತಲೂ ಕರೆಯುವರು. ಮೊದಲನೆಯ ಮಹಾಯುದ್ಧ (1914–1918)ದ ಸಂದರ್ಭದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೇಪಿಸಿದ ಹಿನ್ನಲೆಯಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಯಿತು. ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗೋ ಅವರು ಬ್ರಿಟನ್ನಿನ ಸಂಸತ್ತಿನಲ್ಲಿ ಆಗಸ್ಟ್ 1917ರಲ್ಲಿ ‘ಭಾರತೀಯರಿಗೆ ಹಂತ ಹಂತವಾಗಿ ಜವಾಬ್ದಾರಿ ಸರಕಾರವನ್ನು ನೀಡುವುದೇ ಬ್ರಿಟಿಷ್ ಸರಕಾರದ ಗುರಿ’ ಎಂದು ಮಾಡಿದ ಘೋಷಣೆಯ ಹಿನ್ನಲೆಯಲ್ಲಿ ಈ ಕಾಯ್ದೆ ರೂಪುಗೊಂಡಿತು. ಭಾರತದ ವೈಸರಾಯ್ ಆಗಿದ್ದ ಚೆಮ್ಸ್‌ಫರ್ಡ್ ಅವರೂ ರಾಜಕೀಯ ಸುಧಾರಣೆಗಳಿಗೆ ಧ್ವನಿಗೂಡಿಸಿದರು. ಪರಿಣಾಮವಾಗಿ 1919ರಲ್ಲಿ ಭಾರತೀಯ ಪರಿಷತ್ ಕಾಯ್ದೆ ಜಾರಿಗೆ ಬಂದಿತು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ (Bi-Cameral) ರಚನೆಗೆ ಅವಕಾಶ ನೀಡಲಾಯಿತು. ಅವುಗಳೆಂದರೆ, ಶಾಸಕಾಂಗ ಸಭೆ (ಕೆಳಮನೆ) ಮತ್ತು ರಾಜ್ಯಗಳ ಪರಿಷತ್ತು (ಮೇಲ್ಮನೆ) ರಚಿಸಲಾಯಿತು.
2. ಪ್ರಾಂತ್ಯಗಳಲ್ಲಿ “ದ್ವಿಸರಕಾರ” (Dyarchy) ಪದ್ಧತಿಗೆ ಅವಕಾಶ ನೀಡಲಾಯಿತು.
3. ಭಾರತಕ್ಕೆ ಒಬ್ಬ ಹೈಕಮಿಷನರ್‌ರನ್ನು ನೇಮಕ ಮಾಡಲಾಯಿತು.
4. ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.
5. ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟ್‌ನ್ನು ಬೇರ್ಪಡಿಸಲಾಯಿತು.
6. “ಪ್ರತ್ಯೇಕ ಚುನಾವಣಾ ಮತಗಟ್ಟೆ” ವ್ಯವಸ್ಥೆಯನ್ನು ಮುಸ್ಲಿಂ, ಸಿಖ್, ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್‌ರಿಗೆ ವಿಸ್ತರಿಸಲಾಯಿತು.

26) 1935ರ ಭಾರತ ಸರ್ಕಾರದ ಕಾಯ್ದೆ ಕುರಿತು ಬರೆಯಿರಿ

ಉತ್ತರ:– 1935ರ ಭಾರತ ಸರ್ಕಾರದ ಕಾಯ್ದೆ ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ. ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ. ಸ್ವತಂತ್ರ ಭಾರತದ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು. ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗದೇ ದೇಶಿಯ ಸಂಸ್ಥಾನಗಳಿಗೂ ಅನ್ವಯವಾಗುವ ಅಂಶಗಳನ್ನು ಒಳಗೊಂಡಿದ್ದಿತು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಬ್ರಿಟಿಷ್ ಪ್ರಾಂತ್ಯಗಳ, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
2. ಕೇಂದ್ರದಲ್ಲಿ “ದ್ವಿ ಸರಕಾರ”ವನ್ನು (Dyarchy) ಸ್ಥಾಪಿಸಲಾಯಿತು.
3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
4. ಪ್ರಾಂತ್ಯಗಳಲ್ಲಿ “ದ್ವಿ ಸರಕಾರ” ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
5. ಭಾರತದಲ್ಲಿ “ಫೆಡರಲ್ ಕೋರ್ಟ್” ಸ್ಥಾಪನೆಗೆ ಅವಕಾಶ ನೀಡಲಾಯಿತು.

ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.

1. ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯವನ್ನು ಸ್ಥಾಪಿಸಿದವನು ________ .
ಉತ್ತರ:– ವಾರನ್ ಹೇಸ್ಟಿಂಗ್
2. ಸೂಪರಿಡೆಂಟೆಂಟ್ ಆಫ್ ಪೊಲೀಸ್ ಹುದ್ದೆಯನ್ನು ಸೃಷ್ಟಿಸಿದವನು ________ .
ಉತ್ತರ:– ಲಾರ್ಡ್ ಕಾರ್ನ್ ವಾಲೀಸ್
3. ಖಾಯಂ ಜಮೀನ್ದಾರಿ ಪದ್ಧತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ________ ರಲ್ಲಿ ಜಾರಿಗೆ ತರಲಾಯಿತು.
ಉತ್ತರ:– 1789
4. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ ____
ಉತ್ತರ:– ರೈತವಾರಿ ಪದ್ದತಿ
5. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ________ .
ಉತ್ತರ:– ವಿಲಿಯಂ ಬೆಂಟಿಂಕ್
6. ರೆಗ್ಯುಲೇಟಿಂಗ್ ಕಾಯ್ದೆ________ರಲ್ಲಿ ಜಾರಿಗೆ ಬಂದಿತು.
ಉತ್ತರ:– 1773
7. ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ________
ಉತ್ತರ:– ಲಾರ್ಡ್ ಕ್ಯಾನಿಂಗ್
8. ಭಾರತದ ಸಂವಿಧಾನ ರಚನೆ ಪ್ರಮುಖ ಕಾಯ್ದೆ ________
ಉತ್ತರ;– 1935ರ ಭಾರತ ಸರ್ಕಾರದ ಕಾಯ್ದೆ
9. ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ________
ಉತ್ತರ:– ಲಾರ್ಡ್ ಕಾರ್ನ್‌ವಾಲೀಸ್

(ಮುಂದುವರಿಯುವುದು)

MATHS

Inverse trigonometric functions

8. Prove that
$$\tan^{-1}(-x)=-\tan^{-1}x,\ -\infty<x<\infty$$
Soln :– Let $\tan^{-1}(-x)=\theta$;
so that $\tan\theta=-x$
$\therefore -\tan\theta = x$
$\Rightarrow \tan(-\theta)=x$
(or) $-\theta=\tan^{-1}x$
$\therefore \theta=-\sin^{-1}x$;
Hence, $\tan^{-1}(-x)=-\tan^{-1}x$

9. Prove that
$$\cos^{-1}(-x)=\pi-\cos^{-1}x,\ -1\le x\le 1$$
Soln :– Let $\cos^{-1}(-x)=\theta$;
$\therefore \cos\theta=-x$
i.e., $-\cos\theta=x$
$\Rightarrow \cos(\pi-\theta)=x$
Hence, $\pi-\theta=\cos^{-1}x$
(or) $\theta=\pi-\cos^{-1}x$
$\therefore \cos^{-1}(-x)=\pi-\cos^{-1}x$

10. Show that $\operatorname{cosec}^{-1}x=\sin^{-1}\frac{1}{x}$
Soln :– Proof : take $\theta=\operatorname{cosec}^{-1}x$,
then $\operatorname{cosec}\theta=x$
$\therefore \sin\theta=\frac{1}{x}$ $\left(\because \sin\theta=\frac{1}{\operatorname{cosec}\theta}\right)$
$\Rightarrow \theta=\sin^{-1}\frac{1}{x}$;
Equating the two values of θ,
we get, $\operatorname{cosec}^{-1}x=\sin^{-1}\frac{1}{x}$

11. Show that $\sec^{-1}x=\cos^{-1}\frac{1}{x}$
Soln :– Proof : take $\theta=\sec^{-1}x$,
then $\sec\theta=x$
$\therefore \cos\theta=\frac{1}{x}$ $\left(\because \cos\theta=\frac{1}{\sec\theta}\right)$
$\therefore \theta=\cos^{-1}\frac{1}{x}$;
Equating the two values of θ,
we get, $\sec^{-1}x=\cos^{-1}\frac{1}{x}$

12. Show that $\cot^{-1}x=\tan^{-1}\frac{1}{x}$
Soln :– Proof : take $\theta=\cot^{-1}x$,
then $\cot\theta=x$
$\therefore \tan\theta=\frac{1}{x}$ $\left(\because \tan\theta=\frac{1}{\cot\theta}\right)$
$\therefore \theta=\tan^{-1}\frac{1}{x}$;
Equating the two values of θ,
we get, $\cot^{-1}x=\tan^{-1}\frac{1}{x}$

13. What is the value of $\sin^{-1}\left(-\frac{\sqrt{3}}{2}\right)$?
Soln :– $\sin^{-1}\left(-\frac{\sqrt{3}}{2}\right)=\sin^{-1}\left(\frac{\sqrt{3}}{2}\right)$
$=-\frac{\pi}{3}$
$(\because \sin^{-1}(-x)=-\sin^{-1}x)$

14. What is the value of $\operatorname{cosec}^{-1}(-1)$?
Soln :– $\operatorname{cosec}^{-1}(-1)=-\operatorname{cosec}^{-1}(1)$
$(\because \operatorname{cosec}^{-1}(-1)=-\operatorname{cosec}^{-1}1)$
$\Rightarrow -\frac{\pi}{2}$ $\left(\because \operatorname{cosec}\frac{\pi}{2}=1\right)$

15. Find the value of $\cos^{-1}(\cos 350^{0})$?
Soln :– Consider $\cos 350^{0}$
$\cos 350^{0}=\cos(360^{0}-10^{0})$
$=\cos 10^{0}$
$\therefore \cos^{-1}(\cos 350^{0})=\cos^{-1}(\cos 10^{0})$
$\Rightarrow \cos^{-1}(\cos 350^{0})=10^{0}$
$(\because 0\le 10^{0}\le 180^{0})$

16. Find the value of $\cos^{-1}(\sin 675^{0})$?
Soln :– Consider $\sin(675^{0})$
$\sin(675^{0})=\sin(360^{0}+315^{0})$
$=\sin(315^{0})=\sin(360^{0}-45^{0})$
$=-\sin 45^{0}=-\frac{1}{\sqrt{2}}$
$(\because \sin(360^{0}-\theta)=-\sin\theta)$

17. Find the value of $\sin^{-1}(\sin(-600^{0}))$?
Soln :– Consider $\sin(-600^{0})$
$\sin(-600^{0})=-\sin 600^{0}$
$=-\sin(360^{0}+240^{0})=-\sin 240^{0}$ 18.
$=\sin(180^{0}+60^{0})=\sin 60^{0}=\frac{\sqrt{3}}{2}$
$\sin^{-1}[\sin(-600^{0})]=\sin^{-1}\frac{\sqrt{3}}{2}=60^{0}$

18. Find the value of $\tan^{-1}(\tan 820^{0})$?
Soln:- Consider, $\tan 820^{0}$
$\tan 820^{0}=\tan\{2\times 360^{0}+100^{0}\}$
$=\tan 100^{0}=\tan(180^{0}-80^{0})$
$=-\tan 80^{0}=\tan(-80^{0})$
$\therefore \tan^{-1}(\tan 820^{0})=\tan^{-1}(\tan(-80^{0}))$
$=-80^{0}$

19. Show that $\tan^{-1}x+\cot^{-1}x=\frac{\pi}{2}$;
for $-\infty<x<\infty$

(Contd...)

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

13 ಗಂಟೆಗಳ ತಡೆರಹಿತ ಶಾಪಿಂಗ್
ಮಳಿಗೆಗಳು 9.30 AM - 10.30 PM ತೆರೆದಿರುತ್ತದೆ

EXCHANGE DHAMAKA
Upto ₹25,000
OFF ON EXCHANGE
OF OLD TELEVISIONS, AIR CONDITIONERS, HOME APPLIANCES, MOBILES & LAPTOPS.

CASH BACK BONANZA
Upto ₹50,000
ಕ್ಯಾಶ್ ಬ್ಯಾಕ್*

BIGGEST Deepavali SALE
UPTO 70% OFF

FINANCE BONANZA
Upto ₹15,000
ಕ್ಯಾಶ್ ಬ್ಯಾಕ್*

ಉಚಿತ*
FIRE-BOLTT
SMART CALLING WATCH WORTH ₹20000

HDFC BANK — We understand your world
10% INSTANT CASH BACK ON CC & DC EMI* MIN TXN ₹17,000 MAX CAP ₹3,000
*T&C

10% INSTANT DISCOUNT* SBI card
*Min. Trxn.: ₹20,000; Max. Discount: ₹3,000 per card; Valid only on EMI Trxns.; Validity: 27 Sep - 31 Oct 2025. T&C Apply.

UPTO 5% OFF INSTANT CASH BACK
DBS, YES BANK, HSBC, one card, scapia, kotak, Bank of Baroda Credit Card
MIN TXN ₹10,000 MAX CAP ₹7,500 *T&C

1 ಇ.ಎಮ್.ಐ ಉಚಿತ*
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
BAJAJ FINSERV, IDFC FIRST Bank

LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER | INDUCTION COOKER | STEAM IRON | KETTLE | DRY IRON

SAMSUNG 100 CLASS NEO QLED SMART TV 100QN80F — 20% CASH BACK — ಹಳೆಯ ಬೆಲೆ ₹6,46,490 ಹಬ್ಬದ ಬೆಲೆ ₹6,15,690

SONY 98 BRAVIA 4K ULTRA HD SMART MINI LED GOOGLE TV 98XR55A — 10% CASH BACK — ಹಳೆಯ ಬೆಲೆ ₹5,74,190 ಹಬ್ಬದ ಬೆಲೆ ₹5,53,190

Haier 98 QLED 144HZ GOOGLE TV WITH HANDS FREE VOICE CONTROL & LOCAL DIMMING 98S9QT — 25% CASH BACK — ಹಳೆಯ ಬೆಲೆ ₹2,79,990 ಹಬ್ಬದ ಬೆಲೆ ₹2,49,990
ಉಚಿತ: HAIER 43 4K UHD LED TV WORTH ₹52490

LG 75 4K ULTRA HD SMART LED NANOCELL TV 75NANO83A6A — 26% CASH BACK — ಹಳೆಯ ಬೆಲೆ ₹99,290 ಹಬ್ಬದ ಬೆಲೆ ₹94,590

NVY PRIDE OF INDIA — LOWEST PRICE CHALLENGE — 55 4K LED — 52% OFF — 10% CASH BACK — ಹಳೆಯ ಬೆಲೆ ₹29,500 ಹಬ್ಬದ ಬೆಲೆ ₹28,500

OPPO F31 — 10% CASH BACK — EFFECTIVE PRICE ₹19,170* (PRICE AFTER CASH BACK) — EMI ₹1,775 Onwards
ಉಚಿತ: BT NECKBAND WORTH ₹1649

xiaomi Redmi 15 — EFFECTIVE PRICE ₹14,999* (PRICE AFTER CASH BACK) — EMI ₹1,250 Onwards
ಉಚಿತ: BT NECKBAND WORTH ₹1649

vivo V60E/60 — 10% CASH BACK — EFFECTIVE PRICE ₹24,570* (PRICE AFTER CASH BACK) — EMI ₹2,275 Onwards
ಉಚಿತ: BT NECKBAND WORTH ₹1649

SAMSUNG A17 — FESTIVAL PRICE ₹17,999 — EMI ₹1,900 Onwards
MAGSAFE W/L POWER BANK WORTH ₹7999 @ ₹99

iPhone 17 — EFFECTIVE PRICE ₹76,900* (PRICE AFTER CASH BACK) — EMI ₹3,454 Onwards
ಉಚಿತ: COMPLETE DAMAGE PROTECTION 1YR + ZEB BT SPEAKER WORTH ₹12490

LG 14 PLACE SETTIN FREESTANDING DISHWASHER DFB532FP — 26% CASH BACK — OLD PRICE ₹50,990 ಹಬ್ಬದ ಬೆಲೆ ₹48,590

Haier 230 LITRES, SINGLE DOOR HARD TOP CONVERTIBLE DEEP FREEZER — 25% CASH BACK — OLD PRICE ₹27,490 ಹಬ್ಬದ ಬೆಲೆ ₹25,890

DELL 3530 — 13TH GEN i5, 16GB RAM, 512GB SSD, 15.6 FHD, WIN 11 MSO 24 — 10% CASH BACK — EMI ₹4,249 — ಹಬ್ಬದ ಬೆಲೆ ₹49,990
ಉಚಿತ: VIP 55CM TROLLEY BAG + COMPANY BAG PACK WORTH ₹9,999

hp VICTUS — RYZEN 5 5600H, 16GB, 512GB SSD, 4GB GFX, 15.6 FHD, WIN 11 — 10% CASH BACK — EMI ₹4,416 — ಹಬ್ಬದ ಬೆಲೆ ₹52,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999

Lenovo SLIM 3I — 13TH GEN i7, 16GB RAM, 512GB SSD, 15.6 WXGA, WIN 11 MSO 24 — 10% CASH BACK — EMI ₹5,333 — ಹಬ್ಬದ ಬೆಲೆ ₹63,990
ಉಚಿತ: VIP 55CM TROLLEY BAG + COMPANY BAG PACK WORTH ₹9,999

SAMSUNG 653 LTRS SIDE BY SIDE SMART REFRIGERATOR RS76CB81A333HL — 20% CASH BACK — ಹಳೆಯ ಬೆಲೆ ₹1,14,990 ಹಬ್ಬದ ಬೆಲೆ ₹1,09,590

Godrej 600LTRS TOUGHENED GLASS DOOR SIDE BY SIDE REFRIGERATOR — 10% CASH BACK — ಹಳೆಯ ಬೆಲೆ ₹73,490 ಹಬ್ಬದ ಬೆಲೆ ₹69,990

DAIKIN 2.02 TON 3 STAR, INVERTER SPLIT AC — 10% CASH BACK — ಹಳೆಯ ಬೆಲೆ ₹68,890 ಹಬ್ಬದ ಬೆಲೆ ₹65,590

BOSCH 9 KG FULLY AUTOMATIC FRONT LOAD WASHING MACHINE — 10% CASH BACK — ಹಳೆಯ ಬೆಲೆ ₹44,990 ಹಬ್ಬದ ಬೆಲೆ ₹43,290

IFB DEEPCLEAN® 6.5 KG TOP LOAD WASHING MACHINE — 10% CASH BACK — ಹಳೆಯ ಬೆಲೆ ₹19,490 ಹಬ್ಬದ ಬೆಲೆ ₹18,390

GEYSER UPTO 60% OFF — BAJAJ, Haier, V-GUARD, Racold, HAVELLS, KENSTAR, Symphony
MIXER GRINDER UPTO 63% OFF — Preethi, Panasonic, V-GUARD, Prestige, WONDERCHEF, BAJAJ, BOSCH, HAFELE, HAVELLS, Butterfly, Tefal
CHIMNEY UPTO 50% OFF — KAFF, FABER, HAFELE, Crompton, Prestige, BOSCH
WATER PURIFIER UPTO 53% OFF — EUREKA FORBES, LG, BRITA, Livpure, HAVELLS

Panasonic 23 L CONVECTION MICROWAVE — 10% CASH BACK — ಹಳೆಯ ಬೆಲೆ ₹15,210 ಹಬ್ಬದ ಬೆಲೆ ₹14,480

SONY SOUNDBAR HT-S60, 5.1CH, 1000W, DOLBY ATMOS — 10% CASH BACK — ಹಳೆಯ ಬೆಲೆ ₹49,990 ಹಬ್ಬದ ಬೆಲೆ ₹46,190

GIRIAS — THE CONSUMER DURABLE PEOPLE — Since 1971

ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633

STORE LOCATOR

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.

179 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA www.roundtableindia.org www.ladiescircleindia.org

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

'ಗೃಹಲಕ್ಷ್ಮಿ' ಹೆಸರಲ್ಲಿ ಸಹಕಾರ ಸಂಘಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಲಕ್ಷ್ಮೀ ವಿವಿಧೋದ್ದೇಶ ಸಹಕಾರ ಸಂಘ ಸ್ಥಾಪಿಸಿ, ನೋಂದಣಿ ಪೂರ್ವದಲ್ಲೇ ಷೇರು ಸಂಗ್ರಹಿಸಲು ಸಹಕಾರ ಇಲಾಖೆಯು ಅನುಮತಿ ನೀಡಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಸಹಕಾರ ಇಲಾಖೆ, ಸಹಕಾರ ಸಂಘಗಳ ನಿಬಂಧಕರಿಗೆ ಇದೇ 15ರಂದು ಪತ್ರ ಬರೆದಿದ್ದರು. ಗೃಹಲಕ್ಷ್ಮೀ ವಿವಿಧೋದ್ದೇಶ ಸಹಕಾರ ಸಂಘವನ್ನು ಸ್ಥಾಪಿಸುವ ಪ್ರಸ್ತಾವವನ್ನು ಪತ್ರದೊಂದಿಗೆ ಸಲ್ಲಿಸಿದ್ದರು. ಉದ್ದೇಶಿತ ಸಂಘದ ಕಾರ್ಯ ಸಾಧ್ಯತೆ ಪರಿಶೀಲಿಸಿದ್ದ ಬೆಂಗಳೂರು ವಲಯದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 'ಈ ಸಂಘವನ್ನು ಸ್ಥಾಪಿಸಬಹುದು. ಈಗಾಗಲೇ ಅಸ್ತಿತ್ವದಲ್ಲಿರುವ ಸಹಕಾರ ಸಂಘಗಳಿಗೆ, ಈ ಸಂಘದಿಂದ ಯಾವುದೇ ತೊಂದರೆ ಇರುವುದಿಲ್ಲ' ಎಂದು ವರದಿ ನೀಡಿದ್ದರು.

'ಸೌಲಭ್ಯ ಬಳಸಿಕೊಂಡವರಿಂದಲೇ ಟೀಕೆ'

ಉದ್ಯಮಿಗಳ ವಿರುದ್ಧ ಡಿಸಿಎಂ ಡಿ.ಕೆ.ಶಿವಕುಮಾರ್ ಪರೋಕ್ಷ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿನ ಸೌಲಭ್ಯಗಳನ್ನು ಬಳಸಿಕೊಂಡು ಉದ್ಯಮ ಆರಂಭಿಸಿ ದೊಡ್ಡ ಮಟ್ಟಕ್ಕೆ ಬೆಳೆದವರು ಈಗ ಬೆಂಗಳೂರಿನ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಯಮಿಗಳ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಕೋರಮಂಗಲದ ವೀರ ಯೋಧ ಉದ್ಯಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಬೆಂಗಳೂರು ನಡಿಗೆ' ಅಭಿಯಾನದಲ್ಲಿ 'ನಾಗರಿಕರೊಂದಿಗೆ ಸಂವಾದ' ನಡೆಸಿ, ಅಹವಾಲುಗಳನ್ನು ಆಲಿಸಿದ ಬಳಿಕ ಅವರು ಮಾತನಾಡಿದರು.

'ಬೆಂಗಳೂರಿಗೆ ಬಂದು ಬೆಳೆದಿರುವವರು ಹಿಂದೆ ಹೇಗಿದ್ದೆವು, ಈಗ ಹೇಗಿದ್ದೇವೆ ಎಂಬುದನ್ನು ಮರೆತು 'ಎಕ್ಸ್' ಖಾತೆಯಲ್ಲಿ ಟೀಕೆಗಳನ್ನು ಮಾಡುತ್ತಿದ್ದಾರೆ. ನಾವು ನಮ್ಮ ಮೂಲವನ್ನು ಮರೆಯಬಾರದು. ಮರೆತರೆ ಯಶಸ್ಸು ಸಿಗುವುದಿಲ್ಲ' ಎಂದರು.

'ನಗರದಾದ್ಯಂತ ಎಲ್ಲೆಲ್ಲಿ ರಸ್ತೆಗುಂಡಿ ಗಳಿವೆ ಎಂಬುದನ್ನು ಸಾರ್ವಜನಿಕರೇ ಫೋಟೊ ತೆಗೆದು ಅದನ್ನು ಮೊಬೈಲ್ ಆ್ಯಪ್ ಮೂಲಕ ಸರ್ಕಾರದ ಗಮನಕ್ಕೆ ತರುವ ವ್ಯವಸ್ಥೆಯನ್ನು ದೇಶದಲ್ಲಿಯೇ ಮೊದಲ ಬಾರಿಗೆ ನಾವು ರೂಪಿಸಿದ್ದೇವೆ. ನಾನು ಟೀಕೆ ಹಾಗೂ ವಿಮರ್ಶೆಗಳನ್ನು ಸ್ವಾಗತಿಸುತ್ತೇನೆ. ಟೀಕೆಗಳು ಇದ್ದಾಗಲೇ ಪ್ರಜಾಪ್ರಭುತ್ವಕ್ಕೆ ಹೆಚ್ಚು ಮೌಲ್ಯ ಇರುತ್ತದೆ. ಆದರೆ ಕೆಲವರು ಅತಿರೇಕಕ್ಕೆ ಹೋಗಿ ಟೀಕೆ ಮಾಡುತ್ತಿದ್ದಾರೆ. ಅಂಥವರ ಟೀಕೆ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದರು.

ಕೋರಮಂಗಲದಲ್ಲಿ ಡಿ.ಕೆ. ಶಿವಕುಮಾರ್ ನಡೆಸಿದ 'ಬೆಂಗಳೂರು ನಡಿಗೆ' ಅಭಿಯಾನದಲ್ಲಿ ಭಾರಿ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಂಡಿದ್ದರು.

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಯಿತು. ಇತಿಹಾಸ ಗಮನಿಸಿದರೆ ಅಭಿವೃದ್ಧಿಗಾಗಿ ನಾವು ಕೈಗೊಂಡಷ್ಟು ತೀರ್ಮಾನಗಳನ್ನು ಯಾರೂ ಕೈಗೊಂಡಿಲ್ಲ. ನಾವು ಮಾಡಿದ ಕೆಲಸಗಳ ಬಗ್ಗೆ ಸಾರ್ವಜನಿಕರಿಗೆ, ವಿರೋಧ ಪಕ್ಷದವರಿಗೆ ತಿಳಿದಿದೆ. ಇಡೀ ದೇಶದಲ್ಲಿ ಸಮಸ್ಯೆಯಿದೆ. ಅವರೆಲ್ಲ ಮಾಧ್ಯಮಗಳನ್ನು ನಿಯಂತ್ರಣ ಮಾಡುತ್ತಿದ್ದಾರೆ. ನಾವು ಮುಕ್ತವಾಗಿ ಬಿಟ್ಟಿದ್ದೇವೆ. ದೆಹಲಿ, ಮುಂಬೈ ಸೇರಿದಂತೆ ಎಲ್ಲಿಗೆ ಬೇಕಾದರೂ ಕರೆದುಕೊಂಡು ಹೋಗಿ ರಸ್ತೆಗಳ ಸಮಸ್ಯೆಗಳನ್ನು ನಾವೂ ತೋರಿಸುತ್ತೇವೆ' ಎಂದು ಹೇಳಿದರು.

'ನಗರದಲ್ಲಿ ನಿತ್ಯ ಮೂರು ಸಾವಿರ ವಾಹನಗಳು ನೋಂದಣಿಯಾಗುತ್ತಿವೆ. ಜನಸಂಖ್ಯೆ 1.40 ಕೋಟಿ ಮುಟ್ಟಿದೆ. 70 ಲಕ್ಷ ಮಂದಿ ಪ್ರತಿದಿನ ಹೊರಗಿನಿಂದ ಬಂದು ಹೋಗುತ್ತಿದ್ದಾರೆ. ಉದ್ಯೋಗ, ಶಿಕ್ಷಣ, ವಹಿವಾಟು, ಉದ್ದಿಮೆ ಹೀಗೆ ಅನೇಕ ಕೆಲಸಗಳಿಗಾಗಿ ಬೆಂಗಳೂರನ್ನು ಅವಲಂಬಿಸಿದ್ದಾರೆ' ಎಂದರು.

ಅಹವಾಲು ಸಲ್ಲಿಸಿದ 180 ಜನ

'ಬೆಂಗಳೂರು ನಡಿಗೆ' ವೇಳೆ ಭಾನುವಾರ 180 ಜನರು ತಮ್ಮ ಅಹವಾಲುಗಳನ್ನು ಸಲ್ಲಿಸಿದ್ದಾರೆ. ಶಾಂತಿನಗರ ಹೌಸಿಂಗ್ ಸೊಸೈಟಿ, ಸ್ಯಾನಿಟರಿ ಲೈನ್, ಮಳೆನೀರು ಪ್ರವಾಹದಿಂದ ತೊಂದರೆಗೆ ಒಳಗಾದ ಪ್ರದೇಶಗಳ ಸಮಸ್ಯೆಗಳು, ಕೋರಮಂಗಲ ಮೆಟ್ರೊ ಮಾರ್ಗ, ವಿಮಾನ ನಿಲ್ದಾಣಕ್ಕೆ ನೇರ ಬಸ್ ವ್ಯವಸ್ಥೆ, ಎಸ್‌ಟಿಪಿ ಅಳವಡಿಕೆ, ಬೆಳ್ಳಂದೂರು ಕೆರೆ ಸಮಸ್ಯೆ, ಪಾದಚಾರಿ ಮಾರ್ಗ, ಸಿ.ಎ ನಿವೇಶನ, ಸಸಿ ನೆಡುವಿಕೆ ಹೀಗೆ ಹಲವಾರು ವಿಚಾರಗಳ ಬಗ್ಗೆ ನಾಗರಿಕರು ಗಮನ ಸೆಳೆದಿದ್ದಾರೆ' ಎಂದು ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಅಧಿಕಾರಿಗಳು ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಕ್ಷಯರೋಗ ನಿವಾರಣಾ ಸಂಸ್ಥೆ ವಿಲೀನ

ಬೆಂಗಳೂರು: ಕರ್ನಾಟಕ ರಾಜ್ಯ ಕ್ಷಯರೋಗ ನಿವಾರಣಾ ಸಂಸ್ಥೆಯು ಸಮರ್ಪಕವಾಗಿ ಕಾರ್ಯಾಚರಣೆ ನಡೆಸದ ಕಾರಣ, ಆರೋಗ್ಯ ಇಲಾಖೆಯ ಕ್ಷಯರೋಗ ವಿಭಾಗದಲ್ಲಿ ವಿಲೀನ ಮಾಡಿ ಆದೇಶ ಹೊರಡಿಸಲಾಗಿದೆ.

2024ರ ಡಿಸೆಂಬರ್‌ನಲ್ಲಿ ನಡೆದ ಸಂಸ್ಥೆಯ ವಿಶೇಷ ಸರ್ವಸದಸ್ಯರ ಸಭೆಯಲ್ಲಿಯೇ ವಿಲೀನಗೊಳಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿತ್ತು. ಅದರಂತೆ ವಿಲೀನ ಮಾಡಲಾಗಿದ್ದು, ಸಂಸ್ಥೆಯ ಆಸ್ತಿ, ಹೊಣೆಗಾರಿಕೆ ಮತ್ತು ಕೆಲಸಗಳನ್ನು ಇಲಾಖೆಯ ಕ್ಷಯರೋಗ ವಿಭಾಗ ನಿರ್ವಹಿಸಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಘೋಷಾ ಆಸ್ಪತ್ರೆಯ ಹಿಂಭಾಗದಲ್ಲಿ 40x60 ಚದರ ಅಡಿ ನಿವೇಶನದಲ್ಲಿ ಸಂಸ್ಥೆಯ ಕಟ್ಟಡವಿದೆ. ಎದೆ ಮತ್ತು ಶ್ವಾಸಕೋಶದ ಆರೋಗ್ಯದ ಮೇಲೆ ಗಮನಹರಿಸುವ ಆರೋಗ್ಯ ಸೌಲಭ್ಯಕ್ಕೆ ಈ ಕಟ್ಟಡವನ್ನು ಉಳಿಸಿಕೊಂಡು, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲು ಕ್ರಮಕೈಗೊಳ್ಳಬೇಕು ಎಂದು ಹೇಳಲಾಗಿದೆ. ಸಂಸ್ಥೆಯು ಸುಮಾರು ₹98 ಲಕ್ಷ ಸ್ಥಿರ ಠೇವಣಿ ಮೊತ್ತವನ್ನು ಹೊಂದಿದ್ದು, ಅದನ್ನು ಬಾಕಿ ವೇತನ ಮತ್ತು ಪಿಂಚಣಿ ಪಾವತಿ, ಕಟ್ಟಡದ ನವೀಕರಣ ಹಾಗೂ ಉಪಕರಣಗಳ ಪೂರೈಕೆಗೆ ಬಳಸಿಕೊಳ್ಳಬಹುದು ಎಂದು ತಿಳಿಸಲಾಗಿದೆ.

'ಪಾಲಿಕೆ ಚುನಾವಣೆಗೆ ಸಿದ್ಧರಾಗಿ'

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಬರುವ ನಗರ ಪಾಲಿಕೆಗಳ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಈಗಲೇ ಸಿದ್ಧರಾಗಿ' ಎಂದು ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

'ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಮತ ಕಳವು ನಡೆಸುತ್ತಿದೆ' ಎಂದು ಆರೋಪಿಸಿ ಕೆಪಿಸಿಸಿ ವತಿಯಿಂದ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ವಿಧಾನಸಭೆ ಚುನಾವಣೆ ವೇಳೆ ಕೊಟ್ಟ ಭರವಸೆಯಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದ್ದೇವೆ. ಗ್ಯಾರಂಟಿಯಿಂದ ರಾಜ್ಯದ ಜನತೆ ನೆಮ್ಮದಿಯ ಬದುಕು ಕಟ್ಟಿಕೊಂಡಿದ್ದಾರೆ. ಜನವರಿ ತಿಂಗಳಲ್ಲಿ ನಡೆಯುವ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಗ್ಯಾರಂಟಿ ಯೋಜನೆಗಳೇ ಶ್ರೀರಕ್ಷೆ ಆಗಲಿದೆ' ಎಂದರು. 'ಕಾರ್ಯಕರ್ತರು ಮನೆ ಮನೆಗೆ ತೆರಳಿ ರಾಜ್ಯ ಸರ್ಕಾರದ ಸಾಧನೆಗಳಿಗೆ ಪ್ರಚಾರ ನೀಡಬೇಕು. ಅಲ್ಲದೆ, ಬೆಂಗಳೂರು ನಗರದಲ್ಲಿ ಕೈಗೊಂಡಿರುವ ಪ್ರಮುಖ ಯೋಜನೆಗಳ ಕುರಿತು ಜನರಿಗೆ ಮಾಹಿತಿ ನೀಡಬೇಕು' ಎಂದೂ ಅವರು ಮನವಿ ಮಾಡಿದರು.

'ಕೇಂದ್ರದ ಬಿಜೆಪಿ ಸರ್ಕಾರದ 11 ವರ್ಷಗಳ ಆಡಳಿತದಲ್ಲಿ ಬೆಲೆ ಏರಿಕೆ, ನಿರುದ್ಯೋಗದಿಂದ ಜನರು ಭ್ರಮನಿರಸನರಾಗಿದ್ದಾರೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಬರಬೇಕಾದ ಅನುದಾನದಲ್ಲಿ ತಾರತಮ್ಯ ಮಾಡುವ ಮೂಲಕ ಮಲತಾಯಿ ಧೋರಣೆ ಅನುಸರಿಸುತ್ತಿದೆ' ಎಂದೂ ದೂರಿದರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಕೃಷ್ಣಪ್ಪ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ, ಮಾಜಿ ಮೇಯರ್ ಹುಚ್ಚಪ್ಪ, ಪಕ್ಷದ ಮುಖಂಡ ಕೇಶವಮೂರ್ತಿ, ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಂಜುನಾಥ್ ಗೌಡ ಮತ್ತಿತರರಿದ್ದರು.

ನಗರದೆಲ್ಲೆಡೆ ದೀಪಾವಳಿ ಸಂಭ್ರಮ: ಖರೀದಿ ಜೋರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಲು ನಗರದ ಮಾರುಕಟ್ಟೆಗಳಲ್ಲಿ ಭಾನುವಾರ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು. ಬೆಳಕಿನ ಹಬ್ಬದ ಮೆರುಗು ಹೆಚ್ಚಿಸುವ ಹೂವು, ಹಣ್ಣು, ಹಣತೆ, ಅಲಂಕಾರಿಕ ವಸ್ತುಗಳ ಖರೀದಿಗೆ ಜನ ಮಳಿಗೆಗಳಲ್ಲಿ ಮುಗಿಬಿದ್ದಿದ್ದರು.

ಮಾರುಕಟ್ಟೆಗಳಲ್ಲಿ ಮಣ್ಣಿನ ಹಣತೆಗಳನ್ನು ರಸ್ತೆ ಬದಿಗಳಲ್ಲೇ ರಾಶಿ ಹಾಕಲಾಗಿದೆ. ತರಹೇವಾರಿ ವಿನ್ಯಾಸದ ಹಣತೆಗಳು ಜನರನ್ನು ಆಕರ್ಷಿಸುತ್ತಿದ್ದವು. ದೀಪವೊಂದರ ಬೆಲೆ ₹5ರಿಂದ ₹300ವರೆಗೂ ಇದೆ.

ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ, ಮಲ್ಲೇಶ್ವರ ಮಾರುಕಟ್ಟೆ ಪ್ರದೇಶಗಳು ಜನಜಂಗುಳಿಯಿಂದ ಕೂಡಿದ್ದವು. ತರಕಾರಿ, ದಿನಸಿ ಮತ್ತು ಪೂಜೆಗೆ ಬೇಕಾಗುವ ಬೂದುಗುಂಬಳ, ಬಾಳೆಕಂದು, ವೀಳ್ಯದೆಲೆ, ತೆಂಗಿನಕಾಯಿ ಖರೀದಿ ಜೋರಾಗಿತ್ತು. ನಗರದ ವಿವಿಧ ಭಾಗಗಳಲ್ಲಿ ಹೂವು ಹಾಗೂ ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವ ಕಿರು ಮಾರುಕಟ್ಟೆಗಳು ತಲೆಎತ್ತಿವೆ.

ಹಬ್ಬದ ಕಾರಣ ಹೂವಿನ ದರ ಏರಿಕೆ ಕಂಡಿದ್ದು, ಪ್ರತಿ ಕೆ.ಜಿ. ಕನಕಾಂಬರ ದರ ₹1,600, ಮಲ್ಲಿಗೆ ₹1,500, ಚೆಂಡು, ಸೇವಂತಿಗೆ ₹200, ಗುಲಾಬಿ ₹240 ಮತ್ತು ಸುಗಂಧರಾಜ ₹120 ಇತ್ತು. 'ದೀಪಾವಳಿಗೆ ಹೆಚ್ಚು ಖರೀದಿಯಾಗುವುದು ಸೇವಂತಿಗೆ ಹಾಗೂ ಚೆಂಡು ಹೂ. ಈ ಹೂಗಳ ಬೆಲೆ ಅಷ್ಟೇನೂ ಏರಿಕೆಯಾಗಿಲ್ಲ. ಉಳಿದ ಹೂಗಳ ದರ ಎಂದಿನಂತೆ ಸ್ವಲ್ಪ ಹೆಚ್ಚಾಗಿದೆ. ಆದರೆ, ವರಮಹಾಲಕ್ಷ್ಮಿ ಮತ್ತು ದಸರಾ ಹಬ್ಬಗಳಲ್ಲಿ ಇದ್ದ ಹೂವಿನ ಬೇಡಿಕೆ ಈಗಿಲ್ಲ' ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕರಾದ ಮಂಜುನಾಥ್ ಮತ್ತು ರಮೇಶ್ ತಿಳಿಸಿದರು.

ಪೂಜಾ ಸಾಮಗ್ರಿಗಳ ಖರೀದಿ ಭರಾಟೆ: ದೀಪಾವಳಿಯನ್ನು ವಿವಿಧ ಸಮುದಾಯದವರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಆಚರಿಸುತ್ತಾರೆ. ಬಹುತೇಕರು ಹಿಂದಿನಿಂದಲೂ ಈ ಹಬ್ಬಕ್ಕೆ ನೋಮುವ ಸಂಪ್ರದಾಯ ಉಳಿಸಿಕೊಂಡಿದ್ದಾರೆ. ಇದಕ್ಕೆಂದೇ ಕೈಗೆ ನೋಮುದಾರ ಕಟ್ಟಿಕೊಂಡು ಆಚರಣೆಯಲ್ಲಿ ತೊಡಗುತ್ತಾರೆ. ಪೂಜೆಯ ವೇಳೆ ನೋಮುದಾರ, ಅರಿಶಿನ-ಕುಂಕುಮ, ಅಡಿಕೆ, ವೀಳ್ಯದ ಎಲೆಗಳನ್ನು ಬಾಗಿನ ರೂಪದಲ್ಲಿ ಪ್ರಧಾನವಾಗಿ ಇಡುತ್ತಾರೆ. ಹಾಗಾಗಿ, ಪೂಜಾ ಸಾಮಗ್ರಿಗಳ ಮಳಿಗೆಗಳ ಬಳಿಯೂ ಜನರ ದಂಡು ಬೀಡುಬಿಟ್ಟಿತ್ತು.

ಹಬ್ಬದ ಅಂಗವಾಗಿ ಕೆ. ಆರ್‌. ಮಾರುಕಟ್ಟೆಯಲ್ಲಿ ಜನರು ಹೂ ಹಣ್ಣು, ತರಕಾರಿ ಖರೀದಿಸಿದರು ಪ್ರಜಾವಾಣಿ ಚಿತ್ರ

ಹೂವುಗಳ ದರ ಪ್ರತಿ ಕೆ.ಜಿ.ಗೆ (₹ಗಳಲ್ಲಿ)

ಹೂ	ಕಳೆದ ವಾರ	ಈ ವಾರ
ಕನಕಾಂಬರ	600	1,600
ಮಲ್ಲಿಗೆ	400	1,500
ಗುಲಾಬಿ	150	240
ಸೇವಂತಿಗೆ	100	200
ಸುಗಂಧರಾಜ	100	120
ಚೆಂಡು ಹೂ	60	100

ಹಣ್ಣುಗಳ ದರ ಪ್ರತಿ ಕೆ.ಜಿಗೆ

ಸೇಬು	120	160
ದಾಳಿಂಬೆ	80	130
ಏಲಕ್ಕಿ ಬಾಳೆ	60	80
ಸಪೋಟ	80	120

ತರಕಾರಿ ದರಗಳು ಪ್ರತಿ ಕೆಜಿಗೆ

ಕ್ಯಾರೆಟ್	60	70
ಕ್ಯಾಪ್ಸಿಕಮ್	40	60
ಈರುಳ್ಳಿ	20	20
ಬೀನ್ಸ್	50	60
ಟೊಮೆಟೊ	20	20
ಆಲೂಗಡ್ಡೆ	25	30
ಹೀರೇಕಾಯಿ	50	60
ಚವಳಿಕಾಯಿ	40	50
ಮೆಣಸಿನಕಾಯಿ	70	80
ಕುಂಬಳಕಾಯಿ	30	40
ಬೆಳ್ಳುಳ್ಳಿ	100	120

ಪ್ರತಿ ಕಟ್ಟಿಗೆ

ಕೊತ್ತಂಬರಿ	20	20
ಪಾಲಕ್	10	20
ಮೆಂತ್ಯ	20	20
ಪುದೀನ	10	20
ಬಾಳೆಕಂಬ ಜೋಡಿಗೆ (ದೊಡ್ಡ ಗಾತ್ರದ್ದು)		100
ಮಾವಿನ ಎಲೆಯ ಕಟ್ಟು		30
5 ತೆಂಗಿನಕಾಯಿಗೆ		₹200

ಕಥಾ–ಕವನ ಸಂಕಲನ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಹೊತ್ತಿಗೆ' ಟ್ರಸ್ಟ್ 2026ನೇ ಸಾಲಿನ 'ಈ ಹೊತ್ತಿಗೆ ಪ್ರಶಸ್ತಿ'ಗೆ ಕನ್ನಡದ ಅಪ್ರಕಟಿತ ಕಥಾ ಸಂಕಲನ ಮತ್ತು ಕವನ ಸಂಕಲನಗಳನ್ನು ಆಹ್ವಾನಿಸಿದೆ. ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಕಥಾ ಸಂಕಲನವು 8 ರಿಂದ 10 ಕಥೆಗಳನ್ನು, ಕವನ ಸಂಕಲನವು 35ರಿಂದ 40 ಕವನಗಳನ್ನು ಒಳಗೊಂಡಿರಬೇಕು ಎಂದು ಟ್ರಸ್ಟ್‌ನ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ ತಿಳಿಸಿದ್ದಾರೆ.

ಅಪ್ರಕಟಿತ ಸಂಕಲನಗಳನ್ನು ನ.20ರೊಳಗೆ 'ಈ ಹೊತ್ತಿಗೆ', #65, ಮುಗುಳ್ನಗೆ, 3ನೇ ಅಡ್ಡ ರಸ್ತೆ, ಪಿ.ಎನ್.ಬಿ. ನಗರ, ಕೋಣನಕುಂಟೆ, ಬೆಂಗಳೂರು–560062 ಈ ವಿಳಾಸಕ್ಕೆ ಕಳುಹಿಸಬೇಕು **ಸಂಪರ್ಕಕ್ಕೆ:** 9611782621

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING
Sites
Jigani
KHB Sites in Surya City Near Jigani STRRA & BMRDA APPROVED PLOTS Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) Call : 74115 54412

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

TOURS & TRAVEL
Travel
SRILANKA TOUR, WONDERFUL ONE WEEK, IMPORTANT PLACES INCLUDED. BEST ARRANGEMENTS. LIMITED SEATS. GANESH SHENOY 8310028157

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

BUSINESS
Business to Business
Business
WE BUY RUNNING/ Sick Industries, Industrial Metal Scraps,Copper, Aluminium, Building Dismantle/ Demolition,Immediate Payment. Contact Verna Metals, Barton Centre, MG Road. 9620253180.

PROPERY COLLATERALS/ Joint Ventures/ Schools/ Colleges/ Hospitals/ Takeovers/ Selling/ Buying/ New Ideas. Dr. Swamy Naidu (Vamshadhara Projects & Serivces).... 9342247637.

PERSONAL
Change of Name
CHANGE OF NAME
We, Mohan Kumar R S/o Ramakrishna aged 36 years and Ranjitha C W/o Mohan Kumar R aged 29 years residing at No.13,Behind Gopi School,Kamakshipalya, Meenakshi Nagar, Basaveshwaranagar, Bangalore-560079, declare that we are changing our Son's name from Hithan M Gowda to Hevanth.M. vide affidavit dated 08/10/2025 before notary Ratna.N, Bengaluru.

I RASHMI Jovin Chandwani aged about 32 years, W/o. Jovin Gerard Joy residing at No. 2/1, 2nd Cross, KSR Main Road, Horamavu, Bangalore-560043, have changed my name from Rashmi. N. Chandwani to RASHMI JOVIN CHANDWANI for all future purposes and documents vide affidavit dated 17/10/2025 before Notary G.B. Turamari Bangalore

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ'

ಕೆಂಗೇರಿ ಸಮೀಪದ ಮೈಲಸಂದ್ರ ಬಿಡಿಎ ಅಪಾರ್ಟ್‌ಮೆಂಟ್‌ನ ಬೆಸ್ಕಾಂ ಕಚೇರಿಯ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಬಿದ್ದಿದೆ. ಪ್ಲಾಸ್ಟಿಕ್ ಚೀಲಗಳು, ಹಳೆಯ ಬಟ್ಟೆಗಳನ್ನು ಇಲ್ಲಿ ಸುರಿಯಲಾಗಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳೀಯರು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಪಾಲಿಕೆ ಸಿಬ್ಬಂದಿ ಈ ತ್ಯಾಜ್ಯದ ರಾಶಿಯನ್ನು ವಿಲೇವಾರಿ ಮಾಡುತ್ತಿಲ್ಲ. ಈ ಬಗ್ಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಪ್ರಿಯಾಂಕಾ, ಮೈಲಸಂದ್ರ ಕೆಂಗೇರಿ

'ರಸ್ತೆ ದುರಸ್ತಿಗೆ ಆಗ್ರಹ'

ಇಸ್ರೊ ಬಡಾವಣೆಯ ವಿಠ್ಠಲ ವ್ಯಾಲಿಯ ಮೂರನೇ ಕ್ರಾಸ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಹದಗೆಟ್ಟು ಹೋಗಿದ್ದು, ವಾಹನ ಸಂಚಾರವೇ ದುಸ್ತರವಾಗಿದೆ. ಈ ರಸ್ತೆಗೆ ಹಾಕಿದ ಡಾಂಬರು ಕಿತ್ತು ಹೋಗಿ ವರ್ಷಗಳೇ ಕಳೆದಿದೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆ ಆಗುತ್ತಿದೆ. ಮಹಿಳೆಯರು, ವೃದ್ಧರು ಈ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಮುಕುಂದ, ವಿಠ್ಠಲ ವ್ಯಾಲಿ

ಅಹವಾಲಿಗೆ ಸ್ಪಂದನೆ

ಹೆಬ್ಬಾಳದ ಗುಂಡಪ್ಪ ರೆಡ್ಡಿ ಬಡಾವಣೆಯ ಒಂದನೇ ಕ್ರಾಸ್‌ನ ಪಾದಚಾರಿ ಮಾರ್ಗದ ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಪಾಲಿಕೆ ಸಿಬ್ಬಂದಿ ಸರಿಪಡಿಸಿದ್ದಾರೆ.

'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಅಕ್ಟೋಬರ್ 13ರಂದು 'ಪಾದಚಾರಿ ಮಾರ್ಗದ ಕಾಂಕ್ರೀಟ್ ಸ್ಲ್ಯಾಬ್ ಕುಸಿತ' ಶೀರ್ಷಿಕೆ ಅಡಿಯಲ್ಲಿ ಅಹವಾಲು ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಪಾಲಿಕೆ ಸಿಬ್ಬಂದಿ ಪಾದಚಾರಿ ಮಾರ್ಗವನ್ನು ಸರಿಪಡಿಸಿದ್ದಾರೆ.

'ರಸ್ತೆಯಲ್ಲಿ ಹರಿಯುವ ತ್ಯಾಜ್ಯ ನೀರು'

ಹೆಣ್ಣೂರು ಬಾಗಲೂರು ಮುಖ್ಯ ರಸ್ತೆಯ ವಡ್ಡರಪಾಳ್ಯ ಜಂಕ್ಷನ್‌ನಲ್ಲಿ ತ್ಯಾಜ್ಯ ನೀರು ಹರಿಯುತ್ತಿದೆ. ಇದರಿಂದ ಸ್ಥಳೀಯ ನಾಗರಿಕರಿಗೆ ಹಾಗೂ ವ್ಯಾಪಾರಿಗಳಿಗೆ ಸಮಸ್ಯೆ ಆಗಿದೆ. ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಮುಖ್ಯ ರಸ್ತೆಯಲ್ಲಿಯೇ ತ್ಯಾಜ್ಯ ನೀರು ಹರಿಯುವುದರಿಂದ ವಾಹನ ಸಂಚಾರಕ್ಕೂ ತೊಂದರೆ ಆಗಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಇದನ್ನು ಸರಿಪಡಿಸುವಂತೆ ಬೆಂಗಳೂರು ಜಲಮಂಡಳಿ ಹಾಗೂ ಪಾಲಿಕೆಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ವಡ್ಡರಪಾಳ್ಯದ ನಿವಾಸಿಗಳು

'ರಸ್ತೆ ಗುಂಡಿ ಮುಚ್ಚಿ'

ಸಂಜಯನಗರದ ಡಾ. ರಾಜಗೋಪಾಲ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಇಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಜೊತೆಗೆ ಗುಂಡಿಯಲ್ಲಿ ದ್ವಿಚಕ್ರ ವಾಹನ ಸವಾರರು ಬಿದ್ದು, ಕೈ ಕಾಲು ಮುರಿದುಕೊಂಡಿರುವ ಘಟನೆಗಳೂ ನಡೆದಿವೆ. ರಸ್ತೆ ಗುಂಡಿ ಮುಚ್ಚುವಂತೆ ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ. ಕೂಡಲೇ ರಸ್ತೆ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಪವನ್ ಎಸ್., ಸಂಜಯನಗರ

ಎಚ್‌ಡಿಕೆಗೆ ಅಗೌರವ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹಾಸನ: 'ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಹಾಸನಾಂಬ ದರ್ಶನಕ್ಕೆ ಬಂದಾಗ, ಜಿಲ್ಲಾಡಳಿತ ಅಗೌರವ ತೋರಿದೆ' ಎಂದು ಆರೋಪಿಸಿ ಜೆಡಿಎಸ್ ಶಾಸಕರಾದ ಎ.ಮಂಜು, ಸ್ವರೂಪ್ ಪ್ರಕಾಶ್, ಪಕ್ಷದ ಮುಖಂಡರು, ಸದಸ್ಯರು ದೇವಸ್ಥಾನದ ಮುಖ್ಯ ಪ್ರವೇಶ ದ್ವಾರದಲ್ಲಿ ಪ್ರತಿಭಟಿಸಿದರು.

ಭಾನುವಾರ ಬೆಳಿಗ್ಗೆ 11.30ಕ್ಕೆ ಪ್ರಾರಂಭವಾದ ಪ್ರತಿಭಟನೆ ಮಧ್ಯಾಹ್ನದ ವರೆಗೂ ಮುಂದುವರಿದಿತ್ತು. ರಸ್ತೆಯಲ್ಲೇ ಟೆಂಟ್ ಹಾಕಿಕೊಂಡು ಕುಳಿತರು. ಜಿಲ್ಲಾಧಿಕಾರಿ, ಉಸ್ತುವಾರಿ ಸಚಿವರು, ದೇವಸ್ಥಾನ ಆಡಳಿತಾಧಿಕಾರಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮಧ್ಯಾಹ್ನ 2.30ಕ್ಕೆ ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಶಾಸಕರು, ಜೆಡಿಎಸ್ ಮುಖಂಡರ ಜೊತೆ ಮಾತನಾಡಿದರು. ಎಚ್‌.ಡಿ.ಕುಮಾರಸ್ವಾಮಿ ಅವರೊಂದಿಗೂ ಫೋನ್‌ನಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ವಿವರಣೆ ನೀಡಿದರು.

'ಶಿಷ್ಟಾಚಾರ ಉಲ್ಲಂಘನೆ ಆಗಿಲ್ಲ. ಕುಮಾರಸ್ವಾಮಿ ಅವರೂ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆಗಿರುವ ಘಟನೆಯ ಕುರಿತು ಅವರಿಗೂ ವಿವರಿಸಿದ್ದೇನೆ' ಎಂದು ಲತಾಕುಮಾರಿ ಹೇಳಿದರು.

ನಂತರ ಪ್ರತಿಭಟನೆ ಹಿಂಪಡೆಯಲಾಯಿತು. ಪ್ರತಿಭಟನೆಯಿಂದಾಗಿ ಕೆಲಕಾಲ ದರ್ಶನ ವ್ಯವಸ್ಥೆಯಲ್ಲೂ ಗೊಂದಲ ಉಂಟಾಗಿತ್ತು.

'ಶಿಷ್ಟಾಚಾರ ಲೋಪ: ತಲೆಕೆಡಿಸಿಕೊಳ್ಳಲ್ಲ'

'ನಾನು ಶಿಷ್ಟಾಚಾರಕ್ಕೆ ಆದ್ಯತೆ ಕೊಡುವ ವ್ಯಕ್ತಿ ಅಲ್ಲ. ಆ ಬಗ್ಗೆ ತಲೆಕೆಡಿಸಿಕೊಳ್ಳುವುದೂ ಇಲ್ಲ. ನನಗೆ ದೇವಿಯ ದರ್ಶನ ಮುಖ್ಯ, ದೇವಿಯ ದರ್ಶನ ಸಿಕ್ಕಿತು. ಉತ್ತಮ ವ್ಯವಸ್ಥೆ ಮಾಡಿದ್ದಾರೆ. ಸಾರ್ವಜನಿಕರು ಕೂಡ ಯಾವುದೇ ತೊಂದರೆಗೆ ಒಳಗಾಗದೆ ನೆಮ್ಮದಿಯಾಗಿ ತಾಯಿಯ ದರ್ಶನ ಪಡೆಯುತ್ತಿದ್ದಾರೆ. ಶಿಷ್ಟಾಚಾರದ ಬಗ್ಗೆ ಪ್ರಶ್ನಿಸಿದರೆ ಅಧಿಕಾರಿಗಳಿಗೆ ತೊಂದರೆ. ಅವರಿಗೇಕೆ ತೊಂದರೆ ಕೊಡಬೇಕು. ನಾನು ಮುಖ್ಯಮಂತ್ರಿ ಆಗಿದ್ದಾಗ ಗ್ರಾಮ ವಾಸ್ತವ್ಯದ ವೇಳೆ ಅಧಿಕಾರಿಗಳು ಹೊರಗೆ ಮಲಗುತ್ತಿದ್ದರು. ನನ್ನಿಂದ ಅವರಿಗೆ ತೊಂದರೆಯಾಗಿದೆ. ಈಗ ಶಿಷ್ಟಾಚಾರದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ' ಎಂದು ಕುಮಾರಸ್ವಾಮಿ ಬೆಂಗಳೂರಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹಾಸನದ ಹಾಸನಾಂಬ ದೇಗುಲದ ಪ್ರವೇಶ ದ್ವಾರದ ಬಳಿ ಜೆಡಿಎಸ್ ಮುಖಂಡರು ಭಾನುವಾರ ಪ್ರತಿಭಟನೆ ನಡೆಸಿದರು

ವಿದೇಶ ಪ್ರವಾಸಕ್ಕೆ ಹೋಗುವ ಬದಲು ಶಾಸಕರು ನಗರದಲ್ಲಿದ್ದು, ಜಾತ್ರೆಯನ್ನು ಮುನ್ನಡೆಸಿದ್ದರೆ ಇದು ಆಗುತ್ತಿರಲಿಲ್ಲ, ಸ್ವರೂಪ್ ಪ್ರಕಾಶ್ ಅವರೇ ಕುಮಾರಸ್ವಾಮಿಯವರ ಕ್ಷಮೆ ಕೇಳಬೇಕು

ಪ್ರೀತಂ ಜೆ.ಗೌಡ, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ

ಪಾರ್ಶ್ವವಾಯು: ಜಾಗೃತಿ

ಬೆಂಗಳೂರು: ವಿಶ್ವ ಪಾರ್ಶ್ವವಾಯು ದಿನದ ಪ್ರಯುಕ್ತ ಬೆಂಗಳೂರು ಪಾರ್ಶ್ವವಾಯು ಸೇವಾ ಸಂಘವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪಾರ್ಶ್ವವಾಯು ಪೀಡಿತರು ಎದುರಿಸುವ ಸಮಸ್ಯೆ ಹಾಗೂ ಚಿಕಿತ್ಸೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾಜಿ ಅಧ್ಯಕ್ಷ ಡಾ.ಬಿ.ಎನ್. ಗಂಗಾಧರ್, 'ಪಾರ್ಶ್ವವಾಯುವಿಗೆ ತುತ್ತಾದ ರೋಗಿಗಳಲ್ಲಿ ಶೇ 63ರಷ್ಟು ಮಂದಿಗೆ ಆಹಾರ ನುಂಗುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಅವರಿಗೆ ವಿಶೇಷ ಚಿಕಿತ್ಸೆ ಮೂಲಕ ಸಮಸ್ಯೆ ನಿವಾರಿಸಬಹುದು' ಎಂದರು. ಸಂಸ್ಥೆಯ ಅಧ್ಯಕ್ಷ ಮೋಹನ್ ರಾಮ್, ಕಾರ್ಯದರ್ಶಿ ಡಾ. ಅಮಿತ್ ಕುಲಕರ್ಣಿ, ಕರ್ನಾಟಕ ಸ್ಟ್ರೋಕ್ ಫೌಂಡೇಷನ್‌ನ ಅಧ್ಯಕ್ಷ ಡಾ.ಜಿ.ಟಿ. ಸುಭಾಷ್, ಉಪಾಧ್ಯಕ್ಷ ಡಾ.ವಿಕ್ರಮ್ ಹುಡೇದ, ಕಾರ್ಯದರ್ಶಿ ಡಾ.ಸೂರ್ಯ ನಾರಾಯಣ ಶರ್ಮ ಉಪಸ್ಥಿತರಿದ್ದರು.

'ಟೀಕೆ ನಿಲ್ಲಿಸಿ, ಗುಂಡಿ ಮುಚ್ಚಿ'

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: 'ರಸ್ತೆ ಗುಂಡಿಗಳನ್ನು ಮುಚ್ಚುವ ಬದಲು, ಉದ್ಯಮಿ ಕಿರಣ್ ಮಜುಂದಾರ್ ಶಾ ಅವರನ್ನು ಟೀಕೆ ಮಾಡುವುದರಿಂದ ಯಾವುದೇ ಪ್ರಯೋಜನ ಇಲ್ಲ. ಟೀಕೆಗಳನ್ನು ನಿಲ್ಲಿಸಿ, ಗುಂಡಿಗಳನ್ನು ಮುಚ್ಚಿ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಉದ್ಯಮಿ ಶಾ ಅವರು ಹೇಳಿದ್ದು ಒಂದೆಡೆ ಇರಲಿ. ಬೆಂಗಳೂರಿನ ರಸ್ತೆಗಳ ತುಂಬೆಲ್ಲಾ ಗುಂಡಿಗಳೇ ಇವೆ ಎಂದು ಮಾಧ್ಯಮಗಳು ಪ್ರತಿದಿನವೂ ವರದಿ ಮಾಡುತ್ತಿವೆ. ಅದು ಸುಳ್ಳೇ' ಎಂದು ಪ್ರಶ್ನಿಸಿದರು.

'ರಸ್ತೆ ಗುಂಡಿಗಳಿಂದ ನಗರದ ಜನರಿಗೆ ತೀರಾ ತೊಂದರೆ ಆಗುತ್ತಿದೆ. ನಾನು ಮುಖ್ಯಮಂತ್ರಿ ಆಗಿದ್ದ ಎರಡೂ ಅವಧಿಯಲ್ಲಿ, ರಸ್ತೆ ಗುಂಡಿಗಳ ಬಗ್ಗೆ ಯಾವ ಉದ್ಯಮಿಯೂ ಟೀಕೆ ಮಾಡಿರಲಿಲ್ಲ. 2006–07ರ ಅವಧಿಯಲ್ಲಿ 59 ರಸ್ತೆಗಳ ವಿಸ್ತರಣೆಗೆ ಮಂಜೂರಾತಿ ನೀಡಿ, ಐದಾರು ತಿಂಗಳಲ್ಲಿ ಕಾಮಗಾರಿ ಮುಗಿಸಲಾಗಿತ್ತು. ಈ ಸರ್ಕಾರವು ವರ್ಷಗಳಾದರು, ಯಾವ ಕಾಮಗಾರಿಯನ್ನೂ ಮುಗಿಸಿಲ್ಲ. ಕೆಲಸ ಮಾಡಲು ಇವರಿಗೆ ಇರುವ ತೊಡಕಾದರೂ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ' ಎಂದರು.

'ಇವರು ಹೊಸ ಕಾಮಗಾರಿ ಯಾವುದನ್ನೂ ಮಾಡುತ್ತಿಲ್ಲ. ನನ್ನ ಅವಧಿಯಲ್ಲಿ ಮಂಜೂರಾತಿ ನೀಡಿದ ಕೆಲಸಗಳನ್ನೇ ಇನ್ನೂ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ಉದ್ಯಮಗಳಿಗೆ ಕೊಡುವ ಸವಲತ್ತು ಮತ್ತು ರಿಯಾಯಿತಿಗಳ ಬಗ್ಗೆ ಮಾತನಾಡಿದರೆ, ಅಲ್ಲಿಗೇ ಹೋಗಿ ಎನ್ನುತ್ತಾರೆ. ಹೀಗೆ ಹೇಳುತ್ತಿದ್ದರೆ, ರಾಜ್ಯಕ್ಕೆ ಯಾವ ಉದ್ಯಮ ಬರುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಡಿಜಿಟಲ್ ಅರೆಸ್ಟ್: ₹17.95 ಲಕ್ಷ ವಂಚನೆ

ಹಣ ವಾಪಸ್ ಕೊಡಿಸಿ ಎಂದು ಮನವಿ ಮಾಡಿದ ದೂರುದಾರ ವಿಶ್ವನಾಥನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 67 ವರ್ಷದ ವೃದ್ಧರೊಬ್ಬರನ್ನು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿದ ಸೈಬರ್ ವಂಚಕ ₹17.95 ಲಕ್ಷ ಸುಲಿಗೆ ಮಾಡಿರುವ ಘಟನೆ ನಡೆದಿದೆ

ಕಾಕ್ಸ್ ಟೌನ್ ನಿವಾಸಿ ವಿಶ್ವನಾಥನ್ ದೂರಿನ ಮೇರೆಗೆ ಅಪರಿಚಿತ ವ್ಯಕ್ತಿಯ ವಿರುದ್ಧ ಸೆನ್ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಅಕ್ಟೋಬರ್ 10ರಂದು ವಿಶ್ವನಾಥನ್ ಅವರಿಗೆ ಕರೆ ಮಾಡಿದ ಅಪರಿಚಿತ ವ್ಯಕ್ತಿ, ತಾನು ಮುಂಬೈನ ಕೊಲಾಬಾ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಎಂದು ಪರಿಚಯಿಸಿಕೊಂಡಿದ್ದ. ಬಳಿಕ 'ಪಿಎಫ್‌ಐ ಜತೆ ನಂಟು ಹೊಂದಿರುವ ಸಂಸ್ಥೆಯ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಿಮ್ಮ ಹೆಸರು ಹಾಗೂ ಇತರೆ ವಿವರಗಳು ಪತ್ತೆಯಾಗಿವೆ' ಎಂದು ಬೆದರಿಸಿದ್ದಾನೆ.

ಬಳಿಕ ಅಧಿಕಾರಿಗಳ ಸೋಗಿನಲ್ಲಿ ಹಲವರು ಕರೆ ಮಾಡಿ, 'ನಿಮ್ಮ ಆಧಾರ್ ಕಾರ್ಡ್ ದುರ್ಬಳಕೆಯಾಗಿದೆ' ಎಂದು ಹೇಳಿದ್ದಾರೆ. ಎಫ್‌ಐಆರ್ ಪ್ರತಿ, ಪಿಎಫ್‌ಐ ಸದಸ್ಯರ ಭಾವಚಿತ್ರ, ಮುಂಬೈ ಪೊಲೀಸರ ಗುರುತಿನ ಚೀಟಿ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ವಿಶ್ವನಾಥನ್ ಅವರ ವಾಟ್ಸ್‌ಆ್ಯಪ್‌ಗೆ ಕಳುಹಿಸಿದ್ದಾರೆ. ನಂತರ 'ಡಿಜಿಟಲ್ ಅರೆಸ್ಟ್' ಮಾಡುತ್ತಿರುವುದಾಗಿ ಹೇಳಿದ್ದಾರೆ.

'ಆಸ್ತಿಯ ಬಗ್ಗೆ ತನಿಖೆ ನಡೆಸಬೇಕಿದೆ. ತನಿಖೆ ಮುಗಿಯುವವರೆಗೂ ಖಾತೆಯಲ್ಲಿರುವ ಹಣವನ್ನು ವರ್ಗಾಯಿಸಬೇಕು. ಹಣವನ್ನು ತನಿಖೆ ಪೂರ್ಣವಾದ ಬಳಿಕ ಮರಳಿಸಲಾಗುವುದು' ಎಂದು ಹೇಳಿದ್ದಾರೆ. ವಂಚಕರು ಸೂಚಿಸಿದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ಒಟ್ಟು ₹17.95 ಲಕ್ಷವನ್ನು ವರ್ಗಾಯಿಸಿದ್ದಾರೆ.

ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವಂಚಿಸಿರುವ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು, ಹಣವನ್ನು ವಾಪಸ್ ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಮರಕ್ಕೆ ಬೈಕ್ ಡಿಕ್ಕಿ: ಸ್ವಚ್ಛತಾ ಕಾರ್ಮಿಕ ಸಾವು

ಕಾಡುಬೀಸನಹಳ್ಳಿ ಬಳಿಯ ಕರಿಯಮ್ಮನ ಅಗ್ರಹಾರ ಮುಖ್ಯ-ರಸ್ತೆಯಲ್ಲಿ ಶನಿವಾರ ರಾತ್ರಿ ದ್ವಿಚಕ್ರ ವಾಹನವು ಮರಕ್ಕೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಯುವಕನೊಬ್ಬ ಮೃತಪಟ್ಟಿದ್ದಾನೆ.

ಅಸ್ಸಾಂನ ಸಾಹಿಲ್ ಅಹಮ್ಮದ್ (19) ಮೃತ ಯುವಕ.

ನಗರದ ದೇವರಬೀಸನಹಳ್ಳಿಯಲ್ಲಿ ವಾಸವಾಗಿದ್ದ ಸಾಹಿಲ್, ಖಾಸಗಿ ಕಂಪನಿಯಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ರಾತ್ರಿ ಮನೆಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿರ್ಲಕ್ಷ್ಯದಿಂದ ಅತಿ ವೇಗವಾಗಿ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಎಚ್‌ಎಎಲ್ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಮರಣೋತ್ತರ ಪರೀಕ್ಷೆ ನೋಡಲು ಹಟ ಹಿಡಿದಿದ್ದ..

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಗಳು ಕೃತಿಕಾ ರೆಡ್ಡಿ ಕೊಲೆಗೆ ಬಳಸಿದ್ದ ಅನಸ್ತೇಶಿಯಾವನ್ನು ಆರೋಪಿ ಮಹೇಂದ್ರ ರೆಡ್ಡಿ ತನ್ನ ಸಹೋದರನ ಔಷಧ ಅಂಗಡಿಯಿಂದಲೇ ತಂದಿರಬಹುದು. ತನಿಖೆಯಿಂದ ಸತ್ಯ ಹೊರ ಬರಲಿದೆ' ಎಂದು ಮೃತರ ತಾಯಿ ಸೌಜನ್ಯಾ ಹೇಳಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ವೈದ್ಯನಾಗಿರುವುದರಿಂದ ತಾನು ಮರಣೋತ್ತರ ಪರೀಕ್ಷೆ ನೋಡಬೇಕು ಎಂದು ಅಳಿಯ ಹಟ ಹಿಡಿದಿದ್ದರು. ಕಳೆದ ವರ್ಷ ಅಕ್ಟೋಬರ್‌ನಿಂದಲೇ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದ ವಿಚಾರ ಗೊತ್ತಾಗಿದೆ. ಮಗಳು ಆಗಾಗ್ಗೆ ಮನೆಗೆ ಬರುತ್ತಿದ್ದಳು. ಏಪ್ರಿಲ್ 21ರಂದು ಮಗಳಿಗೆ ಅವರ ಮನೆಯಲ್ಲಿ ಚಿಕಿತ್ಸೆ ನೀಡಿ, 22 ರಂದು ನಮ್ಮ ಮನೆಗೆ ಕರೆದುಕೊಂಡು ಬಂದರು. ಬರುವಾಗಲೇ ಐವಿ ಡ್ರಿಪ್ಸ್ ಹಾಕಿಕೊಂಡು ಬಂದಿದ್ದರು' ಎಂದರು.

'23ರ ರಾತ್ರಿ ಮಗಳ ಜತೆ ಊಟ ಮಾಡಿದ್ದೆವು. ಮರುದಿನ ಬೆಳಿಗ್ಗೆ 7.30ಕ್ಕೆ ಅಳಿಯ ಕೊಠಡಿಯಿಂದ ಕಿರುಚಿಕೊಂಡರು. ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಮೃತಪಟ್ಟಿರುವ ವಿಚಾರ ಗೊತ್ತಾಯಿತು. ಮಗಳಿಗೆ ಆರೋಗ್ಯ ಸಮಸ್ಯೆ ಇರಲಿಲ್ಲ. ಸಂಬಂಧಿಕರು ನೋಡಿದ ಹುಡುಗನ ಜೊತೆ ಮದುವೆ ಮಾಡಿದ್ದೆವು. ಮದುವೆಯಾಗಿ ಹನ್ನೊಂದು ತಿಂಗಳು ಮಾತ್ರ ಅಳಿಯ ಜೊತೆಗೆ ಇದ್ದರು. ಸಣ್ಣ ಆರೋಗ್ಯ ಸಮಸ್ಯೆಗೆ ಪ್ರಾಣ ತೆಗಿಯುತ್ತಾರಾ? ಪ್ರಾಣ ತೆಗೆಯುವ ಅಧಿಕಾರ ಯಾರು ಕೊಟ್ಟರು?' ಎಂದು ಪ್ರಶ್ನಿಸಿದರು.

'ಆರೋಪಿಯ ಸಹೋದರ ಕೂಡ ಹುಡುಗಿಗೆ ಮೋಸ ಮಾಡಿದ ಆರೋಪವಿದೆ. ಪ್ರಾಣ ಉಳಿಸುವವರೇ ಪ್ರಾಣ ತೆಗೆಯುವ ಕೆಲಸ ಮಾಡಿದ್ದಾರೆ. ಆರೋಪಿ ಎಷ್ಟು ಹುಡುಗಿಯರಿಗೆ ಮೋಸ ಮಾಡಿರಬಹುದು ಎಂಬುದರ ಬಗ್ಗೆಯೂ ತನಿಖೆ ಆಗಬೇಕು. ಮಗಳು ಇಷ್ಟವಿಲ್ಲದಿದ್ದರೆ ನಮಗೆ ಹೇಳಬೇಕಿತ್ತು' ಎಂದು ಬೇಸರ ವ್ಯಕ್ತಪಡಿಸಿದರು.

ಬಡ ಮಕ್ಕಳಿಗೆ ಸಹಾಯ: ಕೃತಿಕಾ ರೆಡ್ಡಿ ತಂದೆ ಮುನಿರೆಡ್ಡಿ ಮಾತನಾಡಿ, 'ಬಡವರಿಗೆ ಸಹಾಯ ಮಾಡುವ ಉದ್ದೇಶದಿಂದ ಇಬ್ಬರು ಮಕ್ಕಳನ್ನು ಓದಿಸಿದ್ದೇವೆ. ಹಣಕಾಸಿನ ಸಮಸ್ಯೆ ಇರಲಿಲ್ಲ. ಆರೋಗ್ಯ ಉಚಿತ ಶಿಬಿರ ಆಯೋಜಿಸಿ, ಜನರಿಗೆ ಸೇವೆ ಮಾಡುವ ಉದ್ದೇಶ ಇತ್ತು. ಅದು ಬಿಟ್ಟರೆ ಹಣ ಮಾಡುವ ಉದ್ದೇಶ ಇರಲಿಲ್ಲ. ಮಗಳ ಹೆಸರಿನಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ತೀರ್ಮಾನಿಸಿದ್ದೇವೆ' ಎಂದರು.

ವಿಜಯದಶಮಿ ಉತ್ಸವದ ಅಂಗವಾಗಿ ರಾಷ್ಟ್ರ ಸೇವಿಕಾ ಸಮಿತಿಯ ಸದಸ್ಯರು ಹೆಬ್ಬಾಳದ ಆರ್‌.ಟಿ. ನಗರದಲ್ಲಿ ಪಥ ಸಂಚಲನ ನಡೆಸಿದರು

ಪೊಲೀಸರ ಕರ್ತವ್ಯಕ್ಕೆ ಅಡ್ಡಿ: ಪ್ರಕರಣ ದಾಖಲು

ಬೆಂಗಳೂರು: ದರೋಡೆ ಪ್ರಕರಣದ ಆರೋಪಿಯನ್ನು ಬಂಧಿಸಲು ತೆರಳಿದ್ದ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ರೌಡಿಶೀಟರ್ ಪ್ರಸಾದ್ ಅಲಿಯಾಸ್ ಮೆಂಟಲ್ ಪ್ರಸಾದ್ ಕುಟುಂಬದ ವಿರುದ್ಧ ವಿದ್ಯಾರಣ್ಯಪುರ ಠಾಣೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎರಡು ವರ್ಷಗಳ ಹಿಂದೆ ಪ್ರಕರಣವೊಂದರ ಸಂಬಂಧ ಜೈಲು ಸೇರಿದ್ದ ಪ್ರಸಾದ್, ಜಾಮೀನಿನ ಮೇಲೆ ಅಕ್ಟೋಬರ್ 17ರಂದು ಬಿಡುಗಡೆಯಾಗಿದ್ದ. ಅದೇ ದಿನ ರಾತ್ರಿ ದೊಡ್ಡಬೊಮ್ಮಸಂದ್ರದಲ್ಲಿ ದರೋಡೆ ಪ್ರಕರಣ ವರದಿಯಾಗಿತ್ತು. ಈ ಸಂಬಂಧ ಆ ದಿನ ಠಾಣಾಧಿಕಾರಿಗಳು ಸೇರಿ 10ಕ್ಕೂ ಹೆಚ್ಚು ಮಂದಿ ಆತನ ಮನೆ ಬಳಿ ಹೋಗಿ ವಿಚಾರಣೆಗೆ ಮುಂದಾಗಿದ್ದರು.

ಆಗ ಪ್ರಸಾದ್ ಮತ್ತು ಆತನ ಕುಟುಂಬ ಸದಸ್ಯರು ಪೊಲೀಸರ ಜತೆ ವಾಗ್ವಾದ ನಡೆಸಿದ್ದಾರೆ. ಗೇಟ್ ಹಾಕಿ ಮನೆ ಪ್ರವೇಶಿಸದಂತೆ ಅಡ್ಡಪಡಿಸಿ, ಹಲ್ಲೆಗೂ ಮುಂದಾಗಿದ್ದರು ಎಂದು ಹೇಳಲಾಗಿದೆ. ಈ ಸಂಬಂಧ ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಪ್ರಸಾದ್ ವಿರುದ್ಧ ವಿದ್ಯಾರಣ್ಯಪುರ, ಗಂಗಮ್ಮನಗುಡಿ, ಜಯನಗರ ಠಾಣೆಗಳಲ್ಲಿ ಕೊಲೆ ಪ್ರಕರಣ ದಾಖಲಾಗಿವೆ. ನಗರದ ಆರು ಠಾಣೆಗಳಲ್ಲಿ ಹಲ್ಲೆ, ದರೋಡೆ ಪ್ರಕರಣಗಳು ಇವೆ. ಈತನ ವಿರುದ್ಧ ವಿದ್ಯಾರಣ್ಯಪುರ ಠಾಣೆಯಲ್ಲಿ ರೌಡಿ ಪಟ್ಟಿ ತೆರೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮೀಟರ್ ಸೀನಾ ಎಂಬಾತನ ಪ್ರಚೋದನೆಯಿಂದ ಪ್ರಸಾದ್‌ನನ್ನು ಬಂಧಿಸಲು ಮುಂದಾಗಿದ್ದಾರೆ ಎಂದು ಪೊಲೀಸರ ವಿರುದ್ಧ ಪ್ರಸಾದ್ ಕುಟುಂಬ ಆರೋಪಿಸಿದೆ.

ಸಿಲಿಂಡರ್ ಸ್ಫೋಟ: ಮಾಜಿ ಸೈನಿಕನಿಗೆ ಗಾಯ

ಬೆಂಗಳೂರು: ಅಂದ್ರಹಳ್ಳಿ ಸಮೀಪದ ಬ್ಯಾಡರಹಳ್ಳಿಯ ವಿದ್ಯಾಮಾನ್ಯ ನಗರದ ಮನೆಯೊಂದರಲ್ಲಿ ಸಿಲಿಂಡರ್ ಸ್ಫೋಟಗೊಂಡು ಮಾಜಿ ಸೈನಿಕರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕೊಡಗು ಜಿಲ್ಲೆಯ ಜನಾರ್ದನ್ (60) ಗಾಯಾಳು. ಅವರು ವಾಸವಿದ್ದ ಬಾಡಿಗೆ ಮನೆಯಲ್ಲಿ ಅನಿಲ ಸೋರಿಕೆಯಾಗಿತ್ತು. ಶುಕ್ರವಾರ ರಾತ್ರಿ 9 ಗಂಟೆಯಲ್ಲಿ ಅಡುಗೆ ಮಾಡಲು ಸ್ಟೌ ಹಚ್ಚುತ್ತಿದ್ದಂತೆ ಸಿಲಿಂಡರ್ ಸ್ಫೋಟಗೊಂಡಿತ್ತು. ಇದರ ತೀವ್ರತೆಗೆ ಮನೆಯ ಗೋಡೆಗಳು ಬಿರುಕು ಬಿಟ್ಟಿವೆ. ಗಾಯಗೊಂಡಿರುವ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆತಂಕ ಸೃಷ್ಟಿಸಿದ 'ಬಾಂಬ್' ಬರಹ: ಬೆಂಗಳೂರಿನಲ್ಲಿ ಇಂಡಿಗೊ ವಿಮಾನ ಲ್ಯಾಂಡಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ರಾತ್ರಿ ದುಬೈನಿಂದ ಮಂಗಳೂರಿಗೆ ಬರುತ್ತಿದ್ದ ಇಂಡಿಗೊ ವಿಮಾನದ ಶೌಚಾಲಯದಲ್ಲಿ ಪ್ರಯಾಣಿಕರೊಬ್ಬರು ಬರೆದಿದ್ದ 'ಬಾಂಬ್' ಬರಹ ಕೆಲ ಕಾಲ ಆತಂಕ ಸೃಷ್ಟಿಸಿತ್ತು.

168 ಪ್ರಯಾಣಿಕರನ್ನು ಹೊತ್ತ ವಿಮಾನವು ದುಬೈನಿಂದ ಮಂಗಳೂರಿಗೆ ಸಂಜೆ ಹಾರಾಟ ಆರಂಭಿಸಿತ್ತು. ಮಾರ್ಗ ಮಧ್ಯೆ ಪ್ರಯಾಣಿಕರೊಬ್ಬರು ವಿಮಾನದ ಶೌಚಾಲಯಕ್ಕೆ ಹೋಗಿ 'ಬಾಂಬ್' ಎಂದು ಬರೆದು ಹೊರಬಂದಿದ್ದಾರೆ.

ಸ್ವಲ್ಪ ಸಮಯದ ಬಳಿಕ ಶೌಚಾಲಯಕ್ಕೆ ಹೋದ ಸಹ ಪ್ರಯಾಣಿಕರು, 'ಬಾಂಬ್' ಎಂಬ ಬರಹ ನೋಡಿ ಗಾಬರಿಯಾಗಿ ವಿಮಾನದ ಸಿಬ್ಬಂದಿಗೆ ವಿಷಯ ತಿಳಿಸಿದ್ದರು.

ಬಳಿಕ ಸುರಕ್ಷತಾ ದೃಷ್ಟಿಯಿಂದ ವಿಮಾನವನ್ನು ಮಂಗಳೂರಿನ ಬದಲಿಗೆ ತುರ್ತಾಗಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು.

ಕೆಐಎಎಲ್‌ನಲ್ಲಿ ಭದ್ರತಾ ಸಿಬ್ಬಂದಿ ಮಧ್ಯರಾತ್ರಿವರೆಗೆ ಇಡೀ ವಿಮಾನವನ್ನು ತಪಾಸಣೆ ಮಾಡಿದರು. ಅಲ್ಲದೇ, ಪ್ರಯಾಣಿಕರನ್ನೂ ತಪಾಸಣೆಗೆ ಒಳಪಡಿಸಿದರು. ಆದರೆ, ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಬಾಂಬ್‌ನ ಅಪಾಯವಿಲ್ಲವೆಂದು ತಿಳಿದ ಬಳಿಕ ಪ್ರಯಾಣಿಕರು ಹಾಗೂ ಸಿಬ್ಬಂದಿ ನಿಟ್ಟುಸಿರು ಬಿಟ್ಟರು.

'ವಿಮಾನದ ಶೌಚಾಲಯದಲ್ಲಿ ಬರೆದಿದ್ದ ಬಾಂಬ್ ಎಂಬ ಬರಹವು ಪ್ರಯಾಣಿಕರಲ್ಲಿ ಆತಂಕ ಹುಟ್ಟಿಸಿತ್ತು. ವಿಚಾರ ತಿಳಿದ ಕೂಡಲೇ ಸುರಕ್ಷತಾ ದೃಷ್ಟಿಯಿಂದ ವಿಮಾನದ ಮಾರ್ಗ ಬದಲಾವಣೆ ಮಾಡಿ ಕೆಐಎಎಲ್‌ನಲ್ಲಿ ಇಳಿಸಿ ತಪಾಸಣೆ ಮಾಡಲಾಗಿದೆ. ಬರಹ ಬರೆದ ಪ್ರಯಾಣಿಕನ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಹೆಚ್ಚಿನ ತನಿಖೆ ನಡೆಯುತ್ತಿದ್ದು, ಪ್ರಯಾಣಿಕನ ಗುರುತು ಪತ್ತೆಯಾದ ನಂತರ ಆತನ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ' ಎಂದು ಪೊಲೀಸರು ತಿಳಿಸಿದ್ದಾರೆ.

15 ಜಿಲ್ಲೆಗಳ ಕೈತಪ್ಪಲಿದೆ 'ಪಿಎಂಜಿಎಸ್‌ವೈ'

225 ಜನವಸತಿ ಪ್ರದೇಶಗಳಿಗಷ್ಟೇ ಅರ್ಹತೆ; ತೊಡಕಾದ ಮಾರ್ಗಸೂಚಿ,

• ಜಿ.ಬಿ.ನಾಗರಾಜ್

ದಾವಣಗೆರೆ: '500ಕ್ಕೂ ಹೆಚ್ಚು ಜನಸಂಖ್ಯೆಯುಳ್ಳ, ಸಂಪರ್ಕರಹಿತ ವಸತಿ ಪ್ರದೇಶಗಳಲ್ಲಷ್ಟೇ ರಸ್ತೆ ನಿರ್ಮಿಸಬಹುದು' ಎಂಬ ಮಾರ್ಗಸೂಚಿಯಿಂದಾಗಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯು (ಪಿಎಂಜಿಎಸ್‌ವೈ) 4ನೇ ಹಂತದಲ್ಲಿ ರಾಜ್ಯದ 15 ಜಿಲ್ಲೆಗಳ ಕೈತಪ್ಪುವ ಸಾಧ್ಯತೆ ಇದೆ.

ಪಿಎಂಜಿಎಸ್‌ವೈ 4ನೇ ಹಂತವನ್ನು 2024ರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಘೋಷಿಸಿದ್ದು, 25,000 ಜನವಸತಿ ಪ್ರದೇಶಗಳಿಗೆ ಸರ್ವಋತು ಸಂಪರ್ಕ ರಸ್ತೆ ಕಲ್ಪಿಸುವ ಆಶ್ವಾಸನೆ ನೀಡಿತ್ತು. ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ 16 ಜಿಲ್ಲೆಗಳ 225 ಜನವಸತಿ ಪ್ರದೇಶಗಳು ಮಾತ್ರವೇ ಯೋಜನೆಗೆ ಅರ್ಹತೆ ಪಡೆದಿವೆ.

ಕೆಲವು ಜಿಲ್ಲೆಗಳಲ್ಲಿ ರಸ್ತೆ ಅಭಿವೃದ್ಧಿಗಾಗಿ ಕಾಯುತ್ತಿರುವ ಬಹುತೇಕ ಗ್ರಾಮಗಳ ಜನಸಂಖ್ಯೆ 500ಕ್ಕಿಂತ ಕಡಿಮೆ ಇರುವುದರಿಂದ ಹಾಗೂ ಈಗಾಗಲೇ ಆಯಾ ಗ್ರಾಮ ವ್ಯಾಪ್ತಿಯಲ್ಲಿ ಕೆಲವೊಂದು ರಸ್ತೆಗಳು ಅಭಿವೃದ್ಧಿ ಹೊಂದಿರುವುದರಿಂದ ಯೋಜನೆಯಿಂದ ವಂಚಿತವಾಗುತ್ತಿವೆ.

ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು 2000–2001ನೇ ಸಾಲಿನಲ್ಲಿ ಯೋಜನೆ ಜಾರಿಗೊಳಿಸಲಾಯಿತು. ಕರ್ನಾಟಕ ಸೇರಿ ದೇಶದ ಹಲವು ರಾಜ್ಯಗಳಲ್ಲಿ ಇದು ಯಶಸ್ಸು ಕಂಡಿದೆ. 2013ರಲ್ಲಿ 2ನೇ ಹಂತ, 2019ರಲ್ಲಿ 3ನೇ ಹಂತ ಜಾರಿಗೊಳಿಸಲಾಗಿತ್ತು.

4ನೇ ಹಂತವು 2024ರ ಡಿಸೆಂಬರ್‌ನಲ್ಲಿ ಅನುಷ್ಠಾನಕ್ಕೆ ಬಂದಿದೆ. ಐದು ವರ್ಷಗಳಲ್ಲಿ ₹ 70,125 ಕೋಟಿ ಅಂದಾಜು ವೆಚ್ಚದಲ್ಲಿ 62,500 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ.

ಚನ್ನಗಿರಿ ತಾಲ್ಲೂಕಿನ ಹನುಮಲ್ಲಾಪುರ– ತಾವರೆಕೆರೆಗೆ ಸಂಪರ್ಕಿಸುವ ರಸ್ತೆಯ ಸ್ಥಿತಿ

ರಾಜ್ಯದಲ್ಲಿ ಸಂಪರ್ಕರಹಿತ ಜನವಸತಿ ಪ್ರದೇಶಗಳ ಸಂಖ್ಯೆ ವಿರಳ. 'ನಮ್ಮ ಗ್ರಾಮ ನಮ್ಮ ರಸ್ತೆ' ಸೇರಿದಂತೆ ಹಲವು ಯೋಜನೆಯಡಿ ಬಹುತೇಕ ಹಳ್ಳಿಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ.

ಹೊಸದಾಗಿ ನಿರ್ಮಾಣವಾಗಿರುವ ಜನವಸತಿ ಪ್ರದೇಶಗಳು 500ಕ್ಕೂ ಕಡಿಮೆ ಜನಸಂಖ್ಯೆ ಹೊಂದಿವೆ. ಪಿಎಂಜಿಎಸ್‌ವೈ 4ನೇ ಹಂತದ ಮಾರ್ಗಸೂಚಿ ಪ್ರಕಾರ ಗ್ರಾಮೀಣ ಪ್ರದೇಶದ ರಸ್ತೆ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ ಎಂಬುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಯೊಬ್ಬರ ಹೇಳಿಕೆ.

ಯೋಜನೆಗೆ ಕೇಂದ್ರ ಮತ್ತು ರಾಜ್ಯ 60:40ರ ಅನುಪಾತದಲ್ಲಿ ವೆಚ್ಚ ಭರಿಸಿವೆ.

> **'ಪಿಎಂಜಿಎಸ್‌ವೈ' 4ನೇ ಹಂತದ ಮಾರ್ಗಸೂಚಿ ಪ್ರಕಾರ ಜಿಲ್ಲೆಯಲ್ಲಿ ಯಾವುದೇ ರಸ್ತೆಯ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತಿಲ್ಲ. ಜನಸಂಖ್ಯೆಯ ಮಾನದಂಡವನ್ನು 200ಕ್ಕೆ ಇಳಿಸಿದರೆ ಅನುಕೂಲ**
> **ಗಿತ್ತೆ ಮಾಧವ ವಿಠ್ಠಲರಾವ್**
> ಸಿಇಒ, ಜಿಲ್ಲಾ ಪಂಚಾಯಿತಿ, ದಾವಣಗೆರೆ

2022–23ರಿಂದ 2024–2025ನೇ ಸಾಲಿನವರೆಗೆ ರಾಜ್ಯದಲ್ಲಿ 2,254 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ₹ 837 ಕೋಟಿ, ರಾಜ್ಯ ಸರ್ಕಾರ ₹ 585 ಕೋಟಿ ವ್ಯಯಿಸಿವೆ.

'ಗ್ರಾಮದಲ್ಲಿ ಒಂದು ರಸ್ತೆ ಅಭಿವೃದ್ಧಿಪಡಿಸಿದ್ದರೆ ಮತ್ತೊಂದು ರಸ್ತೆ ನಿರ್ಮಿಸಲು ಯೋಜನೆಯ 4ನೇ ಹಂತದಲ್ಲಿ ಅವಕಾಶವಿಲ್ಲ. ರಸ್ತೆ ದುರಸ್ತಿಗೂ ಅವಕಾಶವಿಲ್ಲ. ಇದರಿಂದ ರಾಜ್ಯವು ಯೋಜನೆಯ ನೆರವು ಪಡೆಯಲು ಸಾಧ್ಯವಾಗುತ್ತಿಲ್ಲ. ಮಾರ್ಗಸೂಚಿಗೆ ತಿದ್ದುಪಡಿ ತಂದರೆ ಮಾತ್ರ ರಾಜ್ಯಕ್ಕೆ ಅನುಕೂಲ ಆಗಲಿದೆ' ಎಂದು ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂಕಿ ಅಂಶಗಳು

23,972 ಕಿ.ಮೀ
ರಾಜ್ಯದಲ್ಲಿ 25 ವರ್ಷಗಳಲ್ಲಿ ಅಭಿವೃದ್ಧಿ ಆಗಿರುವ ರಸ್ತೆ

₹837 ಕೋಟಿ
ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರ ಮಾಡಿದ ವೆಚ್ಚ

₹585 ಕೋಟಿ
ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಮಾಡಿದ ವೆಚ್ಚ

ಸುದ್ದಿ 2 ನಿಮಿಷ

ಬಾಜಿ ಕಟ್ಟಿ ₹500 ಕಳೆದುಕೊಂಡ ಗೃಹ ಸಚಿವ ಪರಮೇಶ್ವರ

ತುಮಕೂರು: ಕಬಡ್ಡಿ ಪಂದ್ಯದಲ್ಲಿ ವಿಜಯಪುರ ತಂಡ ಗೆಲ್ಲುತ್ತದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಜತೆಗೆ ಬಾಜಿ ಕಟ್ಟಿ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ₹500 ಕಳೆದುಕೊಂಡರು.

ನಗರದಲ್ಲಿ ಭಾನುವಾರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿ ಫೈನಲ್ ಪಂದ್ಯಗಳು ನಡೆದವು. ಬಾಲಕರ ವಿಭಾಗದ ಅಂತಿಮ ಪಂದ್ಯದಲ್ಲಿ ದಕ್ಷಿಣ ಕನ್ನಡ ಮತ್ತು ವಿಜಯಪುರ ತಂಡಗಳು ಮುಖಾಮುಖಿಯಾದವು. ದಕ್ಷಿಣ ಕನ್ನಡ ತಂಡವು 36-26 ಅಂಕಗಳಿಂದ ವಿಜಯಪುರ ತಂಡಕ್ಕೆ ಸೋಲುಣಿಸಿತು.

ವಿಜೇತ ತಂಡಕ್ಕೆ ಪ್ರಶಸ್ತಿ ವಿತರಿಸಿದ ನಂತರ ಪರಮೇಶ್ವರ ಮಾತನಾಡಿದರು. 'ನಾನು ₹500 ಕಳೆದುಕೊಂಡು ಬಿಟ್ಟೆ. ವಿಜಯಪುರ ತಂಡ ಗೆಲ್ಲುತ್ತದೆ ಎಂದು ಜಿಲ್ಲಾಧಿಕಾರಿ ಜತೆ ಬೆಟ್ಟಿಂಗ್ ಮಾಡಿಕೊಂಡಿದ್ದೆ' ಎಂದರು.

ಸಚಿವರಿಗೆ 2 ಲಕ್ಷ ಸಹಿ ಸಂಗ್ರಹ ಗುರಿ ನೀಡಿದ ಡಿ.ಕೆ ಶಿವಕುಮಾರ್

ಬೆಂಗಳೂರು: 'ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ 'ಮತ ಕಳವು' ನಡೆಸುತ್ತಿದೆ ಎಂದ ಆರೋಪಿಸಿ ಆರಂಭಿಸಿರುವ 'ವೋಟ್ ಚೋರ್ ಗದ್ದಿ ಚೋಡ್' ಅಭಿಯಾನದ ಅಂಗವಾಗಿ ತಮ್ಮ ವಿಧಾನಸಭಾ ಕ್ಷೇತ್ರ ಅಥವಾ ಜಿಲ್ಲೆಯಲ್ಲಿ ಕನಿಷ್ಠ ಎರಡು ಲಕ್ಷ ಸಹಿ ಸಂಗ್ರಹಿಸಿ ಇದೇ 24ರ ಒಳಗೆ ಖುದ್ದಾಗಿ ಕೆಪಿಸಿಸಿಗೆ ಸಲ್ಲಿಸಬೇಕು' ಎಂದು ಎಲ್ಲ ಸಚಿವರಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ.

ಈ ಬಗ್ಗೆ ಎಲ್ಲ ಸಚಿವರಿಗೆ ಪತ್ರ ಬರೆದಿರುವ ಶಿವಕುಮಾರ್, 'ಜಿಲ್ಲಾ ಕಾಂಗ್ರೆಸ್ ಸಮಿತಿ ಅಥವಾ ಬ್ಲಾಕ್ ಕಾಂಗ್ರೆಸ್ ಸಮಿತಿಯ ಮೂಲಕ ನಡೆದ ಸಹಿ ಸಂಗ್ರಹವನ್ನು ಹೊರತುಪಡಿಸಿ ವೈಯಕ್ತಿಕವಾಗಿ 2 ಲಕ್ಷ ಸಹಿ ಸಂಗ್ರಹಿಸಬೇಕು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಈ ಸೂಚನೆ ನೀಡಿದ್ದಾರೆ' ಎಂದೂ ಹೇಳಿದ್ದಾರೆ.

'ಈ ಅಭಿಯಾನದ ಮೂಲಕ ಅತೀ ಹೆಚ್ಚು ಸಹಿ ಸಂಗ್ರಹಿಸುವಂತೆ ಕರ್ನಾಟಕ ರಾಜ್ಯಕ್ಕೆ ಪಕ್ಷದ ವರಿಷ್ಠರು ಗುರಿ ನೀಡಿದ್ದಾರೆ. ಆದ್ದರಿಂದ, ಎಲ್ಲ ಸಚಿವರು ಈ ಬಗ್ಗೆ ವೈಯಕ್ತಿಕವಾಗಿ ಆಸಕ್ತಿ ತೆಗೆದುಕೊಂಡು ಈ ಕೆಲಸ ಮಾಡಬೇಕು. ಪ್ರತಿನಿತ್ಯ ಸಂಗ್ರಹವಾಗುತ್ತಿರುವ ಸಹಿಗಳ ಸಂಖ್ಯೆಯ ಬಗ್ಗೆಯೂ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ನಿತ್ಯ ವರದಿ ಕೇಳುತ್ತಿದ್ದಾರೆ. ಹೀಗಾಗಿ, ಆಯಾ ದಿನ ಸಂಗ್ರಹಿಸುವ ಸಹಿಗಳ ವಿವರವನ್ನೂ ಕೆಪಿಸಿಸಿಗೆ ನೀಡಬೇಕು' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ಚಿಟಿಕೆ ಸುದ್ದಿ

ದರೋಜಿ ಬಳಿ ಸ್ಕಾಪ್ಸ್ ಗೂಬೆ ಗೋಚರ

ಸ್ಕಾಪ್ಸ್ ಗೂಬೆ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ದರೋಜಿ ಕರಡಿಧಾಮದ ಬಳಿ ಈ ಭಾಗದಲ್ಲಿ ಅತ್ಯಂತ ವಿರಳವಾಗಿರುವ ಭಾರತೀಯ ಸ್ಕಾಪ್ಸ್ ಗೂಬೆ ಕ್ಯಾಮೆರಾ ಕಣ್ಣಿಗೆ ಸೆರೆಸಿಕ್ಕಿದೆ.

ಕಿವಿಯಂತಹ ಗರಿಯನ್ನು ಹೊಂದಿರುವ ಬೂದು ಬಣ್ಣದ ಗೂಬೆ 20ರಿಂದ 25 ಸೆಂ.ಮೀ ಉದ್ದವಿದೆ. ಕಣ್ಣು ಕಡು ಕಪ್ಪು. ದೇಹದ ಬಣ್ಣ ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವುದರಿಂದ ಹಗಲಿನಲ್ಲಿ ಇದನ್ನು ಗುರುತಿಸುವುದು ಕಷ್ಟ. ಈ ಗೂಬೆಗೆ 'ಛದ್ಮವೇಷಧಾರಿ' ಎಂದೂ ಕರೆಯಲಾಗುತ್ತದೆ.

ಶನಿವಾರ ರಾತ್ರಿ ಗೂಬೆಯ 'ವಟ್ ವಟ್' ಸದ್ದಿನಿಂದ ಜಾಗೃತರಾದ ಪಕ್ಷಿ ವೀಕ್ಷಕರಾದ ಸವ್ಯಸಾಚಿ ರಾಯ್, ಶ್ರೀಧರ ಪೆರುಮಾಳ್, ಪಂಪಯ್ಯ ಸ್ವಾಮಿ ಮಳೀಮಠ ಅವರು ಗೂಬೆಯ ಚಲನವಲನ ಹಿಂಬಾಲಿಸಿದ್ದರು. ಶ್ರೀಧರ ಪೆರುಮಾಳ್ ಅವರ ಕ್ಯಾಮೆರಾ ಕಣ್ಣಿನಲ್ಲಿ ಸೆರೆಯಾಯಿತು.

'ಪಶ್ಚಿಮಘಟ್ಟದಲ್ಲಿ ಇಂತಹ ಗೂಬೆ ಗೋಚರಿಸುವುದು ಅಪರೂಪ. ಬಳ್ಳಾರಿ– ಹೊಸಪೇಟೆ ವ್ಯಾಪ್ತಿಯಲ್ಲಿ ಇದು ಕಾಣಿಸಿದ್ದೇ ಇಲ್ಲ' ಎಂದು ಪಂಪಯ್ಯಸ್ವಾಮಿ ಮಳೀಮಠ 'ಪ್ರಜಾವಾಣಿ'ಗೆ ತಿಳಿಸಿದರು.

ಚಲನಚಿತ್ರ ನಟ ಶಿವರಾಜ್‌ಕುಮಾರ್– ಗೀತಾ ದಂಪತಿ ಭಾನುವಾರ ಹಾಸನದ ಹಾಸನಾಂಬೆ ದೇಗುಲಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದರು

ಭ್ರಷ್ಟ ಅಧಿಕಾರಿಗಳ ವರ್ಗಾಯಿಸಿ: ರಾಯರಡ್ಡಿ

ಕೊಪ್ಪಳ: ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಭ್ರಷ್ಟಾಚಾರ ಕುರಿತು ಸಾರ್ವಜನಿಕರಿಂದ ದೂರುಗಳಿದ್ದು, ಆರೋಪಿತ ಅವರನ್ನು ವರ್ಗಾವಣೆ ಮಾಡಬೇಕು ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದು, ಕೆಲ ಅಧಿಕಾರಿಗಳಿಗೆ ಕಾನೂನಿನ ಜ್ಞಾನವಿಲ್ಲ, ಹತ್ತಾರು ವರ್ಷಗಳಿಂದ ಜಿಲ್ಲೆಯಲ್ಲಿ ಬೀಡು ಬಿಟ್ಟಿದ್ದಾರೆ' ಎಂದು ತಿಳಿಸಿದ್ದಾರೆ.

ರಾಯರಡ್ಡಿ ಪತ್ರ ಬರೆದ ದಿನವೇ ಇಲಾಖೆಯ ಬಳ್ಳಾರಿ ವಲಯದ ಅಧಿಕಾರಿಗಳು ತಮ್ಮ ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆದು ವರ್ಗಾವಣೆಗೆ ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

'ಪರಿಹಾರಕ್ಕಾಗಿ ₹8,500 ಕೋಟಿ ಕೊಡಿಸಲಿ'

ಮಂಡ್ಯ: 'ರಾಜ್ಯದಲ್ಲಿ 14 ಲಕ್ಷ ಹೆಕ್ಟೇರ್ ಬೆಳೆ ನಷ್ಟವಾಗಿದೆ. 15 ಜಿಲ್ಲೆಗಳಲ್ಲಿ ಹಾನಿ ಸಂಭವಿಸಿದೆ. ಎನ್‌ಡಿಆರ್‌ಎಫ್ ನಿಗದಿಪಡಿಸಿದ್ದಕ್ಕಿಂತಲೂ ₹8,500 ಕೋಟಿ ಹೆಚ್ಚುವರಿ ಬೇಕಿದ್ದು, ಕೇಂದ್ರ ಸಚಿವರು ಮತ್ತು ಸಂಸದರು ದನಿ ಎತ್ತಬೇಕು' ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಒತ್ತಾಯಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದಲ್ಲಿ ರಸಗೊಬ್ಬರ ಕೊರತೆಯಾದಾಗ ಎಚ್‌ಡಿಕೆಗೆ ಪತ್ರ ಬರೆದಿದ್ದೆ. ಕೊಡಿಸಲಿಲ್ಲ. ಕೇಂದ್ರ ಮಂತ್ರಿಯಾಗಿ ಅವರ ಕೊಡುಗೆ ಏನು? ಅವರಿಂದ ರಾಜ್ಯಕ್ಕೆ ಒಂದೇ ಒಂದು ರೂಪಾಯಿಯ ಉಪಯೋಗವೂ ಆಗಿಲ್ಲ' ಎಂದು ಆರೋಪಿಸಿದರು.

'ತಡೆ'ಯ ಮಧ್ಯೆಯೂ ಪಥಸಂಚಲನ

ಆರ್‌ಎಸ್‌ಎಸ್ ಪಥಸಂಚಲನಕ್ಕೆ ಕಡೇಗಳಿಗೆಯಲ್ಲಿ ಅನುಮತಿ ನಿರಾಕರಣೆ; ಕಾರ್ಯಕರ್ತರ ವಶ

ಪ್ರಜಾವಾಣಿ ವಾರ್ತೆ

ಸೇಡಂ (ಕಲಬುರಗಿ ಜಿಲ್ಲೆ): ಸೇಡಂನಲ್ಲಿ ಆರ್‌ಎಸ್‌ಎಸ್ ಶತಾಬ್ದಿ ನಿಮಿತ್ತ ಭಾನುವಾರ ಏರ್ಪಡಿಸಿದ್ದ ಗಣವೇಷಧಾರಿಗಳ ಪಥಸಂಚಲನ ಭಾನುವಾರ ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಪೊಲೀಸರ ತಡೆಯ ನಡುವೆಯೂ ಆಕರ್ಷಕ ಪಥಸಂಚಲನ ಜರುಗಿತು.

ಪಥಸಂಚಲನಕ್ಕೆ ಮಧ್ಯಾಹ್ನ 1 ಗಂಟೆಗೆ ನೂರಾರು ಗಣವೇಷಧಾರಿಗಳು ನರ್ಮದಾ ಕಾಲೇಜು ಆವರಣದಲ್ಲಿ ಸೇರಿದ್ದರು. ಮಧ್ಯಾಹ್ನ 3 ಗಂಟೆ ಹೊತ್ತಿಗೆ ಪಥಸಂಚಲನ ಆರಂಭವಾಯಿತು. ಡಿಬಿಆರ್ ಕಾಂಪೌಂಡ್ ಮೂಲಕ ಮುಖ್ಯರಸ್ತೆಗೆ ಬಂದಂತೆ ಪೊಲೀಸರು ಗಣವೇಷಧಾರಿಗಳಿಗೆ ತಡೆಯೊಡ್ಡಿದರು.

ಭಾನುವಾರ ಪಥಸಂಚಲನ ನಡೆಸಲು ಅವಕಾಶ ನೀಡುವಂತೆ ಆರ್‌ಎಸ್‌ಎಸ್‌ನಿಂದ ಶನಿವಾರ ರಾತ್ರಿ ಮನವಿ ಸಲ್ಲಿಕೆಯಾಗಿತ್ತು. ಪಥ ಸಂಚಲನದಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಬಹುದು ಎಂಬ ಕಾರಣ ನೀಡಿ ಸೇಡಂ ತಹಶೀಲ್ದಾರ್ ಶ್ರೀಯಾಂಕ ಧನಶ್ರೀ ಅವರು ಅನುಮತಿ ನಿರಾಕರಿಸಿದರು.

'ಪರವಾನಗಿ' ಇಲ್ಲದ ಕಾರಣಕ್ಕೆ ಗಣವೇಷಧಾರಿಗಳನ್ನು ವಶಕ್ಕೆ ಪಡೆದು ನಾಲ್ಕೈದು ಬಸ್‌ಗಳನ್ನು ಹತ್ತಿಸಿದರು. ಇದನ್ನು ಸಾರ್ವಜನಿಕರು ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದರು. ಕೆಲಕಾಲ ಸಾರ್ವಜನಿಕರು ಮತ್ತು ಪೊಲೀಸರ ಮಧ್ಯೆ ವಾಗ್ವಾದ–ನೂಕು ನುಗ್ಗಲು ಉಂಟಾಯಿತು.

ಕಲಬುರಗಿ ಜಿಲ್ಲೆಯ ಸೇಡಂನಲ್ಲಿ ಭಾನುವಾರ ಆರ್‌ಎಸ್‌ಎಸ್ ಪಥಸಂಚಲನದ ವೇಳೆ ಗಣವೇಷಧಾರಿಗಳನ್ನು ಪೊಲೀಸರು ವಶಕ್ಕೆ ಪಡೆಯಲು ಮುಂದಾದ ಕ್ಷಣ...

'ಘೋಷ್' ವಾದ್ಯ ತಂಡದವರನ್ನು ಪೊಲೀಸರು ವಶಕ್ಕೆ ಪಡೆದು ಬಸ್ ಏರಿಸಿದರು. ಬಸ್‌ನಲ್ಲೇ 'ವಾದ್ಯ ನುಡಿಸಿ' ಆಕ್ರೋಶ ವ್ಯಕ್ತಪಡಿಸಿದರು. 'ಭಾರತ ಮಾತಾಕಿ ಜೈ' ಎಂದು ಜೈಕಾರ ಮೊಳಗಿಸಿದರು.

ಕೆಲ ಹೊತ್ತಿನ ಬಳಿಕ ವಶಕ್ಕೆ ಪಡೆದಿದ್ದ ಗಣವೇಷಧಾರಿಗಳನ್ನು ಪೊಲೀಸರು ಬಸ್ ನಿಲ್ದಾಣ, ತಾಲ್ಲೂಕು ಪಂಚಾಯಿತಿ ಸೇರಿದಂತೆ ವಿವಿಧೆಡೆ ಬಿಡುಗಡೆ ಮಾಡಿದರು. ನಂತರ ಪುನಃ ಗಣವೇಷಧಾರಿಗಳು ಅಲ್ಲಿಂದಲೇ ತಮ್ಮ ಪಥಸಂಚಲನ ಪ್ರಾರಂಭಿಸಿ ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಹೆಜ್ಜೆಹಾಕಿದರು.

ಪಥ ಸಂಚಲನ ಬಂದಂತೆ ಜನರು ಗಣವೇಷಧಾರಿಗಳ ಮೇಲೆ ಪುಷ್ಪವೃಷ್ಟಿಗೈದರು. ಗಣವೇಷಧಾರಿಗಳು ಬಹುತೇಕ ನಿಗದಿತ ಮಾರ್ಗದಲ್ಲೇ ನಿಗದಿಯಂತೆ ಸಾಗಿ ನರ್ಮದಾ ಕಾಲೇಜು ಬಳಿ ಸಂಪನ್ನಗೊಂಡಿತು.

ನಡೆಯದ ಪಥಸಂಚಲನ

ಚಿತ್ತಾಪುರ: ಪಟ್ಟಣದಲ್ಲಿ ಭಾನುವಾರ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪಥ ಸಂಚಲನ ನಡೆಸಲು ಅನುಮತಿಗಾಗಿ ಸಲ್ಲಿಸಿದ್ದ ಅರ್ಜಿಯನ್ನು ತಹಶೀಲ್ದಾರ್ ನಾಗಯ್ಯ ಹಿರೇಮಠ ತಿರಸ್ಕರಿಸಿದ್ದಾರೆ. ಹೀಗಾಗಿ ಪಥಸಂಚಲನ ನಡೆಯಲಿಲ್ಲ.

ಶಿವಮೊಗ್ಗ; ಅನುಮತಿ ಇಲ್ಲದೇ ಪಥಸಂಚಲನ

ಶಿವಮೊಗ್ಗ: ತಾಲ್ಲೂಕಿನ ಹಸೂಡಿ ಗ್ರಾಮ ಹಾಗೂ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಪಟ್ಟಣದಲ್ಲಿ ಭಾನುವಾರ ಆರ್‌ಎಸ್‌ಎಸ್ ಪಥ ಸಂಚಲನ ನಡೆಯಿತು. ಬಿಜೆಪಿಯ ವಿಭಾಗೀಯ ಮಾಜಿ ಪ್ರಭಾರಿ ಹಾಗೂ ಭದ್ರಾ ಕಾಡಾ ಮಾಜಿ ಅಧ್ಯಕ್ಷ ಗಿರೀಶ್ ಪಟೇಲ್ ಹೊಳೆಹೊನ್ನೂರಿನಲ್ಲಿ ನಡೆದ ಪಥ ಸಂಚಲನದ ನೇತೃತ್ವ ವಹಿಸಿದ್ದರು.

ಹಸೂಡಿಯಲ್ಲಿ ಶಿವಮೊಗ್ಗ ಶಾಸಕ ಎಸ್.ಎನ್.ಚನ್ನಬಸಪ್ಪ, ಮಾಜಿ ಶಾಸಕ ಕೆ.ಬಿ.ಅಶೋಕ ನಾಯ್ಕ ಗಣವೇಷಧಾರಿಗಳಾಗಿ ಪಾಲ್ಗೊಂಡಿದ್ದರು.

ಹಸೂಡಿ, ಹೊಳೆಹೊನ್ನೂರಿನಲ್ಲಿ ಪಥ ಸಂಚಲನಕ್ಕೆ ಅನುಮತಿ ನೀಡಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೈಸೂರು, ಬೆಳಗಾವಿಯಲ್ಲಿ ಅನುಮತಿ: ಮೈಸೂರು: ಹಾಸನ ಜಿಲ್ಲೆಯ ಆಲೂರು, ಮಂಡ್ಯ ಜಿಲ್ಲೆಯ ಮಳವಳ್ಳಿ, ಹೊಳಲು ಮತ್ತು ಪಾಂಡವಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಡೆದಿದ್ದು, ಅನುಮತಿ ಪಡೆಯಲಾಗಿತ್ತು. ಮುಂಜಾಗ್ರತೆಯಾಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ಸವದತ್ತಿ ವರದಿ (ಬೆಳಗಾವಿ ಜಿಲ್ಲೆ): ನಗರದಲ್ಲಿ ಭಾನುವಾರ ಪೊಲೀಸ್ ಅನುಮತಿ ಪಡೆದು ಆರ್‌ಎಸ್‌ಎಸ್ ಪಥಸಂಚಲನ ನಡೆಯಿತು.

ವರದಿಗೆ ಹೈಕೋರ್ಟ್ ಆದೇಶ...

ಒಂದನೇ ಪುಟದಿಂದ...

'ತಹಶೀಲ್ದಾರ್ ಕ್ರಮವು, ಅರ್ಜಿದಾರರಿಗೆ ಸಂವಿಧಾನ ಕೊಡಮಾಡಿರುವ 19(1) ಎ ಹಾಗೂ 21ನೇ ವಿಧಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಮಾತ್ರವಲ್ಲ, ಪಥಸಂಚಲನಕ್ಕೆ ಪೂರ್ವಾನುಮತಿ ಪಡೆಯಲು ಸಂವಿಧಾನದ ಯಾವುದೇ ಭಾಗದಲ್ಲೂ ನಿಯಮ ವಿಧಿಸಿಲ್ಲ' ಎಂದು ವಿವರಿಸಿದರು.

ಇದನ್ನು ಅಲ್ಲಗಳೆದ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ (ಎಜಿ) ಕೆ.ಶಶಿಕಿರಣ ಶೆಟ್ಟಿ, 'ಆರ್‌ಎಸ್‌ಎಸ್ ಪಥಸಂಚಲನ ನಡೆಸಲು ಉದ್ದೇಶಿಸಿದ್ದ ದಿನವೇ (ಅ.19) ಭೀಮ್ ಆರ್ಮಿ ಮತ್ತು ಭಾರತೀಯ ದಲಿತ ಪ್ಯಾಂಥರ್ ಸಂಘಟನೆಗಳೂ ಅದೇ ಸ್ಥಳದಲ್ಲಿ ಸಮಾವೇಶ ನಡೆಸಲು ಉದ್ದೇಶಿಸಿರುವ ಕಾರಣ ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ ತಹಶೀಲ್ದಾರ್ ಅನುಮತಿ ನಿರಾಕರಿಸಿದ್ದಾರೆ' ಎಂದು ಸಮರ್ಥಿಸಿಕೊಂಡರು.

ಇದಕ್ಕೆ ನ್ಯಾಯಪೀಠ, 'ಪಥಸಂಚಲನಕ್ಕೆ ಯಾವ ಕಾನೂನಿನಡಿ ಯಾವ ಪ್ರಾಧಿಕಾರದಲ್ಲಿ ಅನುಮತಿ ಕೋರಬೇಕು ಎಂಬ ಕಾನೂನಿನ ಜಿಜ್ಞಾಸೆ ಇದರಲ್ಲಿ ಅಡಗಿದೆ. ಗುಂಪೊಂದು ಪಂಥಸಂಚಲನ ನಡೆಸಲು ಅವಕಾಶವಿದೆಯೇ? ಅದು ಪ್ರತಿಭಟನೆಯೇ ಆಗಿರಬೇಕೆಂದೇನಿಲ್ಲವಲ್ಲಾ, ಜನರಲ್ಲಿ ಜಾಗೃತಿ ಮೂಡಿಸುವ ಇಚ್ಛೆಯನ್ನೂ ಹೊಂದಿರಬಹುದಲ್ಲವೇ? ಇದಕ್ಕೆಲ್ಲಾ ಪೂರ್ವಾನುಮತಿ ಬೇಕೆ? ಹಾಗಾದರೆ ಯಾರಿಂದ ಪಡೆಯಬೇಕು? ಇದಕ್ಕೆಂದೇ ಯಾವ ಕಾನೂನು ಜಾರಿಯಲ್ಲಿದೆ' ಎಂದು ಶಶಿಕಿರಣ ಶೆಟ್ಟಿ ಅವರನ್ನು ಪ್ರಶ್ನಿಸಿತು.

ಇದಕ್ಕೆ ಎಜಿ, 'ಬೆಂಗಳೂರಿನಲ್ಲಿ ಪ್ರತಿಭಟನೆ, ರ‍್ಯಾಲಿ, ಸಮಾವೇಶ ನಡೆಸುವುದಕ್ಕೆ ಸಂಬಂಧಿಸಿದಂತೆ 2021ರ ಅಕ್ಟೋಬರ್ 29ರಂದು ಹೊರಡಿಸಲಾಗಿರುವ ಆದೇಶ ಜಾರಿಯಲ್ಲಿದೆ. ಇದರ ನಿಬಂಧನೆಗಳನ್ನು ರಾಜ್ಯದ ಬೇರೆಡೆಗೂ ಅನ್ವಯಿಸಬಹುದು. ಕರ್ನಾಟಕ ಪೊಲೀಸ್ ಕಾಯ್ದೆ-1963ರ ಕಲಂ 31, 35 ಮತ್ತು 64 ಇದಕ್ಕೆ ಪೂರಕವಾಗಿವೆ. ಇದನ್ನು ಹೊರತುಪಡಿಸಿ ಮನವಿ ಪರಿಗಣಿಸಲು ಯಾವುದೇ ಕಾಯ್ದೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ನ್ಯಾಯಪೀಠ, 'ಬೇರೊಂದು ದಿನ ಪಥಸಂಚಲನ ನಡೆಸಲು ಸಾಧ್ಯವೇ' ಎಂದು ಅರುಣ್ ಶ್ಯಾಮ್ ಅವರನ್ನು ಪ್ರಶ್ನಿಸಿತು.ಇದಕ್ಕೆ ಅರುಣ್ ಶ್ಯಾಮ್, 'ಬರುವ ನವೆಂಬರ್ 2ರಂದು ಆಗಬಹುದು' ಎಂದರು.

ಇದಕ್ಕೆ ಶಶಿಕಿರಣ ಶೆಟ್ಟಿ, 'ಕಾರ್ಯಕ್ರಮ ನಡೆಸಲು ನಿರ್ದಿಷ್ಟ ಪ್ರದೇಶ ಗೊತ್ತು ಮಾಡಲಾಗುವುದು' ಎಂದರು.

ಇದನ್ನು ಆಕ್ಷೇಪಿಸಿದ ಅರುಣ್ ಶ್ಯಾಮ್, 'ಈಗಾಗಲೇ ಸಲ್ಲಿಸಿರುವ ನಮ್ಮ ಈ ಮೊದಲಿನ ಪಥಸಂಚಲದ ಮಾರ್ಗವನ್ನೇ ಪರಿಗಣಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಶಶಿಕಿರಣ ಶೆಟ್ಟಿ, 'ಸರ್ಕಾರ ಈ ವಿಚಾರವನ್ನು ಪರಿಶೀಲಿಸಲಿದೆ' ಎಂದರು.

ಸುದೀರ್ಘ ವಾದ- ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರು ಪಥಸಂಚಲನಕ್ಕೆ ಅನುಮತಿ ಕೋರಿ ಕಲಬುರಗಿ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಮತ್ತು ಸ್ಥಳೀಯ ಸಕ್ಷಮ ಠಾಣೆಯ ಪೊಲೀಸರಿಗೆ ಹೊಸದಾಗಿ ಮನವಿ ಸಲ್ಲಿಸಬೇಕು. 2025ರ ಅಕ್ಟೋಬರ್ 18ರಂದು ತಹಶೀಲ್ದಾರ್ ಎತ್ತಿರುವ ವಿಚಾರಗಳಿಗೆ ನಿರ್ದಿಷ್ಟ ಉತ್ತರ ನೀಡಬೇಕು ಮತ್ತು ರಾಜ್ಯ ಸರ್ಕಾರ ಪಥಸಂಚಲನದ ಮಾರ್ಗವನ್ನು ಪರಿಗಣಿಸಿ ಇದೇ 24ಕ್ಕೆ ನ್ಯಾಯಾಲಯಕ್ಕೆ ಈ ಕುರಿತಂತೆ ವರದಿ ಸಲ್ಲಿಸಬೇಕು. ವರದಿ ಆಧರಿಸಿ ಮುಂದಿನ ಕ್ರಮ ನಿರ್ಧರಿಸಲಾಗುವುದು' ಎಂದು ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಇದೇ 19ರಂದು ಚಿತ್ತಾಪುರದ ಬಜಾಜ್ ಕಲ್ಯಾಣ ಮಂಟಪದಿಂದ ಶುರುವಾಗಿ ಮತ್ತೆ ಅಲ್ಲಿಗೇ ಮರಳುವಂತೆ ಪಥ ಸಂಚಲನ ಮತ್ತು ಆನಂತರದ ಸಾರ್ವಜನಿಕ ಸಮಾವೇಶ ನಡೆಸಲು ಅನುಮತಿ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಿ ಅಕ್ಟೋಬರ್ 13ರಂದು ತಹಶಿಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಈ ಮನವಿಯನ್ನು ತಹಶೀಲ್ದಾರ್ ಅಕ್ಟೋಬರ್ 18ರಂದು ನಿರಾಕರಿಸಿದ್ದರು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಈ ಅರ್ಜಿ ಸಲ್ಲಿಸಲಾಗಿದೆ.

'ಪಥ ಸಂಚಲನ ಅವಕಾಶ ನಿರಾಕರಣೆ'

ಒಂದನೇ ಪುಟದಿಂದ...

ಸಮಾಜದಲ್ಲಿ ಶಾಂತಿ ಕಾಪಾಡುವ ಜವಾಬ್ದಾರಿ ಸರ್ಕಾರದ್ದು ಎಂದು ನ್ಯಾಯಮೂರ್ತಿ ಹೇಳಿದ್ದಾರೆ. ಅನುಮತಿ ನೀಡುವುದು ಸರ್ಕಾರದ ವಿವೇಚನೆಗೆ ಬಿಟ್ಟದ್ದು ಎಂದೂ ಅವರು ಹೇಳಿದ್ದಾರೆ' ಎಂದರು.

'ನನ್ನ ಕ್ಷೇತ್ರದಲ್ಲಿ (ಚಿತ್ತಾಪುರ) ಪಥಸಂಚಲನ ನಡೆಸಲು ಉದ್ದೇಶಪೂರ್ವಕವಾಗಿ ಆರ್‌ಎಸ್‌ಎಸ್‌ನವರು ಯೋಜನೆ ರೂಪಿಸಿದ್ದರು. ನನಗೆ ಬುದ್ದಿ ಕಲಿಸಲು ಮಾಡಿದ್ದರು ಎಂದೆನಿಸುತ್ತಿದೆ. ನನಗೆ ಬೆದರಿಕೆ ಹಾಕಿದ ವ್ಯಕ್ತಿಯ ಬಂಧನ ಆಗಿದೆ' ಎಂದೂ ಹೇಳಿದರು.

'ಭೂಗತ ಸಂಘಟನೆ ಅಲ್ಲವೇ?'

ಒಂದನೇ ಪುಟದಿಂದ...

'ಎಕ್ಸ್' ಮಾಡಿರುವ ಅವರು, 'ದೊಣ್ಣೆ ಹಿಡಿದು ಜನರಲ್ಲಿ ಭಯ ಹುಟ್ಟಿಸಬಹುದೇ ಹೊರತು ಭರವಸೆ ಮೂಡಿಸಲು ಸಾಧ್ಯವಿಲ್ಲ. ದೇಶದ ಜನರಲ್ಲಿ ಆತ್ಮವಿಶ್ವಾಸ, ಧೈರ್ಯ, ಭರವಸೆ ಮೂಡಿಸಿರುವುದು ಬಾಬಾ ಸಾಹೇಬರು ನೀಡಿರುವ ಸಂವಿಧಾನ. ಪಥ ಸಂಚಲನ ಸಾಗುವ ದ್ವೇಷದ ಬೀದಿಯಲ್ಲಿ ಪ್ರೀತಿ ಹುಟ್ಟುವುದಾದರೂ ಹೇಗೆ' ಎಂದೂ ಕೇಳಿದ್ದಾರೆ.

'ದೊಣ್ಣೆ, ಲಾಟಿ, ಬೂಟಿನ ಪಥಸಂಚಲನದಿಂದ ಸಮಾಜದಲ್ಲಿ ಭಯ, ದ್ವೇಷದ ವಾತಾವರಣ ಸೃಷ್ಟಿಸಲಾಗುತ್ತಿದೆ. ಪಥಸಂಚಲನದ ಉದ್ದೇಶವೇ ಭಯದ ವಾತಾವರಣದ ನಿರ್ಮಾಣ ಮಾಡುವುದು ಎನ್ನುವುದು ಸ್ಪಷ್ಟ. ಆರ್‌ಎಸ್‌ಎಸ್ 'ಪೇಯ್ಡ್' ಸಂಘಟನೆಯಲ್ಲ ಎಂದಾದರೇ ದೇಶ- ವಿದೇಶಿ ಮೂಲದಿಂದಲೂ ಹರಿದು ಬರುತ್ತಿರುವ ಹಣಕ್ಕೆ ಹೊಣೆ ಯಾರು? ವಿದೇಶದಿಂದ ಆರ್‌ಎಸ್‌ಎಸ್‌ಗೆ ಮಾತ್ರ ಹಣ ಬರಲಿ ಎಂಬ ಕಾರಣಕ್ಕಾಗಿಯೇ ಅಲ್ಲವೇ ಎನ್‌ಜಿಒಗಳಿಗೆ ವಿದೇಶಿ ನಿಧಿ ಬರುವುದನ್ನು ನಿಲ್ಲಿಸಿರುವುದು. ನೂರು ವರ್ಷದ ಇತಿಹಾಸದಲ್ಲಿ ದೊಣ್ಣೆ ಹಿಡಿದು ಸಾಗಿರುವ ಪಥಸಂಚಲನದಿಂದ ಸಮಾಜಕ್ಕೆ ಆಗಿರುವ ಲಾಭವೇನು? ಹಾದಿ ಬೀದಿಯಲ್ಲಿ ದೊಣ್ಣೆ ಹಿಡಿದು ಶಾಂತಿ-ಸುವ್ಯವಸ್ಥೆಯನ್ನು ಹಾಳು ಮಾಡಿದ್ದೇ ಸಾಧನೆಯೇ? ದೊಣ್ಣೆ ಜನರ ಕೈಗೆ ಸಿಕ್ಕಿ ಬಡಿಸಿಕೊಳ್ಳಬೇಡಿ, ಬೇಗ ಎಚ್ಚೆತ್ತುಕೊಳ್ಳದಿದ್ದರೇ ಸಂಘಕ್ಕೆ ಉಳಿಗಾಲವಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಖರೀದಿ ಭರಾಟೆ...

ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ದೀಪಾವಳಿ ಹಬ್ಬದ ಅಂಗವಾಗಿ ಭಾನುವಾರ ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯಲ್ಲಿ ಸಾರ್ವಜನಿಕರು ಹೂವು ಖರೀದಿಸಿದರು

ಬಿಜೆಪಿ ಅವಧಿಯ ಆದೇಶ: ಡಿಕೆಶಿ

ಬೆಂಗಳೂರು: 'ಆರ್‌ಎಸ್‌ಎಸ್ ವಿಚಾರದಲ್ಲಿ ನಾವು ಹೊಸದಾಗಿ ನಿಯಮ ರೂಪಿಸಿಲ್ಲ. ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ್ದ ಆದೇಶವನ್ನೇ ಪುನಃ ಹೊರಡಿಸಿದ್ದೇವೆ ಅಷ್ಟೇ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಕೋರಮಂಗಲದ ವೀರ ಯೋಧ ಉದ್ಯಾನದಲ್ಲಿ ಭಾನುವಾರ ನಡೆದ ಸಂವಾದದಲ್ಲಿ ಜನರು ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸಿದರು. '2013ರಲ್ಲಿ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದಾಗ ಹೊರಡಿಸಿದ್ದ ಆದೇಶವನ್ನು ನಾವು ಮತ್ತೆ ಜಾರಿಗೊಳಿಸುತ್ತಿದ್ದೇವೆ' ಎಂದು ಹೇಳಿದರು.

'ಪೊಲೀಸರ ಮೇಲೆ ಕ್ರಮವೇಕಿಲ್ಲ?'

ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಗಣವೇಷಧಾರಿ ಆಗಿದ್ದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಅಮಾನತು ಮಾಡಿದ್ದಾರೆ. ಆದರೆ, ಚನ್ನಪಟ್ಟಣದಲ್ಲಿ ನಡೆದ ಕವ್ವಾಲಿಯಲ್ಲಿ ಮೈಮೇಲೆ ನೋಟುಗಳನ್ನು ಸುರಿಸಿಕೊಂಡ ಪೊಲೀಸರ ಮೇಲೇಕೆ ಕ್ರಮ ತೆಗೆದುಕೊಂಡಿಲ್ಲ? ಕಾಂಗ್ರೆಸ್ ಸರ್ಕಾರವು ಪ್ರತಿದಿನ ಆರ್‌ಎಸ್‌ಎಸ್ ಜಪ ಮಾಡುತ್ತಿದೆ. ಇದು, ಆರ್‌ಎಸ್‌ಎಸ್‌ನ ಬಗ್ಗೆ ಚರ್ಚೆ ಮಾಡುವ ಸಂದರ್ಭವೇ? ರಾಜ್ಯದಲ್ಲಿ ಎಷ್ಟೊಂದು ಸಮಸ್ಯೆಗಳಿವೆ. ಅವುಗಳನ್ನು ನಿವಾರಿಸುವುದು ಬಿಟ್ಟು, ಒಂದು ಸಂಘಟನೆ ವಿರುದ್ಧ ಚರ್ಚಿಸುತ್ತಿದ್ದರೆ ಏನು ಉಪಯೋಗ?

ಎಚ್.ಡಿ.ಕುಮಾರಸ್ವಾಮಿ,
ಕೇಂದ್ರ ಸಚಿವ

ಜನತಂತ್ರಕ್ಕೆ ಜಯ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಹೈಕೋರ್ಟ್ ಅನುಮತಿ ನೀಡಿರುವುದು ಜನತಂತ್ರಕ್ಕೆ ಸಿಕ್ಕ ಗೆಲುವು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಪ್ರಜಾತಂತ್ರದ ಹಕ್ಕನ್ನು ಕಸಿದುಕೊಳ್ಳಲು ಹೊರಟಿದ್ದ ಕಾಂಗ್ರೆಸ್ ಸರ್ಕಾರಕ್ಕೆ ಹೈಕೋರ್ಟ್ ಚಾಟಿ ಬೀಸಿದೆ. ಸಂವಿಧಾನದ ಘನತೆಯನ್ನು ಎತ್ತಿಹಿಡಿದಿದೆ. ಪ್ರಜಾಪ್ರಭುತ್ವದಲ್ಲಿ ಸರ್ವಾಧಿಕಾರಕ್ಕೆ ಅವಕಾಶವಿಲ್ಲ ಎಂದು ಹೈಕೋರ್ಟ್ ಸ್ಪಷ್ಟ ಸಂದೇಶ ನೀಡಿದೆ. ದಿನಬೆಳಗಾದರೆ ಸಂವಿಧಾನದ ಬಗ್ಗೆ ಬೊಗಳೆ ಬಿಡುವವರಿಗೆ, ತಕ್ಕ ಪಾಠ ಮಾಡಿದೆ' ಎಂದಿದ್ದಾರೆ.

'ಸಾಂಸ್ಕೃತಿಕ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳಿಗೆ ಕಾನೂನು ಸುವ್ಯವಸ್ಥೆಯ ಷರತ್ತು ವಿಧಿಸಿ, ಅನುಮತಿ ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯ. ಕಾನೂನು ಮತ್ತು ಸುವ್ಯವಸ್ಥೆ ಹೆಸರಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಉಸಿರುಗಟ್ಟಿಸಲು ಮುಂದಾದ ಕಾಂಗ್ರೆಸ್‌ನ ಕುಟಿಲ ತಂತ್ರವು, ನ್ಯಾಯಾಲಯದ ತೀರ್ಪಿನಿಂದ ನಿಷ್ಕ್ರಿಯವಾಗಿದೆ' ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನ, ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿದೆ ತಹಶೀಲ್ದಾರ್ ಅವರು ನೀಡಿದ್ದ ಹಿಂಬರಹವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ತಹಶೀಲ್ದಾರ್ ಕ್ರಮಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದರು. ಪ್ರಿಯಾಂಕ್ ಖರ್ಗೆ ಅವರನ್ನು ಟೀಕಿಸಿದ್ದರು.

> **ಮುಖ್ಯಮಂತ್ರಿ ಅಥವಾ ಉಪ ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿರಿಸಿ, ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್‌ನ ಮೇಲೆ ಮುಗಿಬಿದ್ದಿದ್ದಾರೆ**
> **ಲಹರ್ ಸಿಂಗ್ ಸಿರೋಯಾ**
> ರಾಜ್ಯಸಭಾ ಸದಸ್ಯ, ಬಿಜೆಪಿ

> **ನನ್ನ ತಂದೆ ಸ್ವಯಂಸೇವಕರಾಗಿದ್ದರು, ನಾನು ನನ್ನ ಮಗನನ್ನೂ ಸ್ವಯಂಸೇವಕ ಮಾಡಿದ್ದೇನೆ. ವಂಶಪಾರಂಪರ್ಯವಾಗಿ ಅಧಿಕಾರ ಪಡೆದುಕೊಳ್ಳುವ ಪರಂಪರೆ ನಮ್ಮದಲ್ಲ**
> **ವಿ.ಸುನಿಲ್ ಕುಮಾರ್**
> ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ

ಹಿರಿಯ ರಾಜಕಾರಣಿ ಆರ್.ಎಲ್.ಜಾಲಪ್ಪ ಜನ್ಮಶತಮಾನೋತ್ಸವದಲ್ಲಿ ಮುಖ್ಯಮಂತ್ರಿ ಅಭಿಮತ

16 ಬಜೆಟ್ ಮಂಡಿಸಲು ಜಾಲಪ್ಪ ಕಾರಣ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: 'ನಾನು ಹಣಕಾಸು ಸಚಿವನಾಗಲು ಜಾಲಪ್ಪ ಅವರೇ ಕಾರಣ. ಕಂದಾಯ ಖಾತೆ ಬಯಸಿದ್ದೆ. ಹಣಕಾಸು ಸಚಿವ ಆಗಲೇಬೇಕೆಂದು ಸೂಚಿಸಿದರು. ಅವರ ಆಶೀರ್ವಾದದಿಂದ 16 ಬಜೆಟ್ ಮಂಡಿಸುವಂತಾಯಿತು. ಅವರಿಗೆ ಸದಾ ಋಣಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಇಲ್ಲಿ ನಡೆದ ಹಿರಿಯ ರಾಜಕಾರಣಿ, ಕೇಂದ್ರದ ಮಾಜಿ ಸಚಿವ ಆರ್.ಎಲ್.ಜಾಲಪ್ಪ ಅವರ ಜನ್ಮಶತಮಾನೋತ್ಸವ ಹಾಗೂ ಸಂಸ್ಥಾಪಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಜಾಲಪ್ಪ ಅವರೊಂದಿಗೆ ರಾಜಕೀಯ ಒಡನಾಟದ ಹಳೆ ನೆನಪುಗಳನ್ನು ಮೆಲುಕು ಹಾಕಿದರು.

'ರಾಜಕೀಯ ಏಳ್ಗೆಗೆ ಅವರ ಪಾತ್ರ ದೊಡ್ಡದು. ಮನೆಯ ಸದಸ್ಯನಂತೆ ಬೆಳೆಸಿದರು. ಸ್ವಾಭಿಮಾನಿ ಆಗಿದ್ದ ಜಾಲಪ್ಪ, ನನ್ನ ರಾಜಕೀಯ ಬೆಳವಣಿಗೆಗೆ ಕಾರಣಕರ್ತರು. ನನ್ನನ್ನು ಸಿ.ಎಂ ಮಾಡಲೇಬೇಕೆಂದು ದೇವೇಗೌಡರ ಎದುರು ಹಠ ಹಿಡಿದು ಆಗ್ರಹಪೂರ್ವಕವಾಗಿ ಒತ್ತಾಯಿಸಿದ್ದರು. ನಾನು ಮತ್ತು ಜೆ.ಎಚ್. ಪಟೇಲರಲ್ಲಿ ಮುಖ್ಯಮಂತ್ರಿ ಯಾರಾಗಬೇಕೆಂಬ ಚರ್ಚೆ ನಡೆಯುತ್ತಿದ್ದಾಗ ನನ್ನ ಪರ ಗಟ್ಟಿಯಾಗಿ ನಿಂತು ದೇವೇಗೌಡರಿಗೆ ನನ್ನನ್ನೇ ಸಿ.ಎಂ ಮಾಡಬೇಕು ಎಂದು ಒತ್ತಾಯಿಸಿದ್ದನ್ನು ಮರೆಯುವಂತಿಲ್ಲ' ಎಂದರು.

ದೊಡ್ಡಬಳ್ಳಾಪುರದಲ್ಲಿ ಭಾನುವಾರ ನಡೆದ ಆರ್.ಎಲ್.ಜಾಲಪ್ಪ ಜನ್ಮಶತಮಾನೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಧಿಗೆ ಪುಷ್ಪನಮನ ಸಲ್ಲಿಸಿದರು

ಇಂದಿರಾಗಾಂಧಿ ಹೆಸರಲ್ಲಿ ಪೌಷ್ಟಿಕ ಆಹಾರ: ಗ್ಯಾರಂಟಿ ಯೋಜನೆಗಳಿಂದ ಸುಮಾರು ನಾಲ್ಕೂವರೆ ಕೋಟಿ ಜನ ಪ್ರಯೋಜನ ಪಡೆದಿದ್ದಾರೆ. ಬಡವರು, ದಲಿತರು ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾರೆ. ಇಂದಿರಾಗಾಂಧಿ ಅವರ ಹೆಸರಿನಲ್ಲಿ ಪೌಷ್ಟಿಕ ಆಹಾರ ನೀಡುವ ಕುರಿತು ಚಿಂತನೆ ನಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾಲಪ್ಪ ಅಕಾಡೆಮಿ, ಜಾಲಪ್ಪ ಕಾನೂನು ಮಹಾವಿದ್ಯಾಲಯ, ಶತಮಾನೋತ್ಸವ ಭವನ ಉದ್ಘಾಟನೆ, ದೇವರಾಜ ಅರಸ್ ವಸತಿ ಶಾಲೆ ನೂತನ ಕಟ್ಟಡಗಳ ಶಿಲಾನ್ಯಾಸ ನೆರವೇರಿಸಿದರು.

ಪ್ರೊ.ಕೆ.ಆರ್.ರವಿಕಿರಣ್ ಬರೆದಿರುವ 'ಹೃದಯವಂತ ಆರ್.ಎಲ್.ಜಾಲಪ್ಪ ಜೀವನ ಪಥ' ಪುಸ್ತಕವನ್ನು ಇದೇ ಸಂದರ್ಭ ಲೋಕಾರ್ಪಣೆಗೊಳಿಸಿದರು. ಮಾಜಿ ಶಾಸಕ ಆರ್.ಜಿ.ವೆಂಕಟಾಚಲಯ್ಯ ಅವರಿಗೆ ಆರ್.ಎಲ್.ಜಾಲಪ್ಪ ಜನ್ಮಶತಮಾನೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶ್ರೀ ದೇವರಾಜ ಅರಸು ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಜಿ.ಎಚ್. ನಾಗರಾಜ, ಉಪಾಧ್ಯಕ್ಷ ಜೆ.ರಾಜೇಂದ್ರ, ಕಾರ್ಯದರ್ಶಿ ಕೆ.ಜಿ ಹನುಮಂತರಾಜು, ಕರ್ನಾಟಕ ಆರ್ಯ ಈಡಿಗರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ತಿಮ್ಮೇಗೌಡ, ಎಐಸಿಸಿ ಸದಸ್ಯ ಎಂ.ಸಿ.ವೇಣುಗೋಪಾಲ್, ಶಾಸಕರಾದ ಧೀರಜ್ ಮುನಿರಾಜು, ಬೇಳೂರು ಗೋಪಾಲಕೃಷ್ಣ, ಮಾಜಿ ಸಚಿವರಾದ ಕೆ.ಆರ್.ರಮೇಶ್ ಕುಮಾರ್, ಪಿ.ಜಿ. ಆರ್ ಸಿಂಧ್ಯ, ರಾಣಿ ಸತೀಶ್ ಇದ್ದರು.

ಜಾಲಪ್ಪ ಹೆಸರಲ್ಲಿ ಪ್ರಶಸ್ತಿಗೆ ಒತ್ತಾಯ

ಕೃಷಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಸಾಧನೆ ಸಲ್ಲಿಸಿರುವ ಆರ್.ಎಲ್.ಜಾಲಪ್ಪ ಹೆಸರಿನಲ್ಲಿ ಪ್ರಶಸ್ತಿ ನೀಡುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಿದ್ದಾರೆ. ಅವರ ಹೆಸರಿನಲ್ಲಿ ರಾಜ್ಯ ಸರ್ಕಾರ ಪ್ರಶಸ್ತಿ ಸ್ಥಾಪನೆ ಮಾಡಬೇಕು. ಸರ್ಕಾರದಿಂದಲೇ ಜಿಲ್ಲೆಯಲ್ಲಿ ಜನ್ಮಶತಮಾನೋತ್ಸವ ಆಚರಿಸಬೇಕೆಂದು ಮಾಜಿ ವಿಧಾನ ಪರಿಷತ್ ಸಭಾಪತಿ ವಿ.ಆರ್.ಸುದರ್ಶನ ಒತ್ತಾಯಿಸಿದರು.

ಗಣಿಗಾರಿಕೆ: ಕರಡಿಬೆಟ್ಟಕ್ಕೆ ಕಂಟಕ

ಕಲ್ಲು ಸ್ಫೋಟ; ಜನ, ವಿದ್ಯಾರ್ಥಿಗಳು, ಮಠಾಧೀಶರಿಗೆ ಪ್ರಾಣಸಂಕಟ

● ಎಂ.ಎನ್.ಯೋಗೇಶ್

ಚಿತ್ರದುರ್ಗ: ಪುಣೆ– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಿಂದ ಕೆಲವೇ ಮೀಟರ್ ದೂರದಲ್ಲಿರುವ, ಕರಡಿಗಳ ಆವಾಸಸ್ಥಾನವಾಗಿದ್ದ 'ಕರಡಿಬೆಟ್ಟ' ಈಗ ಕಲ್ಲು ಗಣಿಗಾರಿಕೆಯಿಂದ ಬರಿದಾಗುವತ್ತ ಸಾಗಿದೆ. ಗಣಿ ಸ್ಫೋಟದಿಂದ ಕರಡಿ ಹಾಗೂ ಮತ್ತಿತರ ಪ್ರಾಣಿ ಸಂಕುಲದ ಜೀವಕ್ಕೆ ಕಂಟಕ ಎದುರಾಗಿದೆ.

ಗುಡ್ಡದಲ್ಲಿ ವಾಸವಿದ್ದ ಕರಡಿಗಳು ಕೆಲವು ವರ್ಷಗಳಿಂದ ನೆಲೆಯಿಲ್ಲದಂತಾಗಿ ಅತ್ತಿತ್ತ ಓಡಾಡುತ್ತ ಹೆದ್ದಾರಿಯ ವಾಹನಗಳ ಚಕ್ರಕ್ಕೆ ಸಿಲುಕಿ ಸಾಯುತ್ತಿವೆ. ಅನತಿ ದೂರದಲ್ಲಿರುವ ಜನವಸತಿ ಪ್ರದೇಶದಲ್ಲಿ ಜನತೆಗೂ ತೀವ್ರ ತೊಂದರೆ ಎದುರಾಗಿದೆ. ಸಮೀಪದಲ್ಲೇ ಮಡಿವಾಳ ಮಾಚಿದೇವ, ಭೋವಿ, ಮೇದಾರ ಕೇತೇಶ್ವರ, ಮಾದಾರ ಚನ್ನಯ್ಯ, ಛಲವಾದಿ ಗುರುಪೀಠಗಳಿದ್ದು ಮಠಾಧೀಶರು, ಮಠದ ಶಾಲಾ ವಿದ್ಯಾರ್ಥಿಗಳು ಸ್ಫೋಟದಿಂದ ಭೀತಿಗೊಳಗಾಗುತ್ತಿದ್ದಾರೆ.

ಈ ಬೆಟ್ಟದ ಕೂಗಳತೆ ದೂರದಲ್ಲಿ ಮುರುಘಾಮಠದ 'ಯೋಗವನ ಬೆಟ್ಟ'ವಿದ್ದು ಅಲ್ಲಿ ಆಯುರ್ವೇದ, ಪ್ರಕೃತಿ ಚಿಕಿತ್ಸಾ ಸೌಲಭ್ಯವಿದೆ. ಚಿಕಿತ್ಸಾಲಯದ ಸುತ್ತಮುತ್ತ ನೂರಾರು ಜಾತಿಯ ವನಮೂಲಿಕೆಗಳಿವೆ. ಗಣಿ ಸ್ಫೋಟದಿಂದಾಗಿ ವನಮೂಲಿಕೆಗಳ ಬೆಳವಣಿಗೆಗೂ ಹಾನಿಯಾಗುತ್ತಿದೆ.

'ಸ್ಫೋಟದ ತೀವ್ರತೆಯಿಂದಾಗಿ ಯೋಗವನ ಬೆಟ್ಟದಲ್ಲಿ 2 ಕೊಳವೆ ಬಾವಿಗಳು ಸ್ಥಗಿತಗೊಂಡಿವೆ. ಮುಸ್ಸಂಜೆಯಲ್ಲಿ ನಡೆಯುವ ಸ್ಫೋಟದ ಶಬ್ದದಿಂದ ಎದೆ ನಡುಗುತ್ತದೆ. ಅಕ್ಕಪಕ್ಕದ ಹಳ್ಳಿಗಳ ಜನರು ಇತ್ತೀಚೆಗೆ ಜಿಲ್ಲಾಧಿಕಾರಿಗೆ ದೂರು ಕೊಟ್ಟಿದ್ದರು. ಕೆಲ ದಿವಸ ಗಣಿಗಾರಿಕೆ ನಿಂತಿತ್ತು. ಆದರೆ ಈಗ ಮತ್ತೆ ಗಣಿಗಾರಿಕೆ ಆರಂಭವಾಗಿದ್ದು ಬೆಟ್ಟವೇ ಖಾಲಿಯಾಗುತ್ತಿದೆ' ಎಂದು ಮುರುಘಾ ಮಠದ ಆಡಳಿತ ಮಂಡಳಿ ಸದಸ್ಯ ಬಸವಕುಮಾರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ದಾವಣಗೆರೆಯಿಂದ ಬೆಂಗಳೂರಿನತ್ತ ಹೊರಟಾಗ ಕತ್ತರಿಸಿದ ಕೇಕ್‌ನಂತೆ ತೋಚುವ ಬೆಟ್ಟ ಕಂಡು ಜನರು ಮರುಗುತ್ತಾರೆ. ಕೆಲವರು ಬೆಟ್ಟದ ಚಿತ್ರ ತೆಗೆದು, ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಾರೆ. ಹಲವು ಯೂಟ್ಯೂಬರ್‌ಗಳು ಬೆಟ್ಟದ ಸ್ಥಿತಿಯ ಬಗ್ಗೆ ವಿಡಿಯೊ ಪ್ರಕಟಿಸಿದ್ದಾರೆ.

'ಬೆಟ್ಟ ಅರ್ಧ ಸೀಳಿದ ಸ್ಥಿತಿ ನೋಡಿದರೆ ಬೇಸರವಾಗುತ್ತದೆ. ಚಿತ್ರದುರ್ಗವು ಬೆಟ್ಟ, ಗುಡ್ಡಗಳ ನಾಡು. ಎಲ್ಲ ಬೆಟ್ಟಗಳೂ ಹೀಗಾದರೆ ದುರ್ಗಕ್ಕೆ ಅರ್ಥವೂ ಇರುವುದಿಲ್ಲ' ಎಂದು ಪ್ರವಾಸಿಗರು ಹೇಳಿದರು.

ಬೆಟ್ಟದ ಸಮೀಪದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಸ್ಮಾರಕ (ಪುಣ್ಯಭೂಮಿ) ಇದೆ. ಅಲ್ಲಿರುವ ಪ್ರತಿಮೆ, ಕಟ್ಟಡಗಳೂ ಸ್ಫೋಟದ ತೀವ್ರತೆಯಿಂದ ಬಿರುಕಾಗುತ್ತಿವೆ. ಅಲ್ಲಿಯೇ ಅಲೆಮಾರಿಗಳ ಗುಡಿಸಲುಗಳಿದ್ದು, ಬಡಜನರು ಸ್ಫೋಟದ ವೇಳೆಯಲ್ಲಿ ಜೀವ ಕೈಯಲ್ಲಿಡಿದು ಬದುಕುತ್ತಿದ್ದಾರೆ.

'ರಾಸಾಯನಿಕ ಬಳಸಿ ಸ್ಫೋಟ ನಡೆಸುತ್ತಿರುವ ಕಾರಣ ಅಂತರ್ಜಲಕ್ಕೆ ಹಾನಿಯಾಗುತ್ತಿದೆ. ಕುಡಿಯುವ ನೀರು ಕಲುಷಿತಗೊಳ್ಳುತ್ತಿದೆ. ಸಮೀಪದಲ್ಲಿ ಜೋಗಿಮಟ್ಟಿ ವನ್ಯಧಾಮ ಇರುವ ಕಾರಣ ಇಲ್ಲಿ ಕಲ್ಲು ಗಣಿ ನಡೆಸಲೇಬಾರದು' ಎಂದು ಜಲತಜ್ಞ ದೇವರಾಜರೆಡ್ಡಿ ತಿಳಿಸಿದರು.

> **ಗಣಿ ಮಾಲೀಕರು ರಾಜಧನ ಕಟ್ಟುತ್ತಿದ್ದು, ಸರ್ಕಾರಕ್ಕೆ ಆದಾಯ ಬರುತ್ತಿದೆ. ಜನರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ದೂರುಗಳು ಬಂದರೆ ಪರಿಶೀಲನೆ ನಡೆಸಲಾಗುವುದು**
> **ಎಂ.ಜೆ.ಮಹೇಶ್,** ಉಪ ನಿರ್ದೇಶಕ ಗಣಿ ಮತ್ತು ಭೂವಿಜ್ಞಾನ ಇಲಾಖೆ

ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಕ್ಕೆ ಸಿಲುಕಿ ಸತ್ತಿರುವ ಕರಡಿ (ಎಡ ಚಿತ್ರ). ಕರಡಿಬೆಟ್ಟ ಖಾಲಿಯಾಗುತ್ತಿದೆ

ಹೆದ್ದಾರಿ ಸುತ್ತ ಕ್ರಷರ್ ಹಾವಳಿ

ರಾಷ್ಟ್ರೀಯ ಹೆದ್ದಾರಿ ಆಸುಪಾಸಿನಲ್ಲಿ ಏಳೆಂಟು ಕ್ರಷರ್‌ಗಳಿದ್ದು, ಕರಡಿಬೆಟ್ಟದಿಂದಲೇ ಕಲ್ಲು ರವಾನೆ ಆಗುತ್ತಿದೆ. ನೆಲಮಟ್ಟದಿಂದ ತಳ, ಮೇಲ್ಭಾಗಕ್ಕೆ ತಲಾ 200 ಅಡಿ ಕೊರೆಯಲಾಗಿದೆ. ' ಅನುಮತಿ ಪಡೆದು 30 ವರ್ಷಗಳಿಂದ ಗಣಿಗಾರಿಕೆ ನಡೆಸುತ್ತಿದ್ದಾರೆ. ಜಿಲ್ಲೆಯಲ್ಲಿ ಅಕ್ರಮ ಗಣಿಗಳಿಲ್ಲ' ಎಂದು ಗಣಿ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

'ಬೆಟ್ಟದ ಸುತ್ತಲೂ ಜನವಸತಿ, ಶಾಲೆ, ಮಠಗಳಿರುವ ಕಾರಣ ಕಲ್ಲುಗಣಿಗಾರಿಕೆ ಸ್ಥಗಿತಗೊಳಿಸಬೇಕು. ಈ ಕುರಿತು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರೂ ಕಲ್ಲು ಗಣಿ ನಿಂತಿಲ್ಲ' ಎಂದು ಸಾಮಾಜಿಕ ಹೋರಾಟಗಾರ ಜೆ.ಯಾದವರೆಡ್ಡಿ ಹೇಳಿದರು.

ಬೇಕು ಕರಡಿ ಕಾರಿಡಾರ್

ಕ್ರಷರ್‌ಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ದುರ್ಗದ ಸಾಲುಗುಡ್ಡಗಳಲ್ಲಿದ್ದ ಪ್ರಾಣಿಗಳು ಜನವಸತಿ ಪ್ರದೇಶದತ್ತ ಬರುತ್ತಿವೆ. ವರ್ಷದಿಂದೀಚೆಗೆ 8 ಕರಡಿಗಳು ವಾಹನಗಳಿಗೆ ಸಿಲುಕಿ ಮೃತಪಟ್ಟಿವೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ಕರಡಿಗಳ ಓಡಾಟಕ್ಕಾಗಿ 'ಕರಡಿ ಕಾರಿಡಾರ್' ರೂಪಿಸಬೇಕು ಎಂಬುದು ಸ್ಥಳೀಯರ ಒತ್ತಾಯ.

'ನಂದಿನಿ' ಬ್ರ್ಯಾಂಡ್‌ನ ಜಾಮೂನ್, ಬರ್ಫಿ ಬಿಡುಗಡೆ

ಸಕ್ಕರೆ ರಹಿತ ತಿನಿಸು ಮಾರುಕಟ್ಟೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳವು (ಕೆಎಂಎಫ್) ದೀಪಾವಳಿ ಹಬ್ಬದ ಪ್ರಯುಕ್ತ ಸಕ್ಕರೆ ರಹಿತ ನಂದಿನಿ ಸಿಹಿ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ.

500 ಗ್ರಾಂ ನಂದಿನಿ ಖೋವಾ ಗುಲಾಬ್ ಜಾಮೂನ್ (₹220), 200 ಗ್ರಾಂನ ನಂದಿನಿ ಹಾಲಿನ ಪೇಡಾ (₹170), ನಂದಿನಿ ಬೆಲ್ಲದ ಓಟ್ಸ್ ಆ್ಯಂಡ್ ನಟ್ಸ್ ಬರ್ಫಿ(₹170) ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ಗ್ರಾಹಕರು ಸಕ್ಕರೆ ರಹಿತ ಸಿಹಿ ತಿನಿಸುಗಳನ್ನು ಬಯಸುತ್ತಾರೆ. ಇವು ಮಧುಮೇಹ ಇರುವವರಿಗೆ ಅನುಕೂಲಕರವಾಗಿದ್ದು, ತೂಕ ನಿಯಂತ್ರಣಕ್ಕೆ ಸಹಕಾರಿ ಹಾಗೂ ಹಲ್ಲುಗಳ ಆರೈಕೆಗೆ ಉತ್ತಮ. ಸಕ್ಕರೆ ಇಲ್ಲದಿದ್ದರೂ ಸಹಜ ಸಿಹಿ ಮತ್ತು ರುಚಿ ಇರುವ ಈ ಉತ್ಪನ್ನಗಳು ಜನಪ್ರಿಯವಾಗುತ್ತಿವೆ ಎಂದು ಮಹಾಮಂಡಳ ತಿಳಿಸಿದೆ.

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರು ವಿಧಾನಸೌಧದಲ್ಲಿ ಮೂರು ಉತ್ಪನ್ನಗಳನ್ನು ಬಿಡುಗಡೆ ಮಾಡಿದರು. ಕೆಎಂಎಫ್ ಆಡಳಿತಾಧಿಕಾರಿ ಟಿಎಚ್‌ಎಂ ಕುಮಾರ್, ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಹಾಜರಿದ್ದರು.

ಸಕ್ಕರೆ ರಹಿತ ಸಿಹಿ ಉತ್ಪನ್ನಗಳನ್ನು ಸಚಿವ ಕೆ.ವೆಂಕಟೇಶ್ ಬಿಡುಗಡೆ ಮಾಡಿದರು

ಸಿಡಿಲು ಬಡಿದು ರೈತ ಸಾವು

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ಕುದರಿಹಾಳದಲ್ಲಿ ಭಾನುವಾರ ಕೃಷಿ ಕೆಲಸ ಮಾಡುವಾಗ ಸಿಡಿಲು ಬಡಿದು ಮಹೇಂದ್ರ ಕೋಣಿ (22) ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮೃತರಿಗೆ ತಂದೆ, ತಾಯಿ, ಸಹೋದರ ಇದ್ದಾರೆ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಕಂದಾಯ ನಿರೀಕ್ಷಕ ವಾಗೀಶ ಮಳೇಮಠ ಭೇಟಿ ನೀಡಿದ್ದರು.

ಕರ್ನಾಟಕ ರಾಜ್ಯ ಪೊಲೀಸ್
ಪೊಲೀಸ್ ಕಮೀಷನರ್ ರವರ ಕಛೇರಿ ಮೈಸೂರು ನಗರ
ದೂರವಾಣಿ ಸಂಖ್ಯೆ: 0821–2418300, 2418304, 2418575.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮೈಸೂರು ನಗರ ಪೊಲೀಸ್ ಕಮೀಷನರೇಟ್ ಘಟಕದಲ್ಲಿರುವ **ANPR** ಕ್ಯಾಮೆರಾಗಳ ಖರೀದಿ ಮತ್ತು ನಿರ್ವಹಣೆ ಸಲುವಾಗಿ ಆನ್‌ಲೈನ್ ಟೆಂಡರ್ ಅನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ ಮತ್ತು ದಿನಾಂಕ	ಅಂದಾಜು ಮೌಲ್ಯ
1.	KSP/2025-26/IND0350 Dt.17/10/2025	52,63,200/–

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು **https://kppp.Karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಪೊಲೀಸ್ ಆಯುಕ್ತರ ಪರವಾಗಿ ಮೈಸೂರು ನಗರ.
DIPR/DDMYS/1104/KSMCA/596/2025-26

ಬೆಟ್ಟ ಏರಿದ ಭಕ್ತರ ಪುಳಕ

ದೇವೀರಮ್ಮ ದರ್ಶನ: ಇಂದು ಹೆಚ್ಚಿನ ಜನರ ಭೇಟಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವರ್ಷಕ್ಕೊಮ್ಮೆ ಮಾತ್ರ ಬೆಟ್ಟದತುದಿಯಲ್ಲಿ ದರ್ಶನ ನೀಡುವ ದೇವಿರಮ್ಮ ದೇವಿಯನ್ನು ಕಣ್ತುಂಬಿಕೊಳ್ಳಲು ಭಾನುವಾರ ದೇವಿರಮ್ಮ ಬೆಟ್ಟದಲ್ಲಿ ಭಕ್ತ ಸಾಗರವೇ ಸೇರಿತ್ತು.

ಚಿಕ್ಕಮಗಳೂರು ತಾಲ್ಲೂಕಿನ ಮಲ್ಲೇನಹಳ್ಳಿಯ ಬಿಂಡಿಗ ದೇವಿರಮ್ಮ ಜಾತ್ರೆ ಭಾನುವಾರ ಆರಂಭವಾಗಿದೆ. ದೇವಿರಮ್ಮ ಗುಡ್ಡ ಭಕ್ತರಿಂದ ತುಂಬಿಕೊಂಡಿತ್ತು. ಕಲ್ಲು ಮುಳ್ಳುಗಳ ಹಾದಿಯಲ್ಲಿ ಬರಿಗಾಲಿನಲ್ಲೇ ಸಾಗಿದ ಭಕ್ತರು, ಬೆಟ್ಟ ಏರಿ ದೇವಿ ದರ್ಶನ ಪಡೆದರು.

ಸಮುದ್ರಮಟ್ಟದಿಂದ ಮೂರು ಸಾವಿರ ಅಡಿಗಳಷ್ಟು ಎತ್ತರದ, ಬೆಟ್ಟದ ತುದಿಯಲ್ಲಿನ ದೇಗುಲಕ್ಕೆ ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಹೆಚ್ಚುತ್ತಿದೆ. ನರಕ ಚತುರ್ದಶಿಯಂದು ಮಾತ್ರ ಭಕ್ತರಿಗೆ ಬೆಟ್ಟ ಏರಿ ದೇವಿ ದರ್ಶನಕ್ಕೆ ಅವಕಾಶ ಇತ್ತು. ಆದ್ದರಿಂದ ಹಿಂದಿನ ದಿನ ರಾತ್ರಿಯೇ ಭಕ್ತರು ಬೆಟ್ಟ ಏರುತ್ತಿದ್ದರು.

ರಾತ್ರಿ ವೇಳೆ ಮಳೆ ಸುರಿದಲ್ಲಿ, ಬೆಟ್ಟ ಏರಿದರೆ ಅಪಾಯ ಎಂಬ ಕಾರಣಕ್ಕೆ ರಾತ್ರಿ ವೇಳೆ ಅವಕಾಶ ನೀಡದಿರಲು ದೇವಾಲಯ ಸಮಿತಿ ಮತ್ತು ಜಿಲ್ಲಾಡಳಿತ ತೀರ್ಮಾನಿಸಿದೆ. ಆದ್ದರಿಂದ ಮುನ್ನಾ ದಿನವಾದ ಭಾನುವಾರ ಬೆಳಿಗ್ಗೆಯಿಂದ ದರ್ಶನಕ್ಕೆ ಅವಕಾಶ ನೀಡಲಾಗಿತ್ತು.

ಚೂಪು ಆಕೃತಿಯ ಬೆಟ್ಟದ ತುದಿಗೆ ಭಾನುವಾರ ಏರಿದ ಭಕ್ತರು ಸಂಭ್ರಮಿಸಿದರು. ಶನಿವಾರ ರಾತ್ರಿ ಮಳೆ ಆಗಿದ್ದು, ಜಾರಿಕೆ ಹೆಚ್ಚಾಗಿಯೇ ಇತ್ತು. ಬೆಟ್ಟ ಹತ್ತಲು ಹರಸಾಹಸಪಟ್ಟರು. ಹಾದಿಯುದ್ದಕ್ಕೂ ಪರಸ್ಪರ ಸಹಕಾರ ನೀಡುತ್ತಲೆ ಪಯಣ ಸಾಗಿತು. ಒಬ್ಬರಿಗೊಬ್ಬರು ಆಸರೆಯಾಗಿ ಕೈ ಕೈ ಹಿಡಿದು ನಡೆದರು.

ಭಕ್ತರಿಗೆ ನೆರವಾಗಲು ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಅಲ್ಲಲ್ಲಿ ನಿಂತಿದ್ದರು. ಹಗ್ಗದ ನೆರವಿನಲ್ಲಿ ಮೇಲೆ ಏರಲು ಸಹಕರಿಸಿದರು. ಬೆಟ್ಟದ ಪದತಲದಲ್ಲಿನ ಬಿಂಡಿಗದ ದೇವೀರಮ್ಮ ದೇಗುಲದಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಇನ್ನುಳಿದ ಎರಡು ಮಾರ್ಗಗಳಲ್ಲೂ ಭಕ್ತರು ಬೆಟ್ಟ ಇಳಿದು ವಾಹನಗಳಲ್ಲಿ ಸಾಗುವ ಕಡೆಯೂ ಪ್ರಸಾದ ಲಭ್ಯವಾಗುವಂತೆ ದೇವಸ್ಥಾನ ಮಂಡಳಿ ವ್ಯವಸ್ಥೆ ಮಾಡಿತ್ತು.

ದೇವಿರಮ್ಮ ಬೆಟ್ಟದ ತುದಿಯಲ್ಲಿ ದೇವಿಯ ದರ್ಶನ ಪಡೆಯಲು ಸಾಗಿದ ಭಕ್ತರು

ಅಡಕತ್ತರಿಯಲ್ಲಿ 'ಶೇ 56' ಮೀಸಲು

ಒಂದನೇ ಪುಟದಿಂದ...

1995 ಜ. 31ರ ಸರ್ಕಾರದ ಆದೇಶದ ಅನ್ವಯ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಸಿ) ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ನೇರ ನೇಮಕಾತಿಯಲ್ಲಿ ಶೇ 50 (ಪ್ರವರ್ಗ 1– ಶೇ 4, 2ಎ– ಶೇ 15, 2ಬಿ– ಶೇ 4, 3ಎ– ಶೇ 4, 3ಬಿ– ಶೇ 5, ಎಸ್‌ಸಿ– ಶೇ 15, ಎಸ್‌ಟಿ– ಶೇ3) ಮೀಸಲಾತಿ ಪ್ರಮಾಣ ನಿಗದಿಪಡಿಸಲಾಗಿತ್ತು.

ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿ ನೀಡಬೇಕೆಂದು ಆ ಸಮುದಾಯಗಳ ಬೇಡಿಕೆ ಬಂದ ನಂತರದಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದಲ್ಲಿ ಆಯೋಗವನ್ನು ರಚಿಸಿತು.

ಈ ಆಯೋಗದ ಶಿಫಾರಸು ಆಧರಿಸಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ರಾಜ್ಯ ಸರ್ಕಾರ, 'ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಕಾಯ್ದೆ 2022' ಅನ್ನು ರೂಪಿಸಿ ಎಸ್‌ಸಿ ಮೀಸಲಾತಿ ಶೇ 15ರಿಂದ 17, ಎಸ್‌ಟಿ ಮೀಸಲಾತಿ ಶೇ 3ರಿಂದ 7ಕ್ಕೆ ಹೆಚ್ಚಿಸಿತ್ತು. ಹೀಗಾಗಿ, ರಾಜ್ಯದಲ್ಲಿ ಒಟ್ಟು ಮೀಸಲಾತಿ ಪ್ರಮಾಣವು ಶೇ 50ರಿಂದ ಶೇ 56ಕ್ಕೆ ಹೆಚ್ಚಳವಾಗಿದೆ. ಅದಕ್ಕೆ ಪೂರಕವಾಗಿ 100 ಬಿಂದುಗಳ ರೋಸ್ಟರ್ ಅನ್ನು ಪರಿಷ್ಕರಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಇದನ್ನು ಆಧರಿಸಿ ಕೆಪಿಎಸ್‌ಸಿ 384 ಗ್ರೂಪ್ 'ಎ' ಮತ್ತು 'ಬಿ' ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿತ್ತು. ಅರ್ಜಿದಾರರು ಇದನ್ನು ಕೆಎಟಿಯಲ್ಲಿ ಪ್ರಶ್ನಿಸಿದ್ದರು.

ವಾದ– ಪ್ರತಿ ವಾದವೇನು?

'ರಾಜ್ಯ ಸರ್ಕಾರ 2022ರ ಅ. 23ರಂದು ಸುಗ್ರೀವಾಜ್ಞೆ ಹೊರಡಿಸಿ ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲು ಹೆಚ್ಚಿಸಿದ್ದರಿಂದ ಒಟ್ಟು ಮೀಸಲು ಪ್ರಮಾಣ ಶೇ 50ರಿಂದ ಶೇ 56ಕ್ಕೆ ಹೆಚ್ಚಳವಾಗಿದೆ. ಇದರ ಆಧಾರದಡಿ ಕರ್ನಾಟಕ ಸರ್ಕಾರಿ ಸೇವೆಯಲ್ಲಿ ರೋಸ್ಟರ್ ಮೀಸಲು ನಿಗದಿಪಡಿಸಲಾಗಿದೆ. ಇದನ್ನು ಆಧರಿಸಿ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಕ್ಕೆ ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿದೆ. ಇದರಿಂದ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಶೇ 44ರಷ್ಟು ಮಾತ್ರವೇ ಅವಕಾಶ ಲಭಿಸುತ್ತದೆ. ಈ ವರ್ಗಕ್ಕೆ ಸಂವಿಧಾನಬದ್ಧವಾಗಿ ಸಿಗಬೇಕಾದ ಅವಕಾಶವನ್ನು ಈ ಮೂಲಕ ಕಸಿದುಕೊಳ್ಳಲಾಗಿದೆ. ಇದು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠದ ಆದೇಶದ ಸ್ಪಷ್ಟ ಉಲ್ಲಂಘನೆ' ಎನ್ನುವುದು ಹೈಕೋರ್ಟ್‌ನಲ್ಲಿ ಅರ್ಜಿದಾರ ಚನ್ನಪಟ್ಟಣದ ಬಿ.ಎನ್. ಮಧು ಪರ ವಕೀಲರ ವಾದ.

'ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ಶಿಫಾರಸಿನಂತೆ, ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಖಚಿತಪಡಿಸಿಕೊಂಡು ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಪ್ರಮಾಣ ಹೆಚ್ಚಿಸಲಾಗಿದೆ. ಆಯೋಗವು ವೈಜ್ಞಾನಿಕ ವರದಿ ನೀಡಿದ್ದು, ಹಲವು ರಾಜ್ಯಗಳು ಈಗಾಗಲೇ ಜಾರಿಗೊಳಿಸಿದ ಮಾದರಿಯಲ್ಲಿ ಜನಸಂಖ್ಯೆಯನ್ನು ಆಧರಿಸಿ ಮೀಸಲಾತಿ ಪ್ರಮಾಣ ವಿಸ್ತರಿಸಲಾಗಿದೆ. ಆದ್ದರಿಂದ, ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ರಾಜ್ಯ ಶಾಸನಸಭೆ ರೂಪಿಸಿದ ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗೆ ಮಾನ್ಯತೆ ಇಲ್ಲ' ಎನ್ನುವುದು ರಾಜ್ಯ ಸರ್ಕಾರ ಪ್ರತಿವಾದ.

ಆಯುಕ್ತರ ಕಚೇರಿ ಮಹಾನಗರಪಾಲಿಕೆ, ಬಳ್ಳಾರಿ
ದೂರವಾಣಿ ಸಂಖ್ಯೆ: 08392–273479/278168 ಫ್ಯಾಕ್ಸ್: 08392–273477
ವೆಬ್‌ಸೈಟ್: www.ballaricity.mrc.gov.in
ಇ–ಮೇಲ್: bellarycommissioner@yahoo.co.in ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ –58310
ಸಂ:ಮನಪಾಬ/ಆಶಾ/ಘವನಿ/ ಟೆಂಡರ್/15ನೇ ಹಣಕಾಸು /02/2025–26 ದಿನಾಂಕ: 18.10.2025

ಟೆಂಡರ್ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ 15ನೇ ಹಣಕಾಸು ಹಾಗೂ ಸಾಮಾನ್ಯ ನಿಧಿ ಅಡಿಯಲ್ಲಿ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ **ರೂ.14.75 ಲಕ್ಷಗಳು** ಹಾಗೂ ಗರಿಷ್ಠ ಮೊತ್ತ **ರೂ.37.00 ಲಕ್ಷಗಳು** ಇರುತ್ತದೆ ಟೆಂಡರ್ ಇಂಡೆಂಟ್ ಸಂಖ್ಯೆ 1) DMA/2025-26/IND5382/Call-2 (Purchase of mini excavator to Ballari City Corporation 2) DMA/2025-26/SE6197/Call-2 (Selection of an agency for humanly catching and Transporting of stray cattles under the jurisdiction of Ballari city corporation ಸದರಿ ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ **ದಿನಾಂಕ: 03–11–2025** ರ ಸಂಜೆ 05:00PM ಗಂಟೆರೊಳಗಾಗಿ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04–11–2025** ರ ಸಂಜೆ 05:30PM ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06–11–2025** ರ ಸಂಜೆ 05:30PM ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: http://kppp.karnataka.gov.in ಅನ್ನು ಗಮನಿಸಲು ಹಾಗೂ ರಜಾ ದಿನಗಳನ್ನು ಹೊರತುಪಡಿಸಿ ಕಚೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ:08392–273479ಗೆ ಕರೆಮಾಡಿ ಅಥವಾ ಇ–ಮೇಲ್ ವಿಳಾಸ ka.ballari.cc@gmail.com ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ,

ಜಾತಿವಾರು ಸಮೀಕ್ಷೆ: 31ರವರೆಗೆ ವಿಸ್ತರಣೆ

ಒಂದನೇ ಪುಟದಿಂದ...

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿ ಹೊರತುಪಡಿಸಿ ರಾಜ್ಯದಾದ್ಯಂತ ಶೇಕಡ 95ರಷ್ಟು ಸಮೀಕ್ಷೆ ಪೂರ್ಣಗೊಂಡಿದೆ. ಕೆಲವು ಜಿಲ್ಲೆಗಳಲ್ಲಿ ಶೇಕಡ ನೂರರಷ್ಟು ಪೂರ್ಣಗೊಂಡಿದೆ. ರಾಮನಗರ (ಶೇ 86), ಧಾರವಾಡ (ಶೇ 88) ಮತ್ತು ಬೀದರ್‌ನಲ್ಲಿ (ಶೇ 79.46) ತುಸು ಕುಂಠಿತವಾಗಿದೆ. ಬೆಂಗಳೂರಿನಲ್ಲಿ ತಡವಾಗಿ ಸಮೀಕ್ಷೆ ಆರಂಭವಾದ ಕಾರಣ ಶೇಕಡ 45ರಷ್ಟು ಪ್ರಗತಿ ಆಗಿದೆ. ಬಾಕಿ ಇರುವ ಜಿಲ್ಲೆಗಳಲ್ಲಿ ಮಾತ್ರ ಅ. 31ರವರೆಗೆ ಸಮೀಕ್ಷೆ ನಡೆಯಲಿದೆ' ಎಂದರು.

ಜವಾಬ್ದಾರಿ ಸ್ಥಾನದಲ್ಲಿ ಇರುವವರು ತಿಳಿದು ಮಾತನಾಡಲಿ: ಇನ್ಫೊಸಿಸ್‌ನ ಸುಧಾ ಮೂರ್ತಿಯವರು ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವರು, 'ಸುಧಾಮೂರ್ತಿ ಅವರು ಸಮಾಜದಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಇರುವವರು. ಇಂತಹ ಹೇಳಿಕೆ ನೀಡುವ ಬದಲು ಅದರ ಬಗ್ಗೆ ಸೂಕ್ತ ಮಾಹಿತಿ ಪಡೆದುಕೊಳ್ಳಬೇಕು. ಇದು ಯಾವುದೋ ಹಿಂದುಳಿದ ವರ್ಗ, ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸೀಮಿತವಾದ ಸಮೀಕ್ಷೆಯಲ್ಲ. ಜನರನ್ನು ತಪ್ಪು ದಾರಿಗೆ ಕೊಂಡೊಯ್ಯುವ ಪ್ರಯತ್ನ ಮಾಡಬಾರದು' ಎಂದರು.

'ಧಾರವಾಡದಲ್ಲಿ ಶೇಕಡವಾರು ಸಮೀಕ್ಷೆ ಕಡಿಮೆಯಾಗಲು ರಾಜಕೀಯ ಕಾರಣಗಳು ಇರಬಹುದೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸ್ಥಳೀಯ ಸಂಸದರು ಹಾಗೂ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಅವರು, 'ನಾನು ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದಿಲ್ಲ.ನೀವು ಪಾಲ್ಗೊಳ್ಳ ಬೇಡಿ' ಎಂದು ಜನರಿಗೆ ಹೇಳಿದರು. ಇಂತಹ ವರ್ತನೆ ನಿಜಕ್ಕೂ ಸರಿಯಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರನ್ನು ಜನ ಗಮನಿಸುತ್ತಿರುತ್ತಾರೆ. ಹೀಗಾದರೆ ನಾವು ಕೇಂದ್ರ ಸರ್ಕಾರ ನಡೆಸುವ ಗಣತಿಯನ್ನು ವಿರೋಧ ಮಾಡಬಹುದೇ' ಎಂದು ಪ್ರತಿಕ್ರಿಯಿಸಿದರು.

> **ಸಮೀಕ್ಷೆ ಕಾರ್ಯದಿಂದ ಕೈಬಿಡುವಂತೆ ಸಚಿವಾಲಯ ಸಿಬ್ಬಂದಿ ಮನವಿ ಮಾಡುತ್ತಿದ್ದಾರೆ. ಹಾಗೆಂದು ಸಮೀಕ್ಷೆ ಪೂರ್ಣಗೊಳ್ಳಬೇಕಲ್ಲವೇ?**
> **ಡಿ.ಕೆ. ಶಿವಕುಮಾರ್**, ಉಪ ಮುಖ್ಯಮಂತ್ರಿ

> **ಸಮೀಕ್ಷೆ ಬಗ್ಗೆ ಬೆಂಗಳೂರಿನ ಜನರಲ್ಲಿ ಜಾಗೃತಿ ಮೂಡಿಸುವಂತೆ ಶಾಸಕರಿಗೆ ನಿರ್ದೇಶನ ನೀಡಲು ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ**
> **ಶಿವರಾಜ್ ತಂಗಡಗಿ**, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಚಂದ್ರಶೇಖರ ಶಿಲ್ಪಿಗೆ ರಾಷ್ಟ್ರೀಯ ಪ್ರಶಸ್ತಿ

ಕಲಬುರಗಿ: ಸಾಂಪ್ರದಾಯಿಕ ಕುಸುರಿ ಕೆತ್ತನೆಯ ಹಿರಿಯ ಕಲಾವಿದ ಚಂದ್ರಶೇಖರ ವೈ.ಶಿಲ್ಪಿ ಅವರಿಗೆ ಜವಳಿ ಸಚಿವಾಲಯವು ನೀಡುವ 2024ನೇ ಸಾಲಿನ 'ರಾಷ್ಟ್ರೀಯ ಶಿಲ್ಪಕಲಾ ಪ್ರಶಸ್ತಿ' ದೊರೆತಿದೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಶಿಲ್ಪಿ ಅವರು ಕೆತ್ತನೆ ಮಾಡಿದ ವಿಶಿಷ್ಟ ಕಲಾ ನೈಪುಣ್ಯದ ಬಾಗಿಲಿಗೆ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿ ₹2 ಲಕ್ಷ ನಗದು ಮತ್ತು ಫಲಕ ಒಳಗೊಂಡಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೆಹಲಿಯ ವಿಜ್ಞಾನ ಭವನದಲ್ಲಿ ಡಿ.9ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕಲ್ಯಾಣ ಕರ್ನಾಟಕದ ಯಾದಗಿರಿ, ಕಲಬುರಗಿ ಭಾಗದಲ್ಲಿ ಪ್ರಸಿದ್ಧಿಯಾದ ಸಗರನಾಡು ಕಲಾ ಶೈಲಿಗೆ ಸಾಂಪ್ರದಾಯಿಕ ಶೈಲಿ ಸಂಯೋಜಿಸಿ ಚಂದ್ರಶೇಖರ ಶಿಲ್ಪಿ ಅವರು ಎತ್ತರಕ್ಕೆ ಒಯ್ದಿದ್ದಾರೆ ಎಂದು ಆಯ್ಕೆ ಸಮಿತಿಯು ಬಣ್ಣಿಸಿದೆ.

ಚಂದ್ರಶೇಖರ ಶಿಲ್ಪಿ ಅವರು ಮೂಲತಃ ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಕಕ್ಕೇರಾ ಗ್ರಾಮದವರು. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರು, ಅಮರಶಿಲ್ಪಿ ಜಕಣಾಚಾರಿ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರಾಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570 001
ದೂರವಾಣಿ+91–0821–2520512 ಕಛೇರಿ 2520803 (ಫ್ಯಾಕ್ಸ್)
Website: www.mmcri/karnataka.gov.in
E-mail: mmcrimysore@yahoo.com
ಸಂ.ಹೊರಗುತ್ತಿಗೆ/54/2025–26 ದಿನಾಂಕ:04.10.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಕೆ.ಆರ್.ಆಸ್ಪತ್ರೆಗೆ **ಗ್ರೂಪ್ 'ಡಿ' ವೃಂದದ (ಸ್ವಚ್ಛತಾ) ಹುದ್ದೆಗಳಿಗೆ 01 ವರ್ಷದ ಅವಧಿಗೆ** ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ) ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ಮೂಲಕ ದಿನಾಂಕ: **18.10.2025** ರಿಂದ ಪಡೆಯಬಹುದಾಗಿದ್ದು, **ದಿನಾಂಕ: 17.11.2025** ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.
DIPR/DDMYS/1111/KSMCA/598/2025-26

ಕತ್ತಲು ನರಕ, ಬೆಳಕು ಸ್ವರ್ಗ

● ಎಸ್. ಸೂರ್ಯಪ್ರಕಾಶ ಪಂಡಿತ್

ಬೆಳಕಿಲ್ಲದ ಜಗತ್ತನ್ನು ಊಹಿಸಿಕೊಳ್ಳುವುದೂ ಅಸಾಧ್ಯ. ಬಹುಶಃ ಮನುಷ್ಯನು ಅನುಭವಿಸಿದ ಮೊದಲ ಭಯ ಎಂದರೆ ಕತ್ತಲು ಎನಿಸುತ್ತದೆ. ಹೀಗೆಯೇ ಅವನಿಗೆ ದಕ್ಕಿದ ಮೊದಲ ಭರವಸೆ ಎಂದರೆ ಅದು ಬೆಳಕೇ ಇರಬೇಕು.

ಬೆಳಕನ್ನು ಸ್ವಾಗತಿಸುವ ಹಬ್ಬವೇ ದೀಪಾವಳಿ. ದೀಪಾವಳಿ ಎಂದರೆ ದೀಪಗಳ ಸಾಲು. ದೀಪಗಳೊಂದಿಗೆ ನಲಿಯುವ ಹಬ್ಬವೇ ದೀಪಾವಳಿ. ದೀಪ ಎಂದರೆ ಬೆಳಕು. ಬೆಳಕು ಇಲ್ಲ ಎಂದರೆ ಕತ್ತಲು. ಕತ್ತಲಿನಲ್ಲಿ ಜೀವನಯಾನ ಸುಲಭವಲ್ಲ. ಕತ್ತಲು ಎಂದರೆ ಅವಿದ್ಯೆ; ಬೆಳಕು ಎಂದರೆ ಜ್ಞಾನ. ಹೀಗಾಗಿ ನಮ್ಮ ಜೀವನಕ್ಕೆ ಬೇಕಾದ ಬೆಳಕಿನ, ಎಂದರೆ ಅರಿವಿನ ಮಹತ್ವವನ್ನು ತಿಳಿದು, ಅದನ್ನು ಸಂಭ್ರಮದಿಂದ ಆರಾಧಿಸುವ ಹಬ್ಬವೇ ದೀಪಾವಳಿ.

ಸೃಷ್ಟಿಯಲ್ಲಿ ನಿರಂತರವಾಗಿ ಕತ್ತಲು–ಬೆಳಕುಗಳ ಆಟ ನಡೆಯುತ್ತಲೇ ಇರುತ್ತದೆ. 'ಕತ್ತಲು' ಎಂಬುದು ಕೆಡಕು, ಭಯ ಮುಂತಾದ ಅನಿಷ್ಟಗಳನ್ನು ಸಂಕೇತಿಸಿದರೆ 'ಬೆಳಕು' ಎಂಬುದು ಒಳಿತು, ಅಭಯ ಮುಂತಾದ ಭರವಸೆ, ನೆಮ್ಮದಿ, ಧೈರ್ಯಗಳನ್ನು ಎತ್ತಿಹಿಡಿಯುತ್ತದೆ. ಅಷ್ಟೇಕೆ, ಸೃಷ್ಟಿಗೂ ಕತ್ತಲಿಗೂ ಬೆಳಕಿಗೂ ಸಂಬಂಧ ಇದೆ. ಹೀಗಾಗಿ ಎಲ್ಲ ಪ್ರಾಚೀನ ಸಂಸ್ಕೃತಿಗಳೂ ಬೆಳಕು–ಕತ್ತಲೆಯ ಸುತ್ತಾಟಕ್ಕೆ ತುಂಬ ಮಹತ್ವವನ್ನು ಕೊಟ್ಟಿವೆ. ನಮ್ಮ ಸಂಸ್ಕೃತಿಯಲ್ಲಂತೂ ಬೆಳಕು ಎಂಬ ತತ್ತ್ವಕ್ಕೆ ತುಂಬ ಮನ್ನಣೆಯಿದೆ. ಬೆಳಕಿನ ಎಲ್ಲ ವಿಧದ ಆರಾಧನೆಗಳೂ ದೀಪಾವಳಿಯ ಹಬ್ಬದಲ್ಲಿ ಹರಳುಗಟ್ಟಿವೆ.

ದೀಪಾವಳಿಗೆ ಸಂಬಂಧಿಸಿದ ಶ್ಲೋಕವೊಂದರ ತಾತ್ಪರ್ಯ ಹೀಗಿದೆ: 'ಮೇಘನಾದ ಎಂದರೆ ಇಂದ್ರಜಿತ್, ಹೇಗೆ ರಾಮನೊಂದಿಗಿನ ಯುದ್ಧದಲ್ಲಿ ಶಾಂತನಾದನೋ, ಎಂದರೆ ಸೋಲನ್ನು ಅನುಭವಿಸಿ, ಮರಣವನ್ನು ಹೊಂದಿದನೋ ಹಾಗೆಯೇ ಮೇಘನಾದ, ಎಂದರೆ ಮೋಡದ ಸದ್ದು, ಗುಡುಗು ಕೂಡ ಈ ಕಾಲದಲ್ಲಿ, ಎಂದರೆ ದೀಪಾವಳಿಯ ಸಂದರ್ಭದಲ್ಲಿ ಶಾಂತವಾಗಿರುತ್ತದೆ.' ಆ ಶ್ಲೋಕಕ್ಕೆ ಇನ್ನೂ ಒಂದು ರೀತಿಯಲ್ಲಿ ಅರ್ಥ ಮಾಡಬಹುದು: 'ರಾಮಾಯಣದಲ್ಲಿ ದಶಾನನ, ಎಂದರೆ ಹತ್ತು ತಲೆಗಳ ರಾವಣನು ಸುಡಲ್ಪಟ್ಟಂತೆ ಈ ಹಬ್ಬದಲ್ಲಿ ದಶೆಗಳ, ಎಂದರೆ ಬತ್ತಿಗಳ ಮುಖವು ಉರಿಸಲ್ಪಡುತ್ತದೆ. ಅಂದು ರಾಮನು ಸಂತೋಷಪಟ್ಟಂತೆ, ಇಂದು ರಾಮನೂ ರಮಣಿಯರೂ ಸಂಭ್ರಮಿಸುತ್ತಾರೆ. ಹೀಗೆ ರಾಮಾಯಣದಂತೆ ರಮಣೀಯವಾಗಿರುವ ದೀಪಾವಳಿಯು ಎಲ್ಲರ ಪಾಪಗಳನ್ನೂ ಹೋಗಲಾಡಿಸಲಿ.'

ದೀಪಾವಳಿಯನ್ನು ದೇಶದ ಉದ್ದಗಲಕ್ಕೂ ಆಚರಿಸಲಾಗುತ್ತದೆ. ಆಚರಣೆಯ ವಿವರಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿದ್ದರೂ, ಆಶಯ ಮಾತ್ರ ಒಂದೇ ಆಗಿರುತ್ತದೆ: ಬೆಳಕಿನ ಆರಾಧನೆ. ಮೂರು ದಿನಗಳಲ್ಲಿ, ಕೆಲವರು ಐದು ದಿನಗಳಲ್ಲಿ, ಈ ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಪಿತೃಗಳ ಸ್ಮರಣೆಯೂ ಆಗುತ್ತದೆ; ಗೋವುಗಳ ಪೂಜೆಯೂ ನಡೆಯುತ್ತದೆ.

ನರಕಚತುರ್ದಶಿಯಂದು ವಿಶೇಷವಾದ ರೀತಿಯಲ್ಲಿ ಮೈ–ಮನಗಳನ್ನು ಕೊಳೆಯನ್ನು ತೊಳೆದುಕೊಂಡು ಬೆಳಕನ್ನು ಸ್ವಾಗತಿಸಲು ಸಿದ್ಧರಾಗುತ್ತೇವೆ. ನಮ್ಮ ಜೀವನದಲ್ಲಿ ಬಹಿರಂಗದ ಶುದ್ಧಿಯೂ ಮುಖ್ಯ, ಅಂತರಂಗದ ಶುದ್ಧಿಯೂ ಮುಖ್ಯ. ಇದನ್ನೇ ಸಂಕೇತಿಸುತ್ತಿದೆ ದೀಪಾವಳಿಯ ಅಭ್ಯಂಗಸ್ನಾನ.

ಇಂದು 'ನರಕ ಚತುರ್ದಶಿ'

ನರಕಾಸುರನ ಸೆರೆಯಲ್ಲಿದ್ದ ಹದಿನಾರು ಸಾವಿರ ಸ್ತ್ರೀಯರನ್ನು ನರಕಚತುರ್ದಶಿಯಂದು ಶ್ರೀಕೃಷ್ಣನು ಬಿಡುಗಡೆಗೊಳಿಸಿ, ಅವರಿಗೆ ಹೊಸದಾದ ಜೀವನವನ್ನು ಕೊಟ್ಟ. ಈ ಸಂಭ್ರಮದ ಆಚರಣೆಯೂ ಇಂದಿನ ಹಬ್ಬದಲ್ಲಿ ಸೂಚಿತವಾಗಿದೆ. ಸ್ತ್ರೀ ಎಂದರೆ ನಮ್ಮ ಚೈತನ್ಯ, ಶಕ್ತಿ, ಬುದ್ಧಿ. ನಮ್ಮ ಜೀವನಕ್ಕೆ ತಾರಕವೂ ಪೋಷಕವೂ ಆದ 'ಸ್ತ್ರೀ' ನರಕದಲ್ಲಿ ಎಂದರೆ, ರಾಕ್ಷಸೀಪ್ರವೃತ್ತಿಗೆ ಬಲಿಯಾಗಿ ಬಂಧನದಲ್ಲಿದ್ದರೆ ನಮ್ಮ ಏಳಿಗೆ ಸಾಧ್ಯವಿಲ್ಲ. ಅವಳನ್ನು ನರಕದಿಂದ ಬಿಡುಗಡೆಗೊಳಿಸಬೇಕಾದುದು ನಮ್ಮ ಆದ್ಯಕರ್ತವ್ಯ. ಈ ಕಥೆಯ ಸಾಂಕೇತಿಕತೆ ಈ ಉದಾತ್ತ ತತ್ತ್ವವನ್ನು ಸೂಚಿಸುತ್ತಿದೆ.

ನಮ್ಮ ಜೀವನವು ಕತ್ತಲಿನ ಪಾಲಾಗಬಾರದು; ಅವಿದ್ಯೆ, ಅಹಂಕಾರ, ಬಂಧನ, ಭ್ರಷ್ಟಾಚಾರ, ಅನೀತಿಗಳಂಥ ಕತ್ತಲಿನ ಕಾರಣದಿಂದ ನಾವು ನರಕದ ಪಾಲಾಗಬಾರದು. ಇದೇ ನರಕಚತುರ್ದಶಿಯ ಆಚರಣೆಯ ಆಶಯ.

ಎಂಬಿಬಿಎಸ್ 10,650 ಸೀಟು ಹೆಚ್ಚಳಕ್ಕೆ ಅನುಮತಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಹೆಚ್ಚುವರಿಯಾಗಿ 10,650 ವೈದ್ಯಕೀಯ ಸೀಟುಗಳು ಮತ್ತು 41 ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ಅನುಮೋದನೆ ನೀಡಿದೆ.

ಹೊಸ 41 ವೈದ್ಯಕೀಯ ಕಾಲೇಜುಗಳ ಸೇರ್ಪಡೆಯೊಂದಿಗೆ ದೇಶದ ವೈದ್ಯಕೀಯ ಕಾಲೇಜುಗಳ ಸಂಖ್ಯೆ 816ಕ್ಕೆ ಏರಲಿದೆ.

'ಯು.ಜಿ ಸೀಟುಗಳನ್ನು ಹೆಚ್ಚಿಸಲು ಬಂದಿದ್ದ ಅರ್ಜಿಗಳ ಪೈಕಿ 41 ಸರ್ಕಾರಿ ಮತ್ತು 129 ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಎಂಬಿಬಿಎಸ್ ಸೀಟುಗಳನ್ನು ಹೆಚ್ಚಿಸಲು ಅನುಮತಿಸಲಾಗಿದೆ. ಇದರಿಂದ ದೇಶದ ಒಟ್ಟಾರೆ ಒಟ್ಟಾರೆ ಎಂಬಿಬಿಎಸ್ ಸೀಟುಗಳ ಸಂಖ್ಯೆ 1,37,600ಕ್ಕೆ ಏರಿದಂತಾಗಿದೆ' ಎಂದು ಎನ್‌ಎಂಸಿ ಮುಖ್ಯಸ್ಥ ಡಾ. ಅಭಿಜತ್ ಶೇಠ್ ಮಾಹಿತಿ ನೀಡಿದರು.

'ವೈದ್ಯಕೀಯ ಸ್ನಾತಕೋತ್ತರ (ಪಿ.ಜಿ) ಕೋರ್ಸ್‌ಗಳಲ್ಲಿನ ಸೀಟುಗಳನ್ನು ಸುಮಾರು 5,000ದಷ್ಟು ಹೆಚ್ಚಿಸುವ ಉದ್ದೇಶವಿದೆ. ಅದು ಸಾಧ್ಯವಾದರೆ ದೇಶದಾದ್ಯಂತ ಪಿ.ಜಿ ಸೀಟುಗಳ ಒಟ್ಟಾರೆ ಸಂಖ್ಯೆ 67,000ಕ್ಕೆ ಏರಿಕೆಯಾಗಲಿದೆ' ಎಂದು ಅವರು ಹೇಳಿದರು.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ಸರ್ವೆ ನಂ.8, (ಬಿ.ಇ.ಪಿ. ಆವರಣ) ಡಾ|| ರಾಜ್ ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010. ಫೋನ್ ನಂ.: 080–22024000, ಫ್ಯಾಕ್ಸ್: 080–22024000. (e-mail: mdkrdcl@gmail.com & cekrdcl@gmail.com)
ಸಂಖ್ಯೆ: ಕೆಆರ್‌ಡಿಸಿಎಲ್/ಐಎಫ್‌ಬಿ/2025–26/14 ದಿನಾಂಕ: 16–10–2025

ಟೆಂಡರ್ ಅಧಿಸೂಚನೆ

1. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು [ಕೆಆರ್‌ಡಿಸಿಎಲ್] ದ್ವಿಲಕೋಟೆ ಪದ್ಧತಿಯಲ್ಲಿ ಈ ಕೆಳಗಿನ ಕಾಮಗಾರಿಗಳಿಗೆ ಅನುಭವ ಹೊಂದಿರುವ ಪ್ರತಿಷ್ಠಿತ ಏಜೆನ್ಸಿಗಳಿಂದ ಶೇಕಡಾವಾರು ಆಧಾರದ ಮೇಲೆ ಅವಶ್ಯಕತೆಯ ಪ್ರಕಾರ ಆಫರ್‌ಗಳನ್ನು ಆಹ್ವಾನಿಸಲಾಗುತ್ತಿದೆ:

ಕ್ರ. ಸಂ.	ಕಾಮಗಾರಿ ವಿವರ	ಟೆಂಡರಿಗಿಟ್ಟಿರುವ ಮೊತ್ತ (ರೂ. ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)	ಸೇವೆಗಳ ಅವಧಿ
1	2025–26ನೇ ಸಾಲಿಗೆ ಕರ್ನಾಟಕದಾದ್ಯಂತ ಬೆಂಗಳೂರಿನ ಪ್ರಧಾನ ಕಚೇರಿ ಮತ್ತು ಕೆ.ಆರ್.ಡಿ.ಸಿ.ಎಲ್ – ಯೋಜನಾ ಕಚೇರಿಗಳಲ್ಲಿ ಕೆಲಸ ಮಾಡಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಡಿ.ಸಿ.ಎಲ್) ಗೆ ಮಾನವಶಕ್ತಿ ಸೇವೆಗಳನ್ನು ಒದಗಿಸುವುದು.	13,53045.00	2,70,000.00	One year

2. ಆಸಕ್ತ ಅರ್ಜಿದಾರರು ಕೆಪಿಪಿ ಪೋರ್ಟಲ್ **www.kppp.karnataka.gov.in** ನಿಂದ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಬಿಡ್‌ಗಳು ಮತ್ತು ಇಎಂಡಿಯನ್ನು (ಎಲೆಕ್ಟ್ರಾನಿಕ್ ಆಗಿ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದು.
3. ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಕ್ಯಾಲೆಂಡರ್ ಈ ಕೆಳಗಿನಂತಿದೆ;
   ಎ. ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ 03–11–2025 ರಿಂದ 17:30 ಗಂಟೆಯವರೆಗೆ.** ಅರ್ಜಿದಾರರು ತಮ್ಮ ಪ್ರಶ್ನೆಗಳನ್ನು ಎಲೆಕ್ಟ್ರಾನಿಕ್ ಮೇಲ್ ಮೂಲಕ ಸಲ್ಲಿಸಬಹುದು: **cekrdcl@gmail.com**
   ಬಿ. ಬಿಡ್ ಪೂರ್ವ ಸಭೆಯು **ದಿನಾಂಕ: 04–11–2025 ರಂದು 16.30 ಗಂಟೆಯವರೆಗೆ,** ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್, ಬೆಂಗಳೂರು ಅವರ ಕಚೇರಿಯಲ್ಲಿ ಮೇಲಿನ ಕಚೇರಿ ವಿಳಾಸದಲ್ಲಿ ನಡೆಯಲಿದೆ.
   ಸಿ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ 17–11–2025 ರಿಂದ 17:00 ಗಂಟೆಯವರೆಗೆ.**
   ಡಿ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ ಮತ್ತು ಸಮಯ 18–11–2025 ರಂದು 17:30 ಗಂಟೆಗೆ.**

* **ದಯವಿಟ್ಟು ಗಮನಿಸಿ, ಇನ್ನು ಮುಂದೆ ಷೆಡ್ಯೂಲ್‌ನಲ್ಲಿನ ಯಾವುದೇ ಬದಲಾವಣೆಗಳನ್ನು ಸುದ್ದಿ ಪತ್ರಿಕೆಗಳ ಮೂಲಕ ಪ್ರಕಟಿಸಲಾಗುವುದಿಲ್ಲ ಮತ್ತು ಹೆಚ್ಚಿನ ಬದಲಾವಣೆಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ನವೀಕರಿಸಲಾಗುತ್ತದೆ.**

ಸಹಿ/– ಮುಖ್ಯ ಇಂಜಿನಿಯರ್,
ಕರಅನಿನಿ, ಬೆಂಗಳೂರು
DIPR/CP/3360/AAA/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮೋಸದಿ ಜೀವರ ಗಾಸಿ ಮಾಡಿದ ಪಾಪ ಕಾಶಿಗೆ ಹೋದರೆ ಹೋದೀತೇ?

-ಕನಕದಾಸ

ಸಂಪಾದಕೀಯ

ಸುರಕ್ಷಿತ, ಪರಿಸರಸ್ನೇಹಿ ದೀಪಾವಳಿ ಸದಾಶಯ ಅನುಷ್ಠಾನಕ್ಕೂ ಬರಲಿ

ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ಕಲ್ಪಿಸುವ ನಿರ್ಧಾರದ ಮೂಲಕ, 'ಪರಿಸರಸ್ನೇಹಿ ದೀಪಾವಳಿ' ಆಚರಣೆಯ ದಾರಿಯಲ್ಲಿ ಕರ್ನಾಟಕ ಒಂದು ಮಹತ್ವದ ಹೆಜ್ಜೆಯಿಟ್ಟಿದೆ. ಹೆಚ್ಚು ಅಪಾಯಕಾರಿ ರಾಸಾಯನಿಕಗಳನ್ನು ಹೊಂದಿರುವ ಸಾಂಪ್ರದಾಯಿಕ ಪಟಾಕಿಗಳ ಬಳಕೆಯಿಂದ ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಸಾಂಪ್ರದಾಯಿಕ ಪಟಾಕಿಗಳಿಗಿಂಥ ಶೇ 30ರಷ್ಟು ಕಡಿಮೆ ಅಪಾಯಕರ ಎಂದು ಹೇಳಲಾಗುತ್ತಿರುವ ಹಸಿರು ಪಟಾಕಿಗಳ ಬಳಕೆಯಿಂದ ಪರಿಸರದ ಮೇಲಿನ ಒತ್ತಡ ಸ್ವಲ್ಪ ಮಟ್ಟಿಗೆ ಕಡಿಮೆ ಆದಂತಾಗುತ್ತದೆ. ದೀಪಾವಳಿ ಹಬ್ಬದ ಸಮಯದಲ್ಲಿನ ವಾಯು ಮಾದರಿಗಳಲ್ಲಿ ಮಾಲಿನ್ಯ ಕಣಗಳ ಪ್ರಮಾಣ ಹೆಚ್ಚಾಗಿ ಕಂಡುಬರುತ್ತಿರುವುದರ ಹಿನ್ನೆಲೆಯಲ್ಲಿ, ಪಟಾಕಿ ಬಳಕೆಗೆ ಕಡಿವಾಣ ಹಾಕುವ ಅಗತ್ಯದ ಮಾತುಕತೆ ಇತ್ತೀಚಿನ ವರ್ಷಗಳಲ್ಲಿ ಪ್ರತಿ ದೀಪಾವಳಿ ಸಂದರ್ಭದಲ್ಲೂ ನಡೆಯುತ್ತದೆ. ಪಟಾಕಿಗಳಿಂದ ವಾಯುಮಾಲಿನ್ಯ ಹೆಚ್ಚುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್‌ ಕೂಡ ಕಳವಳ ವ್ಯಕ್ತಪಡಿಸಿದೆ. ಪರಿಸರ ಕಾಳಜಿಗೆ ಸ್ಪಂದಿಸುವ ರೂಪದಲ್ಲಿ, ರಾಜ್ಯದಲ್ಲಿ ಹಸಿರು ಪಟಾಕಿಗಳಿಗಷ್ಟೇ ಅವಕಾಶ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳು ಮತ್ತು ಪೊಲೀಸರಿಗೆ 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ' ತಾಕೀತು ಮಾಡಿದೆ. ಆದರೆ, ಈ ಎಲ್ಲ ಆಶಯವನ್ನು ಮಣ್ಣುಗೂಡಿಸುವಂತೆ ನಕಲಿ ಹಸಿರು ಪಟಾಕಿಗಳ ಮಾರಾಟ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ಬಗ್ಗೆ ವರದಿಗಳು ಪ್ರಕಟವಾಗಿವೆ. ಸಾಂಪ್ರದಾಯಿಕ ಪಟಾಕಿ ಪೊಟ್ಟಣಗಳ ಮೇಲೆ 'ಹಸಿರಿನ ಗುರುತು' ಹಚ್ಚಿ ವಂಚಿಸಲಾಗುತ್ತಿದೆ; ನಕಲಿ ಲೋಗೊ, ಕ್ಯುಆರ್ ಕೋಡ್ ಬಳಸಿ ಅಪಾಯಕಾರಿ ಪಟಾಕಿಗಳನ್ನು ಮಾರಲಾಗುತ್ತಿದೆ ಎನ್ನಲಾಗುತ್ತಿದೆ. ಸರ್ಕಾರಿ ಆದೇಶವನ್ನು ಉಲ್ಲಂಘಿಸಿರುವ ನಕಲಿ ಹಸಿರು ಪಟಾಕಿಗಳ ತಯಾರಕರು ಮತ್ತು ಮಾರಾಟಗಾರರ ಮೇಲೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಾಗಿದೆ.

ಪಟಾಕಿಗಳಿಂದ ದೂರ ಉಳಿದಾಗಷ್ಟೇ 'ಪರಿಸರಸ್ನೇಹಿ ದೀಪಾವಳಿ' ಸಾಧ್ಯ. ಪಟಾಕಿಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಆಂದೋಲನ ತೀವ್ರಗೊಳ್ಳಬೇಕಾಗಿದೆ.

ಹಸಿರು ಪಟಾಕಿಗಳ ಮೂಲಕ 'ಪರಿಸರಸ್ನೇಹಿ ದೀಪಾವಳಿ' ಎನ್ನುವುದು ಆಂಶಿಕ ಸತ್ಯವನ್ನು ಒಳಗೊಂಡಿರುವ ಪರಿಕಲ್ಪನೆ. ಪಟಾಕಿ ಬಳಕೆಯನ್ನು ಹಂತಹಂತವಾಗಿ ಕಡಿಮೆಗೊಳಿಸುತ್ತ, ಅಂತಿಮವಾಗಿ ಸಂಪೂರ್ಣವಾಗಿ ನಿಲ್ಲಿಸುವ ಮೂಲಕವಷ್ಟೇ ದೀಪಾವಳಿಯನ್ನು ಪರಿಸರಸ್ನೇಹಿ ಆಗಿಸುವುದು ಸಾಧ್ಯವಿದೆ. ಹಬ್ಬದ ಸಂದರ್ಭದಲ್ಲಿ ವಾಯುಮಾಲಿನ್ಯ ತೀವ್ರಗೊಳ್ಳದಂತೆ ತಡೆಯುವುದು ಕಾನೂನು ಕ್ರಮಗಳಿಂದಷ್ಟೇ ಸಾಧ್ಯವಿಲ್ಲ; ಸಾರ್ವಜನಿಕರ ಸಹಕಾರ ಇದ್ದಾಗಷ್ಟೇ ಪಟಾಕಿ ಬಳಕೆಗೆ ಕಡಿವಾಣ ಹಾಕಬಹುದು. ಮಕ್ಕಳು ಪಟಾಕಿ ಸಿಡಿಸುವ ಮೂಲಕ ದೀಪಾವಳಿಯನ್ನು ಸಂಭ್ರಮಿಸುವುದರಲ್ಲಿ ತಪ್ಪೇನೂ ಇಲ್ಲ. ಎಳೆಯರೊಂದಿಗೆ ಹಿರಿಯರೂ ಪಟಾಕಿ ಸುಡುವುದನ್ನು ವ್ಯಸನದಂತೆ ಹಚ್ಚಿಕೊಂಡಾಗ ಪರಿಸರದ ಮೇಲೆ ಹೆಚ್ಚಿನ ಒತ್ತಡ ಉಂಟಾಗುತ್ತದೆ; ವಾಯುಮಂಡಲಕ್ಕೆ ಮಾತ್ರವಲ್ಲದೆ, ಗಂಭೀರ ಆರೋಗ್ಯ ಸಮಸ್ಯೆಗಳೂ ಉಂಟಾಗುತ್ತವೆ. ಹಿರಿಯ ನಾಗರಿಕರು, ಎಳೆಯರು ಹಾಗೂ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಪಟಾಕಿಗಳ ವಿಷಾನಿಲ ಹಾಗೂ ಕಿವಿಗಡಚಿಕ್ಕುವ ಸದ್ದಿನಿಂದ ಅಸಹನೀಯ ತೊಂದರೆ ಅನುಭವಿಸುತ್ತಾರೆ. ಪಟಾಕಿಗಳ ಬೆಳಕು ಮತ್ತು ಸದ್ದಿಗೆ ಪ್ರಾಣಿಪಕ್ಷಿಗಳು ಕೂಡ ದಿಕ್ಕೆಡುತ್ತವೆ. ಪ್ರತಿ ದೀಪಾವಳಿಯ ಸಂದರ್ಭದಲ್ಲೂ ಪಟಾಕಿಗಳ ಸಿಡಿತದಿಂದ ಗಾಯಗೊಳ್ಳುವವರು, ದೃಷ್ಟಿಗೆ ಹಾನಿ ಮಾಡಿಕೊಳ್ಳುವವರು ಇದ್ದೇ ಇರುತ್ತಾರೆ. ಈ ಅವಘಡಗಳನ್ನು ತಪ್ಪಿಸುವುದಕ್ಕೆ ಪಟಾಕಿಗಳಿಂದ ದೂರ ಇರುವುದೊಂದೇ ಮಾರ್ಗ.

ಬೆಳಕಿನ ಹಬ್ಬವಾದ ದೀಪಾವಳಿ ಇಡೀ ದೇಶವನ್ನು ಆವರಿಸಿಕೊಂಡಿರುವ ಬಹು ದೊಡ್ಡ ಹಬ್ಬ. ಎಲ್ಲರ ಮನಸ್ಸುಗಳಲ್ಲಿ ಅರಿವಿನ ಹಣತೆ ಬೆಳಗುವ ಹಾಗೂ ಅಜ್ಞಾನದ ಅಂಧಕಾರವನ್ನು ನೀಗುವ ಆಶಯ ದೀಪಾವಳಿಯ ಹಿಂದಿದೆ. ಈ ಮಹತ್ತರ ಆಶಯಕ್ಕೂ ಪಟಾಕಿಗಳು ಪೂರಕವಾಗಿಲ್ಲ. ಪಟಾಕಿಗಳನ್ನು ಸುಡುವುದರಿಂದ ಮನಸ್ಸಿಗೆ ಸಂತೋಷ ಉಂಟಾಗುತ್ತದೆ ಎನ್ನುವುದನ್ನು ತಳ್ಳಿಹಾಕಲಾಗದು. ಆದರೆ, ಗಂಭೀರ ಅಪಾಯಗಳಿಗೆ ಹೋಲಿಸಿದರೆ ಪಟಾಕಿಗಳು ನೀಡುವ ಸಂತೋಷ ನಗಣ್ಯವಾದುದು. ಮಣ್ಣು, ನೀರು ಮತ್ತು ಗಾಳಿಯನ್ನು ಮಲಿನಗೊಳಿಸುವ ಆಚರಣೆಯಿಂದ ದೂರ ಉಳಿಯುವುದು ದೀಪಾವಳಿ ಆಚರಣೆಯನ್ನು ಅರ್ಥಪೂರ್ಣಗೊಳಿಸುವ ಮತ್ತು ಹಬ್ಬದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುವ ಕ್ರಮವಾಗಿದೆ. ಸುರಕ್ಷಿತ ಮತ್ತು ಪರಿಸರಸ್ನೇಹಿ ದೀಪಾವಳಿ ಆಚರಣೆಯ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಸರ್ಕಾರ ಹಾಗೂ ಸಂಘಸಂಸ್ಥೆಗಳ ಪ್ರಯತ್ನಗಳು, ಹಬ್ಬದ ಸಂದರ್ಭಕ್ಕೆ ಸೀಮಿತವಾಗದೆ ವರ್ಷಪೂರ್ತಿ ನಿರಂತರವಾಗಿ ನಡೆಯಬೇಕಾಗಿದೆ.

ಚಾಟಿಏಟು

ರಸ್ತೆ ಮೆರವಣಿಗೆಗಲ್ಲ



ರಸ್ತೆಯಲ್ಲಿ ಮೆರವಣಿಗೆ ಹೋಗುವ ಎಲ್ಲ ಮೆರವಣಿಗೆಗಳೂ ನಿಷೇಧ ಆಗಬೇಕು. ರಸ್ತೆಯ ಮೂಲ ಉದ್ದೇಶ ಸಂಚಾರ ಸಾರಿಗೆಯೇ ಹೊರತು ಶಕ್ತಿ ಪ್ರದರ್ಶನ, ದೇವರ ಪ್ರದರ್ಶನ, ದೇವರ ಪೂಜೆ ಅಲ್ಲ.

ಅರವಿಂದ ಚೊಕ್ಕಾಡಿ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ರಸ್ತೆಗುಂಡಿಗಳ ದುಃಸ್ಥಿತಿ ಬಗ್ಗೆ ದನಿ ಎತ್ತಿದ ಉದ್ಯಮಿಗಳಿಗೆ ಅವಮಾನ ಮಾಡಲಾಯಿತು. ಈಗ ಗುತ್ತಿಗೆದಾರರನ್ನು ಬೆದರಿಸಲಾಗುತ್ತಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕರ್ನಾಟಕಕ್ಕೆ ಯಾವ ಉದ್ಯಮಗಳೂ ಬರುವುದಿಲ್ಲ, ಯಾವ ಗುತ್ತಿಗೆದಾರರೂ ಸರ್ಕಾರದ ಕೆಲಸ ಮಾಡುವುದಿಲ್ಲ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 20-10-2000

• **ಟ್ಯುಬೆಕ್ಟಮಿ ವಿಫಲ: ನೊಂದ ಮಹಿಳೆ ರಿಟ್**

ಬೆಂಗಳೂರು, ಅ. 19– ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಬಡ ಕೂಲಿಕಾರ ಮಹಿಳೆಗೆ ನಂತರ ಗಂಡು ಮಗು ಆಗಿದ್ದು, ಈಗ ಆಕೆ ಮಗುವಿನ ಪಾಲನೆ, ವಿದ್ಯಾಭ್ಯಾಸ ಮತ್ತಿತರ ಖರ್ಚನ್ನು ಸಂಬಂಧಪಟ್ಟ ವೈದ್ಯರು ಭರಿಸುವಂತೆ ಆದೇಶಿಸಬೇಕೆಂದು ಕೋರಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಕಲ್ಮನೆ ಗ್ರಾಮದ ನಾಗೇಂದ್ರಾಚಾರಿ ಅವರ ಪತ್ನಿ ಮಂಜುಳಾ ರಿಟ್ ಅರ್ಜಿ ಸಲ್ಲಿಸಿದವರು. ಕೃಷಿ ಕಾರ್ಮಿಕರಾದ ತಮಗೆ ಎರಡು ಹೆಣ್ಣು, ಒಂದು ಗಂಡು ಮಗುವಿದೆ. ಅವರನ್ನು ಸಾಕುವುದು ಕಷ್ಟವಾಗಿರುವುದರಿಂದ ಇನ್ನು ಮಕ್ಕಳು ಬೇಡ ಎಂಬ ತೀರ್ಮಾನಕ್ಕೆ ಬಂದು ಶಿಕಾರಿಪುರದ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ 1998ನೇ ಜನವರಿ 7ರಂದು ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದುದಾಗಿ ವಾದಿಸಿದ್ದಾರೆ.

• **ತಮಿಳುನಾಡು ಸರ್ಕಾರಕ್ಕೆ ತರಾಟೆ**

ನವದೆಹಲಿ, ಅ. 19– ಗಾಜನೂರಿನಲ್ಲಿದ್ದಾಗ ರಾಜ್‌ಕುಮಾರ್ ಅವರಿಗೆ ಸೂಕ್ತ ಭದ್ರತೆ ನೀಡುವಲ್ಲಿ ವಿಫಲವಾಗಿರುವ ತಮಿಳುನಾಡು ಸರ್ಕಾರದ ಕ್ರಮ 'ಅಕ್ಷಮ್ಯ' ಎಂದು ಸುಪ್ರೀಂ ಕೋರ್ಟ್ ಇಂದು ತರಾಟೆಗೆ ತೆಗೆದುಕೊಂಡು ಟಾಡಾ ಕೈದಿಗಳ ಬಿಡುಗಡೆಗೆ ಸದ್ಯಕ್ಕೆ ಅವಕಾಶವಿಲ್ಲ ಎಂಬ ಇಂಗಿತ ವ್ಯಕ್ತಪಡಿಸಿತು.

ಟಾಡಾ ಕೈದಿಗಳ ಬಿಡುಗಡೆಯನ್ನು ಪ್ರಶ್ನಿಸಿ ಸಲ್ಲಿಸಲಾದ ವಿಶೇಷ ಮನವಿ ಅರ್ಜಿ ಮತ್ತು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯನ್ನು ನಡೆಸುತ್ತಿರುವ ನ್ಯಾಯಮೂರ್ತಿಗಳಾದ ಎಸ್.ಪಿ. ಭರೂಚಾ, ಡಿ.ಪಿ. ಮಹಾಪಾತ್ರ ಮತ್ತು ವೈ.ಕೆ. ಸಬರ್‌ವಾಲಾ ಅವರನ್ನು ಒಳಗೊಂಡ ನ್ಯಾಯಪೀಠ, 'ರಾಜ್‌ಕುಮಾರ್ ಅವರಿಗೆ ಭದ್ರತೆ ನೀಡದ ತಮಿಳುನಾಡು ಸರ್ಕಾರದ ಕ್ರಮ ಅಕ್ಷಮ್ಯ' ಎಂದು ಹೇಳಿತು.

75 ವರ್ಷಗಳ ಹಿಂದೆ

• **ಬಿಡುವು**

'ಆಯುಧ ಪೂಜೆ'ಯ ಪ್ರಯುಕ್ತ 19–10–1950ರ ಗುರುವಾರ 'ಪ್ರಜಾವಾಣಿ' ಕಾರ್ಯಾಲಯಕ್ಕೆ ಬಿಡುವಿತ್ತು. ಹಾಗಾಗಿ, 20–10–1950ರ ಶುಕ್ರವಾರದ ಸಂಚಿಕೆ ಪ್ರಕಟವಾಗಿರಲಿಲ್ಲ.

ಸಿಎಂ: ಆಯ್ಕೆಯೋ? ನೇಮಕವೋ?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆಗಳು ಅಣಕಕ್ಕೆ ಒಳಗಾಗುತ್ತಿರುವ ನಿದರ್ಶನಗಳನ್ನು ವರ್ತಮಾನದಲ್ಲಿ ಮತ್ತೆ ಮತ್ತೆ ಕಾಣುತ್ತಿದ್ದೇವೆ. ಮುಖ್ಯಮಂತ್ರಿಗೆ ಇರುವ ಪರಮಾಧಿಕಾರದಲ್ಲಿ ಪಕ್ಷದ ಹೈಕಮಾಂಡ್ ಮಾಡುವ ಹಸ್ತಕ್ಷೇಪವೂ ಪ್ರಜಾಸತ್ತಾತ್ಮಕ ಮೌಲ್ಯಗಳ ಉಲ್ಲಂಘನೆಯೇ.

ಕಾರ್ಪೊರೇಟ್ ಅತಿರೇಕ, ದ್ವೇಷ ರಾಜಕಾರಣ ಮತ್ತು ಪ್ರಭುತ್ವದ ದೌರ್ಜನ್ಯವನ್ನು ಸಬೂಬುಗಳ ಮೂಲಕ ಸಮರ್ಥಿಸಲು ಹಾಗೂ ಸತ್ಯವನ್ನು ಸುಳ್ಳೆಂದು, ಸುಳ್ಳನ್ನು ಸತ್ಯವೆಂದು ಸಾಧಿಸಲು 'ನಪ ಸ್ವಾತಂತ್ರ್ಯ' ಸುಲಭವಾಗಿ ಲಭ್ಯವಾಗುತ್ತಿದೆ. ಆದರೆ, ಜಾರಿಯಲ್ಲಿರಬೇಕಾದ 'ನೈಜ ಸ್ವಾತಂತ್ರ್ಯ'ವನ್ನು ಮೊಟಕುಗೊಳಿಸುವ ಸಕಲ ಕಾರ್ಯತಂತ್ರಗಳನ್ನು ಪ್ರಯೋಗಿಸುವುದು ಪ್ರಭುತ್ವಗಳ ಅಲಿಖಿತ ನೀತಿಯೇ ಆಗಿದೆ. ಹಾಗೆಯೇ ಸಮಾನತೆ ಮತ್ತು ಹೊಣೆಗಾರಿಕೆಯ ಆಶಯ ಹೊತ್ತ ಪ್ರಜಾಪ್ರಭುತ್ವದ ಚೈತನ್ಯ ಕಾಲಾನುಕ್ರಮೇಣ ದಾಖಲಿಸುತ್ತಿರುವ ಕುಸಿತದ ವೇಗ ಗಾಬರಿ ಹುಟ್ಟಿಸುವಂತಿದೆ. ಸ್ಪಷ್ಟವಾಗಿ ಹೇಳುವುದಾದರೆ, ಪ್ರಜಾಪ್ರಭುತ್ವ ಹೆಸರಿನ ವ್ಯವಸ್ಥೆಗೆ ಚುನಾವಣಾ ಪ್ರಕ್ರಿಯೆಯ ನಂತರದ ಪ್ರಬುದ್ಧತೆಯನ್ನು ತಲುಪಲು ದಶಕಗಳ ನಂತರವೂ ಸಾಧ್ಯವಾಗಿಲ್ಲ! ಸಾಂವಿಧಾನಿಕ ಸಂಸ್ಥೆಗಳು ದುರ್ಬಲವಾಗಿ, ಮಾಧ್ಯಮ ರಾಜಿಯಾಗಿ, ನಾಗರಿಕರು ಮೌನಿಗಳಾದರೆ ಇನ್ನೇನು ಆಗಲು ಸಾಧ್ಯ?

ಕರ್ನಾಟಕದ ರಾಜಕೀಯ ಮತ್ತು ಆಡಳಿತದ ಅಂಗಳದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅವಲೋಕಿಸಿದರೆ, ಆಧುನಿಕ ವ್ಯವಸ್ಥೆಯ ವಿಕಾಸ-ವಿವೇಕಕ್ಕೆ ದಿಕ್ಸೂಚಿಗಳಾಗಬೇಕಿದ್ದ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರ ಪರಿಕಲ್ಪನೆಗಳು ಆಚರಣೆಯಲ್ಲಿ ತಲುಪಿರುವ ಅಧೋಗತಿಯನ್ನು ಗುರ್ತಿಸಬಹುದು.

ರೈತರ ಪರವಾಗಿ ನ್ಯಾಯ ಕೇಳಿದ ಕೆ.ಆರ್.ಎಸ್. ಪಕ್ಷದವರ ಮೇಲೆ ಬೆಂಗಳೂರಿನ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿಗಳು ಎಸಗಿದ ದೌರ್ಜನ್ಯದ ದೃಶ್ಯಗಳು ಜಾರಿಯಲ್ಲಿರುವ ದುರಾಡಳಿತದ ದುಷ್ಟಮುಖವನ್ನು ನಿರೂಪಿಸುತ್ತವೆ. ನ್ಯಾಯಕ್ಕಾಗಿ ಪ್ರತಿಭಟನೆಗೆ ಮುಂದಾಗುವವರ ದನಿ ಅಡಗಿಸಲು ಪೊಲೀಸರು ಎಸಗುತ್ತಿರುವ ದಬ್ಬಾಳಿಕೆ ಪ್ರಕರಣಗಳು ರಾಜ್ಯಾದ್ಯಂತ ವರದಿಯಾಗುತ್ತಿವೆ. ಧರ್ಮಸ್ಥಳ ಪ್ರಕರಣದಲ್ಲಿ ಹೋರಾಟಗಾರರನ್ನೇ ಆರೋಪಿಗಳನ್ನಾಗಿಸುವ, ದೂರುದಾರರ ವಿರುದ್ಧವೇ ತನಿಖೆ ನಡೆಸುವ ಸಂಶಯಾಸ್ಪದ ನಿಲುವನ್ನು ಸರ್ಕಾರ ತಳೆದಿದೆ. ಹೀಗೆ ಪ್ರತಿಭಟಿಸುವ, ದೂರು ನೀಡುವ ಪ್ರಜೆಗಳ ಪ್ರಾಥಮಿಕ ಸ್ವಾತಂತ್ರ್ಯವನ್ನೇ ಕಸಿಯುವ ಪ್ರಜಾಡಳಿತ ಜಾರಿಯಲ್ಲಿದೆ.

ಗೌರವಯುತ ಬದುಕಿನ ಹಕ್ಕನ್ನೇ ಮುಕ್ಕಿ ತಿನ್ನುವ ವ್ಯವಸ್ಥೆಯನ್ನು 'ಪ್ರಜಾ'ಪ್ರಭುತ್ವ ಹೆಸರಿನಿಂದ ಸಮರ್ಥಿಸುವ ವಿರೋಧಾಭಾಸ ಎದುರಾಗಿದೆ. ಜನಸಾಮಾನ್ಯರ ದೈನಂದಿನ ಸಮಸ್ಯೆಗಳನ್ನು ಮರೆಮಾಚಲೋ ಎಂಬಂತೆ ಆಡಳಿತ ಮತ್ತು ವಿರೋಧ ಪಕ್ಷಗಳು ಜಂಟಿಯಾಗಿ ಜಾತಿ-ಧರ್ಮ ಕೇಂದ್ರಿತ ಭಾವನಾತ್ಮಕ ವಿಷಯಗಳನ್ನು ಚರ್ಚೆಗಿರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ. ನಾಡಿನ ವಿವೇಕ ಪ್ರಜ್ಞೆ ಮೆರೆಯಬೇಕಿದ್ದ ಸಾಹಿತ್ಯವಲಯ ಕೂಡ ಪ್ರಭುತ್ವದ ಸಮರ್ಥನೆಗೆ ತನ್ನ ಸೃಜನಶೀಲತೆಯನ್ನು ವ್ಯಯಿಸುತ್ತಿರುವುದು ಸಾರ್ವತ್ರಿಕವಾಗಿ ಜಾಗೃತವಾಗಿರುವ ಸ್ವಾರ್ಥ ಮತ್ತು ಜಾತಿ ಪ್ರಜ್ಞೆಗೆ ಪ್ರತೀಕವಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅವರಂತಹ ಪ್ರಗತಿಪರ ಸಾಹಿತಿಯೇ, 'ಡಿಕೆಶಿಗೆ 2023ರಲ್ಲೇ ಸಿ.ಎಂ. ಸ್ಥಾನ ತಪ್ಪಿತು' ಎಂದು ಬಹಿರಂಗವಾಗಿ ಕೊರಗುವಷ್ಟು ಕಾಂಗ್ರೆಸ್ ಪಕ್ಷದ ಬಣರಾಜಕಾರಣದ ಒಳಸುಳಿಗಳು ಬುದ್ಧಿಜೀವಿಗಳನ್ನು ವ್ಯಾಪಿಸಿರುವುದು ಆತಂಕಕಾರಿ ಬೆಳವಣಿಗೆ.

ಇತ್ತೀಚೆಗೆ ನೇಪಾಳಕ್ಕೆ ಭೇಟಿ ನೀಡಿದ್ದ ಪತ್ರಕರ್ತ ಮಿತ್ರರಿಗೆ ಅಲ್ಲಿಯ ಯುವಕನೊಬ್ಬ, 'ನಾವಿಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿರುವಾಗ, ಭಾರತದಲ್ಲಿ ನೀವೇಕೆ ಧಾರ್ಮಿಕ ಭಾವನೆಗಳ ಸಂಘರ್ಷದಲ್ಲಿ ತೊಡಗಿದ್ದೀರಿ?' ಎಂದು ಪ್ರಶ್ನಿಸಿದನಂತೆ. 'ಜೆನ್–ಝೀ' ಕ್ರಾಂತಿ ನಂತರ ನೇಪಾಳದ ಸರ್ಕಾರಿ ಅಧಿಕಾರಿಗಳು, ವಿಶೇಷವಾಗಿ ಪೊಲೀಸರು ಲಂಚ ಸ್ವೀಕರಿಸಲು ಹೆದರುವ ಸ್ಥಿತಿ ಏರ್ಪಟ್ಟಿದೆ. ನೇಪಾಳದ ಬೆಳವಣಿಗೆಯು ನಾಡಿನ ಯುವ ಮನಸ್ಸುಗಳಲ್ಲಿ ಹೊಸಬಗೆಯ ಕಿಚ್ಚಿಗೆ ಪ್ರೇರಣೆಯಾದರೆ ಅಚ್ಚರಿಯಿಲ್ಲ.

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಧಾರವಾಡದಲ್ಲಿ ಸಂಘಟಿಸಿದ್ದ ಸಮಾವೇಶದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ, 'ಯುವಜನರಲ್ಲಿ ನಿರಾಶೆ ಮೂಡಿದಷ್ಟೂ ಸಮಾಜದ ಶಾಂತಿ ಕದಡುತ್ತದೆ' ಎಂದು ಎಚ್ಚರಿಸಿದ್ದಾರೆ. ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠರು ಸ್ವಾತಂತ್ರ್ಯ ಹೋರಾಟದ ಮಾದರಿಯಲ್ಲಿ ಗಟ್ಟಿ ಹೋರಾಟ ಕಟ್ಟಲು ಯುವಜನರಿಗೆ ಕರೆ ಕೊಟ್ಟಿದ್ದಾರೆ. ಹೊಸಪೇಟೆ ಮತ್ತು ಕಲಬುರಗಿಯಲ್ಲಿಯೂ ನಿರುದ್ಯೋಗಿ ಯುವಪಡೆಯ ಹತಾಶೆ ಮತ್ತು ಪ್ರತಿಭಟನೆ ಪ್ರಕಟವಾಗಿದೆ.

ಸಮಕಾಲೀನ ರಾಜಕಾರಣದಲ್ಲಾದರೂ ಸಂವಿಧಾನದ ಆಶಯಗಳಿಗೆ, ಮೌಲ್ಯಗಳಿಗೆ ಮಣೆ ಹಾಕುವ ಸಜ್ಜನಿಕೆ ಇದೆಯೇ ಎಂದು ಪರಿಶೀಲಿಸಿದರೆ ನಿರಾಶೆಯೇ ಎದುರಾಗುತ್ತದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದ ಕಾಂಗ್ರೆಸ್ ಪಕ್ಷವು ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವಾಗ ಏರ್ಪಟ್ಟ ಚೌಕಾಸಿ ಆಟ, ಪ್ರಜಾತಂತ್ರದ ಸ್ಫೂರ್ತಿಯನ್ನು ಅಷ್ಟರ ಮಟ್ಟಿಗೆ ಮಂಕಾಗಿಸಿತು. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ತದ್ವಿರುದ್ಧ ಹೇಳಿಕೆಗಳಿಂದಾಗಿ ಮುಖ್ಯಮಂತ್ರಿ ಆಯ್ಕೆಯ ಸಾಂವಿಧಾನಿಕ ಪ್ರಕ್ರಿಯೆಯ ರೀತಿ-ನೀತಿಯನ್ನು ಮನವರಿಕೆ ಮಾಡಿಕೊಳ್ಳುವ, ಸಂಬಂಧಿಸಿದವರಿಗೆ ಮನವರಿಕೆ ಮಾಡಿಸುವ ಅವಕಾಶ ಸಾರ್ವಜನಿಕ ವೇದಿಕೆಗಳಿಗೆ ಲಭಿಸಿದೆ.

'ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಹುದ್ದೆಯ ಆಯ್ಕೆ ವಿಚಾರವು ಬೆಂಬಲಿಸುವ ಶಾಸಕರ ಸಂಖ್ಯಾಬಲದಿಂದ ನಿರ್ಧಾರವಾಗುವುದಿಲ್ಲ; ಇದನ್ನು ನಿರ್ಧರಿಸುವುದು ಹೈಕಮಾಂಡ್' ಎಂಬುದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಖಡಕ್ ವ್ಯಾಖ್ಯಾನ. 'ಯಾರನ್ನು ಎಲ್ಲಿಡಬೇಕು, ಯಾವಾಗ ಸ್ಥಾನಮಾನ ನೀಡಬೇಕು, ಎಷ್ಟು ದಿನ ಕೊಡಬೇಕು ಎಂಬುದನ್ನು ಸಹ ಹೈಕಮಾಂಡ್ ತೀರ್ಮಾನಿಸುತ್ತದೆ' ಎಂದೂ ವಿವರಿಸಿದ್ದಾರೆ. ಅವರ ಈ ಹೇಳಿಕೆಯ ಆಳದಲ್ಲಿ ಎರಡು ಅಂಶಗಳು ಅಡಕವಾಗಿವೆ: ಮುಖ್ಯಮಂತ್ರಿ ಪದವಿಗಾಗಿ ಕಾತರಿಸಿರುವ ಡಿಕೆಶಿಗೆ ಅಗತ್ಯ ಸಂಖ್ಯೆಯ ಶಾಸಕರ ಬೆಂಬಲವಿಲ್ಲ ಹಾಗೂ ಹೈಕಮಾಂಡ್ ಓಲೈಸುವ ಅಥವಾ ಬೆದರಿಸುವ ವಿಶ್ವಾಸ ಹೊಂದಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ ಸಿ.ಎಂ. ಸಿದ್ದರಾಮಯ್ಯ, 'ಶಾಸಕರ ಬೆಂಬಲವಿಲ್ಲದೆ ಯಾರೂ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ' ಎಂದು ಹೇಳುವುದರ ಜೊತೆಗೆ, 'ಶಾಸಕರ ಬೆಂಬಲದೊಂದಿಗೆ ಹೈಕಮಾಂಡ್ ಆಶೀರ್ವಾದವೂ ಅಗತ್ಯ' ಎಂದು ಸೇರಿಸುವ ಮೂಲಕ ತಮ್ಮ ಎಂದಿನ ಚಾಣಾಕ್ಷತನ ತೋರಿಸಿದ್ದಾರೆ. 'ಈ ಮನೆಗೆ ನಾನೇ ಯಜಮಾನ; ಹೀಗೆ ಘೋಷಿಸಲು ನನ್ನ ಹೆಂಡತಿಯ ಅನುಮತಿ ಪಡೆದಿದ್ದೇನೆ' ಎನ್ನುವ ಧೋರಣೆ! ಅವರ ಹೇಳಿಕೆಯ ಸಾಲುಗಳ ನಡುವಿನ ಓದುವಿಕೆಯಲ್ಲಿ ವ್ಯಕ್ತವಾಗುವ ಎರಡು ಸಂಗತಿಗಳು: ಅವರಿಗೆ ಶಾಸಕರ ಬೆಂಬಲವಿದೆ ಹಾಗೂ ಹೈಕಮಾಂಡ್ ಮಣಿಸುವ ಸತತ ಯತ್ನ ಸಾಗಿದೆ.

ಸಿದ್ದರಾಮಯ್ಯ ಹೇಳಿಕೆಯ ಮೊದಲರ್ಧ ಅಪ್ಪಟ ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನದ 164ನೇ ವಿಧಿಯ ಆಶಯಕ್ಕೆ ಅನುಗುಣ, ಉತ್ತರಾರ್ಧ ಮಾತ್ರ ರಾಜಿಕಬೂಲಿ. ಹಾಗಾಗಿ, ಅವರದು ಅರೆ ಪ್ರಜಾಸತ್ತಾತ್ಮಕ ನಿಲುವು. ಸಿ.ಎಂ. ಧೋರಣೆಯಲ್ಲಿ ಕಾಂಗ್ರೆಸ್ ಪಕ್ಷದ ಪಾರಂಪರಿಕ ಹೈಕಮಾಂಡ್ ಸಂಸ್ಕೃತಿಯನ್ನು ಮೃದುವಾಗಿ ಕೆಣಕುವ ದಿಟ್ಟತನವನ್ನೂ ಗುರುತಿಸಬಹುದು. ಮತ್ತೊಂದೆಡೆ ಡಿಕೆಶಿ ಅವರದು ಕಾಂಗ್ರೆಸ್ ಪಕ್ಷದ ಸಂಪ್ರದಾಯಬದ್ಧ 'ಹೈಕಮಾಂಡೇ ಅಂತಿಮ' ಎಂದು ನಂಬುವ ನುಡಿನಡೆ; ಆಂತರಿಕ ಪ್ರಜಾಸತ್ತೆಯ ಮೂಲತತ್ವದ ಬಗ್ಗೆ ನಿಷ್ಠೆ ಅಷ್ಟಕ್ಕಷ್ಟೇ. ಪಕ್ಷದ ಚಿಹ್ನೆಯ ಮೇಲೆ ಚುನಾಯಿತರಾದ ಶಾಸಕರು ಪಕ್ಷದ ಆಜ್ಞಾಪಾಲಕರು ಎಂಬ ಭಾವನೆ.

ಪ್ರಜಾತಂತ್ರ ವ್ಯವಸ್ಥೆಯ ಪ್ರಾಥಮಿಕ ಪ್ರಕ್ರಿಯೆಯಾದ ಚುನಾವಣೆಯ ನೀತಿ ಮತ್ತು ಮಹತ್ವವನ್ನು ಕಡೆಗಣಿಕೆಯಲ್ಲಿಯೇ ಪಾಲಿಸುತ್ತಿರುವ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ನಾಯಕರು ಈ ಕುರಿತು ಮರು ಮನನ ಮಾಡಿಕೊಳ್ಳುವ ತುರ್ತು ಇದೆ. ವಿವಿಧ ಮತಕ್ಷೇತ್ರಗಳ ನಿಗದಿತ ಮತದಾರರಿಂದ ಚುನಾಯಿತರಾಗುವ ಶಾಸಕರು ರಾಜ್ಯ ಸರ್ಕಾರವನ್ನು ರಚಿಸುವ ಮೊದಲ ಹಂತದ ಪ್ರಜಾಪ್ರತಿನಿಧಿಗಳು. ಹೀಗೆ ಚುನಾಯಿತರಾದ, ಬಹುಮತ ಪಡೆದು ಸರ್ಕಾರ ರಚಿಸಲು ಸಜ್ಜಾದ ಪಕ್ಷದ ಸದಸ್ಯರು ಶಾಸಕಾಂಗ ಪಕ್ಷದ ನಾಯಕನನ್ನು, ಆ ಮೂಲಕ ಮುಖ್ಯಮಂತ್ರಿಯನ್ನು ಆರಿಸಬೇಕಾಗುತ್ತದೆ. ಹಾಗಾದಾಗ ಮುಖ್ಯಮಂತ್ರಿ ಗಾದಿಗೆ ಏರುವವರು ಪರೋಕ್ಷವಾಗಿ ಮತದಾರರಿಂದ ಚುನಾಯಿತರಾದ ಪ್ರತಿನಿಧಿ ಎನ್ನಿಸಿಕೊಳ್ಳುತ್ತಾರೆ. ಇಂಥ ಸಹಜ ಪ್ರಜಾಸತ್ತಾತ್ಮಕ 'ಆಯ್ಕೆ' ಪ್ರಕ್ರಿಯೆಗೆ ವ್ಯತಿರಿಕ್ತವಾಗಿ ಹೈಕಮಾಂಡ್ ಮೂಲಕ 'ನೇಮಕ' ಆಗುವ ಮುಖ್ಯಮಂತ್ರಿ ರಾಜ್ಯದ ಬಹುಮತದಾರರನ್ನು ಪ್ರತಿನಿಧಿಸಲು ಹೇಗೆ ಸಾಧ್ಯ?

ಪ್ರಜಾಸತ್ತಾತ್ಮಕ ಮೌಲ್ಯಗಳ ಉಲ್ಲಂಘನೆಯನ್ನು ಮುಖ್ಯಮಂತ್ರಿಯ ಹಲವಾರು ಹೊಣೆಗಾರಿಕೆಯ ನಿರ್ವಹಣೆಯಲ್ಲಿ, ಹೈಕಮಾಂಡ್ ಹಸ್ತಕ್ಷೇಪದ ರೂಪದಲ್ಲಿ ಮುಂದುವರಿಯುವುದನ್ನೂ ಕಾಣಬಹುದು. ಮಂತ್ರಿಮಂಡಲ ರಚನೆಯು ಮುಖ್ಯಮಂತ್ರಿಯ ಪರಮಾಧಿಕಾರ ಎಂಬ ನಿಯಮ, ಪ್ರಚಲಿತ ರಾಜಕೀಯ ಸಂದರ್ಭದಲ್ಲಿ ಅನುಷ್ಠಾನಯೋಗ್ಯ ಅನ್ನಿಸಿಕೊಳ್ಳುತ್ತಿಲ್ಲ. ಇನ್ನು ವಿವಿಧ ಮಂಡಳಿ, ಪ್ರಾಧಿಕಾರ, ಸಲಹೆಗಾರರ ನೇಮಕಾತಿಯ ತೀರ್ಥ ಹೈಕಮಾಂಡ್ ಶಂಖದಿಂದಲೇ ಸ್ರವಿಸಬೇಕಾಗಿದೆ.

ಈತನಕ ಬಾಯಿಮಾತಿನಲ್ಲಿ ಸೂಚ್ಯವಾಗಿ ಸಂವಹನ ಆಗುತ್ತಿದ್ದ ವರಿಷ್ಠರ ಪಟ್ಟಿ ಇದೀಗ ಪಾರದರ್ಶಕತೆಯ ಮತ್ತೊಂದು ಮಜಲು ಪ್ರವೇಶಿಸಿದಂತಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಮ್ಮ ಅಧಿಕೃತ ಲೆಟರ್ ಹೆಡ್‌ನಲ್ಲಿಯೇ 39 ನಿಗಮ, ಮಂಡಳಿಗಳಿಗೆ ಅಧ್ಯಕ್ಷರು-ಉಪಾಧ್ಯಕ್ಷರ ನೇಮಕಾತಿಯ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಮುಖ್ಯಮಂತ್ರಿಗೆ ದಕ್ಕಿದ್ದು ಅನುಮೋದನೆಯ ಅಧಿಕಾರ! ಇದು ಸಂವಿಧಾನ ರಕ್ಷಕ ಎಂದು ಕರೆದುಕೊಳ್ಳುವ ಪಕ್ಷದ ಸ್ವರೂಪ. ಹೀಗೆ ಸಂವಿಧಾನ ಉಳಿಸುವವರು ಮತ್ತು ಉಲ್ಲಂಘಿಸುವವರು ಒಬ್ಬರೇ ಆದರೆ ಹೇಗೆ?

ವಾಚಕರ ವಾಣಿ

ಹಿರಿಯರಿಗೆ ನ್ಯಾಯ: ಕಾನೂನು ಅಗತ್ಯ

ಪೋಷಕರನ್ನು ನಿರ್ಲಕ್ಷಿಸುವ ಸರ್ಕಾರಿ ನೌಕರರ ಸಂಬಳ ಕಡಿತಗೊಳಿಸಿ ತಂದೆ-ತಾಯಿಯ ಬ್ಯಾಂಕ್ ಖಾತೆಗೆ ಜಮೆ ಮಾಡುವ ಕಾನೂನು ರೂಪಿಸುವುದಾಗಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹೇಳಿದ್ದಾರೆ. ಇದೊಂದು ಒಳ್ಳೆಯ ನಿರ್ಧಾರ. ಈ ಕಾನೂನಿನಡಿ ಅತ್ತೆ, ಮಾವಂದಿರನ್ನೂ ಸೇರಿಸಬೇಕು.

ಹಲವು ಕುಟುಂಬಗಳಲ್ಲಿ ಸರ್ಕಾರಿ ಉದ್ಯೋಗದಲ್ಲಿದ್ದ ಮಗ ತೀರಿಕೊಂಡಾಗ ಆತನ ವೃದ್ಧ ತಂದೆ-ತಾಯಿ ನಿರಾಶ್ರಿತರಾಗಿ ಬೀದಿಗಳಲ್ಲಿ ಭಿಕ್ಷೆ ಎತ್ತುವುದನ್ನು ಕಂಡಿದ್ದೇವೆ. ಸೊಸೆಯ ಕಾಟಕ್ಕೆ ಬೇಸತ್ತು ಮನೆಯಿಂದ ಹೊರಬಿದ್ದು, ಎಲ್ಲೋ ಬದುಕು ಸವೆಸಿ ಸತ್ತು ಹೋದ ಜೀವಗಳೆಷ್ಟೋ? ಇಂತಹ ಸಂಸಾರಗಳತ್ತ ಸರ್ಕಾರ ಗಮನ ಹರಿಸಲಿ. ಈ ಬಗ್ಗೆ ಸಮೀಕ್ಷೆ ಮಾಡಬೇಕಿದೆ. ಕೆಲವು ಪ್ರಕರಣಗಳಲ್ಲಿ ಸೈನಿಕನಾಗಿದ್ದ ಮಗ ಸತ್ತು ಹೋದರೆ ಪಿಂಚಣಿಯು ಸೊಸೆ, ಮಕ್ಕಳ ಪಾಲಾಗುತ್ತದೆ. ಆ ಸೊಸೆ, ಅತ್ತೆ-ಮಾವನನ್ನು ನಿರ್ಲಕ್ಷಿಸಿದ ನಿದರ್ಶನಗಳಿವೆ. ಬಾಲ್ಯದಲ್ಲಿ ಮಕ್ಕಳನ್ನು ಸಾಕಿ ಸಲಹಿದ ತಂದೆ-ತಾಯಿಗೆ ನ್ಯಾಯ ದೊರಕಿಸುವ ಕಾನೂನುಗಳು ಅಗತ್ಯ.

ಶಿವಶರಣಪ್ಪ ರಾ. ಬಿರಾದಾರ, ಹಿರೆಬೇವನೂರ

ಕಣ್ಮರೆಯಾಗುತ್ತಿವೆ ಕನ್ನಡ ಪದಗಳು!

ಕಿರಾಣಿ ಅಂಗಡಿಗೆ ಹೋಗಿದ್ದೆ. ಅಂಗಡಿ ಮಾಲೀಕರ ಕುಟುಂಬದ ಹುಡುಗನೊಬ್ಬ ವ್ಯಾಪಾರ ಮಾಡುತ್ತಿದ್ದ. ತೊಗರಿಬೇಳೆ ಕೊಡು ಎಂದು ಕೇಳಿದೆ. ಆ ಬಾಲಕ, 'ತೂರ್ ದಾಲ ಆಂಟಿ?' ಎಂದ. ಇಂಗ್ಲಿಷ್ ಮೂಲಕ ತರಕಾರಿ-ಧಾನ್ಯಗಳ ಗುರ್ತಿಸುವ ತಲೆಮಾರಿನವನಂತೆ ಆ ಹುಡುಗ ಕಂಡ. ತಕ್ಷಣಕ್ಕೆ ಟಿ.ವಿ. ಅಡುಗೆ ಶೋಗಳು ನೆನಪಾದವು. ಗಾರ್ಲಿಕ್ ಜಿಂಜರ್ ಪೇಸ್ಟ್, ಜಾಗರಿ, ಬಟರ್, ಕರಿ ಲೀಫ್, ಅಕ್ಕಿಯನ್ನು ಎರಡು ಅವರ್ ಸೋಕ್ ಮಾಡಿರಬೇಕು, ಇನ್ನೊಂದು ಕಡಾಯಿಗೆ ಟ್ರಾನ್ಸ್‌ಫಾರ್ ಮಾಡಿಕೊಬೇಕು- ಶೋಗಳಲ್ಲಿನ ಭಾಷಾ ಬಳಕೆಯ ಕೆಲವು ಉದಾಹರಣೆಗಳಿವು.

ಕನ್ನಡದಲ್ಲಿ ಬೇಳೆಕಾಳು, ತರಕಾರಿಗಳ ಹೆಸರಿನ ಬಗ್ಗೆ ಮನೆಯಲ್ಲಿ ಮಕ್ಕಳಿಗೆ ಹೇಳಿಕೊಡಬೇಕಿದೆ. ಇಲ್ಲದಿದ್ದರೆ ಕನ್ನಡದಲ್ಲಿ ದಿನಸಿ ಪದಾರ್ಥದ ಪದಗಳು ಕ್ರಮೇಣ ಮರೆಯಾಗುವುದರಲ್ಲಿ ಸಂದೇಹವಿಲ್ಲ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಅಂಬೇಡ್ಕರ್ ಎಲ್ಲರ ಎದೆಗೆ ಬೀಳುವರೆ?

ರಾಜ್ಯದಲ್ಲಿ ಅಸ್ಪೃಶ್ಯತೆ ಮೀರಿ, ವೈಚಾರಿಕತೆಯ ತುಡಿತದಿಂದ ಬುದ್ಧನೆಡೆಗೆ ನಡೆಯುತ್ತಿರುವ ದಲಿತ ಸಮುದಾಯವನ್ನು ಕಂಡು ಮನಸ್ಸು ಹಿಗ್ಗಿತ್ತು. ಇದರ ಬೆನ್ನಲ್ಲೇ ದೇವರ ಕಾರ್ಯಕ್ಕೆ ಹಣ ನೀಡಿಲ್ಲವೆಂಬ ಕಾರಣಕ್ಕಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ಗಂಜಾಂನಲ್ಲಿ ದಲಿತ ಕುಲದ ಯಜಮಾನರೇ, ದಲಿತರಿಗೆ ಬಹಿಷ್ಕಾರ ಹಾಕಿರುವುದು ಮನಸ್ಸಿಗೆ ನೋವುಂಟು ಮಾಡಿತು. ಬಿ.ಆರ್. ಅಂಬೇಡ್ಕರ್ ಅವರು ಇವರ ಮನಕ್ಕಲ್ಲ, ಬಹುಶಃ ಮನೆಗಳಿಗೂ ಇಳಿದಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ. ಈ ಬಗೆಯ ಮನಃಸ್ಥಿತಿ ಮೀರಲು ಇವರಿಗೆ ಇನ್ನೆಷ್ಟು ಶತಮಾನಗಳು ಬೇಕೋ?

ಅಭಿಲಾಶ, ಬೆಂಗಳೂರು

ಗುಂಡಿಗೆ

ಈಗ ನಮಗೆ ಬೇಕು
ಅಸಾಮಾನ್ಯ ಧೈರ್ಯ
ಎರೆಡೆರಡು ಗುಂಡಿಗೆ...
ಕಾರು ಬೈಕು ಇಳಿಸಬೇಕಲ್ಲ
ಅಡಿಗಡಿಗೂ ಸಿಗುವ
ರಸ್ತೆಯ ಗುಂಡಿಗೆ!

ಆರ್. ಸುನೀಲ್, ತರೀಕೆರೆ

ಸ್ವಯಂ ಅಹವಾಲು ಹೆಚ್ಚಳದ ಸಾಧ್ಯತೆ

ಬೆಂಗಳೂರಿನ 'ಬರ್ಲಿ ಸ್ಟ್ರೀಟ್'ಗೆ ತಮ್ಮ ಹೆಸರು ನಾಮಕರಣ ಮಾಡುವಂತೆ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ ಅವರು, ಉಪಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ ಮತ್ತು ಇತರ ಸಾಹಿತ್ಯಿಕ ಪ್ರಶಸ್ತಿಗಳನ್ನು ಪಡೆಯಲು ಶಿಫಾರಸ್ಸಿಗೆ ದುಂಬಾಲು ಬೀಳುವವರ ಬಗ್ಗೆ ಕೇಳಿದ್ದೇವೆ. ಆದರೆ, ಕಿರ್ಮಾನಿ ಅವರು, ರಸ್ತೆಯೊಂದಕ್ಕೆ ತಮ್ಮ ಹೆಸರಿಡಬೇಕೆಂದು ಖುದ್ದಾಗಿ ಅರ್ಜಿ ಹಾಕಿಕೊಂಡಿರುವುದು ಕುತೂಹಲ ಮೂಡಿಸಿದೆ. ಇನ್ನು ಮುಂದೆ ಇದೇ ರೀತಿಯ ಸ್ವಯಂ ಅಹವಾಲುಗಳ ಸಂಖ್ಯೆ ಹೆಚ್ಚಾಗಬಹುದು.

ಹೆಚ್.ವಿ. ಶ್ರೀಧರ್, ಬೆಂಗಳೂರು

ಮುಟ್ಟಿನ ರಜೆ: ಸ್ವಾಗತಾರ್ಹ ನಿರ್ಧಾರ

ಋತುಚಕ್ರದ ನೋವು ತಡೆದುಕೊಳ್ಳಲಾಗದೆ, 'ಒಂದು ಸಲವಾದರೂ ಗಂಡಾಗಿ ಹುಟ್ಟಬೇಕು' ಎಂದು ನನಗೆ ಅನ್ನಿಸಿರುವುದುಂಟು. ಯಾಕೆಂದರೆ ಹೆಣ್ಣಿಗಿರುವಷ್ಟು ದೇಹದ ತೊಂದರೆ ಗಂಡಿಗಿಲ್ಲವಲ್ಲ ಎಂದು ಎನಿಸುತ್ತಿತ್ತು. ಮುಟ್ಟಿನ ಸಂದರ್ಭದಲ್ಲಿ ಕೆಲಸಕ್ಕೆ ಹೋಗುವುದೆಂದರೆ ನರಕಸದೃಶವೇ ಸರಿ.

ಕೆಲಸದ ಸ್ಥಳದಲ್ಲಿ ನೋವು ಹೆಚ್ಚಾದರೂ ಅವಳು ಮುಖ ಸಪ್ಪೆ ಮಾಡಿಕೊಂಡು ಹೊಟ್ಟೆ ಹಿಚುಕಿಕೊಳ್ಳುತ್ತ ತನ್ನ ಕರ್ತವ್ಯದಲ್ಲಿ ನಿರತಳಾಗಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಋತುಚಕ್ರದ ರಜೆ ನೀಡಲು ಕೈಗೊಂಡಿರುವ ನಿರ್ಧಾರ ಸ್ವಾಗತಾರ್ಹ.

ಸುಜಾತಾ ಚಲವಾದಿ, ತಾಳಿಕೋಟಿ

ಓದಿಗೆ ತಕ್ಕ ಕೆಲಸ ಸಿಗದೆ ಪರದಾಟ

ರಾಜ್ಯದಲ್ಲಿ ಯುವಜನತೆ ಸರ್ಕಾರಿ ಉದ್ಯೋಗಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ, ಮೈಸೂರಿನಲ್ಲಿ ಸರ್ಕಾರದಿಂದ ಯುವ ಸಮೃದ್ಧಿ ಸಮ್ಮೇಳನದ ಹೆಸರಿನಡಿ ನಡೆದ ಉದ್ಯೋಗ ಮೇಳದಲ್ಲಿ ಭಾಗವಹಿಸದೆ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಉದ್ಯೋಗ ಕೊಡಿ, ಖಾಸಗಿ ಉದ್ಯೋಗ ಕೊಡಿಸಲು ನೀವು ಮಧ್ಯವರ್ತಿಗಳಾಗಬೇಡಿ ಎಂದು ಕಾರ್ಯಕ್ರಮವನ್ನು ಧಿಕ್ಕರಿಸಿದ್ದಾರೆ. ಇಂತಹ ಉದ್ಯೋಗ ಮೇಳದಲ್ಲಿ ಓದಿಗೆ ತಕ್ಕ ಕೆಲಸ ಸಿಕ್ಕದಿರುವುದು ವಿಷಾದನೀಯ. ಸರ್ಕಾರಕ್ಕೆ ಯುವಜನತೆ ಬಗ್ಗೆ ಕಾಳಜಿ ಇದ್ದರೆ ಖಾಲಿ ಉಳಿದಿರುವ ಹುದ್ದೆಗಳ ಭರ್ತಿಗೆ ಅಧಿಸೂಚನೆ ಪ್ರಕಟಿಸಬೇಕಿದೆ.

ದರ್ಶನ್ ಚಂದ್ರ ಎಂ.ಪಿ., ಮುಕ್ಕಡಹಳ್ಳಿ

ಚುರುಮುರಿ



ಬೆಕ್ಕಣ್ಣನ ದೀಪಾವಳಿ

• ಸುಮಂಗಲಾ

'ನನಗ ಹೊಸೂರಿಗೆ ಕರಕಂಡು ಹೋಗಿ ಪಟಾಕಿ ಕೊಡಿಸು' ಎಂದು ಬೆಕ್ಕಣ್ಣ ದುಂಬಾಲು ಬಿದ್ದಿತ್ತು.

'ನೀನೇ ಒಂದು ಸುರುಸುರು ಬತ್ತಿ ಪಟಾಕಿ! ನೀ ಮಾತಾಡಿಕೋತ ಮನಿ ಒಳಗ, ಹೊರಗ ಓಡಾಡತಿದ್ದರೆ ಬೆಳಕು, ಚಟಪಟ ಸದ್ದು ಎರಡೂ ಇರತೈತಿ' ಎಂದು ಬೆಣ್ಣೆ ಹಚ್ಚಿದೆ.

'ಹೋದವರ್ಸ ನೀನೇ ನಮ್ಮನೆಯ ಚಿನಕುರುಳಿ ಅಂತ ಹೇಳಿ ಪಟಾಕಿ ಕೊಡಸಲಿಲ್ಲ. ಎಷ್ಟರ ಜಿಪುಣಿ ಮಾಡತೀಯ' ಎಂದು ಮೂತಿ ತಿರುವಿ, ಪೇಪರು ತಿರುವತೊಡಗಿತು.

'ಈ ಸಲ ನಮ್ ಮೋದಿಮಾಮಾ ದೀಪಾವಳಿ ಆಚರಿಸಾಕೆ ದೇಶದ ಯಾವ ಭಾಗಕ್ಕೆ ಹೋಗತಾರೆ ಗೊತ್ತೈತೇನು?' ಎಂದು ಕೇಳಿತು.

'ಲಡಾಕಿನಲ್ಲಿ ವಾಂಗ್ಚುಕ್ ಮತ್ತ ಅವನ ಕಡಿಯವ್ರು ಪರಿಸರ ಹೋರಾಟ ನಡೆಸ್ಯಾರಲ್ಲ... ಆ ಎಲ್ಲ ಹೋರಾಟಕ್ಕಿಂತ ಸೈನಿಕರ ಜೊತಿಗಿ ದೀಪಾವಳಿ ಆಚರಿಸೂದು ಮಹತ್ವದ್ದು ಎಂಬ ಸಂದೇಶ ಕೊಟ್ಟಂಗೆ ಆಗತೈತಿ ಅಂತ ಲಡಾಕಿನ ಗಡಿಭಾಗಕ್ಕೆ ಹೋಗಬೌದೇನೋ' ಎಂದೆ ನಾನು.

'ಸುದ್ದಿ ಓದಿ ಅಪ್‌ಡೇಟ್ ಆಗು! ಮೋದಿಮಾಮಾ ಈ ಸಲ ಗೋವಾಕ್ಕೆ ಹೋಗಿ, ನೌಕಾದಳದವರ ಜೊತಿಗಿ ಆಚರಿಸ್ತಾರಂತ. ನಾವೂ ಹಂಗ ದೇಶ ರಕ್ಷಣೆಯ ಸೈನಿಕರಿಗೆ ಸಿಹಿ ತಿನ್ನಿಸಿ, ದೀಪಾವಳಿ ಮಾಡೂಣು' ಅಂತ ಹೊಸ ಯೋಜನೆ ಮುಂದಿಟ್ಟಿತು.

'ಇಲ್ಲಿ ಹತ್ರದಲ್ಲಿ ಎಲ್ಲಿ ಸೈನಿಕರ ತುಕಡಿ ಅದಾವು' ಎಂದು ನಾನು ರಾಗವೆಳೆದೆ.

'ಪೊಲೀಸರು ಇರತಾರಲ್ಲ! ಇಲ್ಲೇ ಹೊಸೂರಿನತ್ರ ಹೋಗೂಣು... ಕರ್ನಾಟಕ- ತಮಿಳುನಾಡು ಗಡಿ ಭಾಗದ ಟೋಲ್ ನಾಕಾದ ಹತ್ರ ಪೊಲೀಸರಿಗೆ ಸಿಹಿ ತಿನ್ನಿಸಿ, ದೀಪಾವಳಿ ಆಚರಿಸೂಣು' ಎಂದಿತು.

'ಏನರೇ ಒಂದು ಉತಾವಳಿ ಹಚ್ಚತೀ ನೀ... ಬ್ಯಾರೆ ಕೆಲಸಿಲ್ಲೇನು' ಎಂದು ಬೈದೆ.

'ಅಷ್ಟೊತ್ತಿಗೆ ಹೊಸೂರಿನಾಗೆ ಕಡಿಮೆ ಬೆಲೆಗೆ ಪಟಾಕಿ ಮಾರತಿರತಾರೆ. ಪೊಲೀಸರಿಗೆ ದೀಪಾವಳಿ ಸಿಹಿ ತಿನ್ನಿಸಿ, ಹಂಗೇ ಒಂದಿಷ್ಟು ಪಟಾಕಿ ತಗಂಡು ಬರೂಣು' ಎಂದು ಬೆಕ್ಕಣ್ಣ ಕಣ್ಣು ಮಿಟುಕಿಸಿತು.

ಸಂಗತ

ಸುಸ್ಥಿರ ಬದುಕಿಗಾಗಿ ನಿಖರ ಅಂಕಿಅಂಶಗಳು

ಅಂಕಿಸಂಖ್ಯೆಗಳ ಮಹತ್ವಕ್ಕೆ 'ಸಾಮಾಜಿಕ – ಶೈಕ್ಷಣಿಕ ಸಮೀಕ್ಷೆ' ನಿದರ್ಶನದಂತಿದೆ. ನಿಖರ ದತ್ತಾಂಶಗಳಿಂದ ಸರ್ಕಾರದ ಜನಪರ ಯೋಜನೆಗಳು ರೂಪುಗೊಳ್ಳಲು ಸಾಧ್ಯ.

• ಶ್ರೀಗುರು

ನಿತ್ಯ ಜೀವನದಲ್ಲಿ ನಾವು ಆಡುವ ಬಹುಪಾಲು ಮಾತುಗಳು ಅಂಕಿಸಂಖ್ಯೆಗಳನ್ನು ಒಳಗೊಂಡಿರುತ್ತವೆ. ದೇಶದ ನಾಗರಿಕರು, ಕಾಡಿನಲ್ಲಿರುವ ಪ್ರಾಣಿಗಳು, ವಿದ್ಯಾರ್ಥಿಗಳು, ದೇಶದ ಒಟ್ಟು ಮತದಾರರು, ನಿರುದ್ಯೋಗ ಪ್ರಮಾಣ, ಜನರ ತಲಾ ಆದಾಯ... ಹೀಗೆ ಎಲ್ಲದಕ್ಕೂ ನಿರ್ದಿಷ್ಟ ಅಂಕಿಸಂಖ್ಯೆಗಳಿರುತ್ತವೆ. ಮನೆ ನಿರ್ಮಿಸಲು ಸಾಲ ಬೇಕು ಎಂದರೆ ಬ್ಯಾಂಕಿನವರು 'ಎಸ್ಟಿಮೇಟ್ ತನ್ನಿ' ಎನ್ನುತ್ತಾರೆ. ಜನರಿಗಾಗಿ ಯೋಜನೆ ರೂಪಿಸುವ ಸರ್ಕಾರಗಳು ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಮೊದಲು ಕಲೆಹಾಕುತ್ತವೆ. ಕ್ರೀಡೆ, ಉದ್ಯಮ, ವ್ಯಾಪಾರ, ಉದ್ಯೋಗ, ಆರೋಗ್ಯ, ಮೂಲ ಸೌಕರ್ಯ, ಸಾಕ್ಷರತೆ, ಆಮದು-ರಫ್ತು, ಆರ್ಥಿಕ ಏರಿಳಿತದಂತಹ ಮಾಹಿತಿಗಳೆಲ್ಲ ಅಂಕಿಸಂಖ್ಯೆಗಳ ರೂಪದಲ್ಲಿಯೇ ಇರುತ್ತವೆ. ಇದೆಲ್ಲವನ್ನು ಗಮನಿಸಿಯೇ, 'ಅಂಕಿಸಂಖ್ಯೆಗಳ ತಿಳಿಯದೆ ನುಡಿದರೆ ಅದು ನುಡಿಯಲ್ಲ' ಎಂದು ಬಸವಣ್ಣನವರು ಹೇಳಿರಬೇಕು.

ಅಂಕಿ-ಅಂಶಗಳು ಕೇವಲ ಅಂಕಗಣಿತದ ಸಂಖ್ಯೆಗಳಲ್ಲ. ಅವು ಸಮಾಜದ ವಾಸ್ತವ ಚಿತ್ರಣವನ್ನು ನೀಡುವ ಸಾಧನಗಳು. ವಸ್ತುಸ್ಥಿತಿಯ ಕೈಗನ್ನಡಿಗಳು. ನಮ್ಮದು ಅಭಿವೃದ್ಧಿ ಮತ್ತು ವಾಯುಗುಣ ವೈಪರೀತ್ಯದ ಯುಗ. ಈಗ ಎಲ್ಲೇ ಅಭಿವೃದ್ಧಿ ಕೆಲಸಗಳು ನಡೆದರೂ, ಲಭ್ಯವಿರುವ ಅಧಿಕೃತ ಅಂಕಿಸಂಖ್ಯೆಗಳನ್ನು ಆಧರಿಸಿಯೇ ನಡೆಯಬೇಕು. ಒಂದು ಸಣ್ಣ ತಪ್ಪು ಮಾಹಿತಿ ಆಧಾರಿತ ಕೆಲಸವು ಭಾರೀ ಬೆಲೆ ತೆರುವಂತೆ ಮಾಡಬಲ್ಲದು. ಈ ಅಂಕಿಅಂಶಗಳ ಮಹತ್ವ ಮನಗಂಡಿರುವ ಉನ್ನತ ಶಿಕ್ಷಣ ಸಂಸ್ಥೆಗಳು, ಬೃಹತ್ ದತ್ತಾಂಶದ (ಬಿಗ್ ಡೇಟಾ) ಜೊತೆಗೆ, ಅಂಕಿಅಂಶ ಸಂಗ್ರಹ ಮತ್ತು ವಿಶ್ಲೇಷಣೆಯ ಪದವಿ ಹಾಗೂ ಉನ್ನತ ಶಿಕ್ಷಣದ ಕೋರ್ಸ್‌ಗಳನ್ನು ಕಲಿಸುತ್ತಿವೆ.



ಭಾರತ ಸರ್ಕಾರದ ನೀತಿ ಆಯೋಗ, ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್, ನ್ಯಾಷನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಷನ್, ನ್ಯಾಷನಲ್ ಇನ್‌ಫಾರ್ಮ್ಯಾಟಿಕ್ ಸೆಂಟರ್, ಇಂಡಿಯನ್ ಮಾರ್ಕೆಟ್ ರಿಸರ್ಚ್ ಬ್ಯೂರೊಗಳು ದೇಶದ ಆಡಳಿತದ ಚುಕ್ಕಾಣಿ ಹಿಡಿದ ನಾಯಕರಿಗೆ ಕಾಲಕಾಲಕ್ಕೆ ದತ್ತಾಂಶ ಒದಗಿಸಿ, ಜನಪರ ಕೆಲಸ ಮಾಡಲು ಸಹಾಯ ಮಾಡುತ್ತವೆ. ಅಂಕಿಅಂಶಗಳ ಪ್ರಾಮುಖ್ಯ ತಿಳಿಸಲು ವಿಶ್ವಸಂಸ್ಥೆಯು ಪ್ರತಿ ಐದು ವರ್ಷಗಳಿಗೊಮ್ಮೆ, ಅಕ್ಟೋಬರ್ 20ರ ದಿನವನ್ನು 'ವಿಶ್ವ ಸಂಖ್ಯಾ ವಿಜ್ಞಾನ ದಿನ'ವನ್ನಾಗಿ ಆಚರಿಸುತ್ತದೆ. ಈ ವರ್ಷದ ಸಂಖ್ಯಾ ವಿಜ್ಞಾನ ದಿನದ ಧ್ಯೇಯ, 'ಬದಲಾವಣೆ ಮತ್ತು ಎಲ್ಲರಿಗಾಗಿ ಗುಣಮಟ್ಟದ ಅಂಕಿಅಂಶಗಳು' ಎಂಬುದಾಗಿದೆ.

ಸಂಖ್ಯಾ ವಿಜ್ಞಾನ ದಿನಾಚರಣೆಯು ಜಾಗತಿಕ ಸಹಕಾರ ಮತ್ತು ಜಾಗೃತಿಯನ್ನು ಉತ್ತೇಜಿಸುತ್ತದೆ. ಸಮುದಾಯಗಳು, ಸರ್ಕಾರಗಳು ಮತ್ತು ಸಂಸ್ಥೆಗಳು ವಿಶ್ವಾಸಾರ್ಹ ಅಂಕಿಅಂಶಗಳ ಮಹತ್ವ ಗುರುತಿಸಲು ಮುಂದಾಗುತ್ತವೆ. ಆಧುನಿಕ ಪ್ರಪಂಚದ ಪ್ರತಿ ನಿರ್ಧಾರ, ಪ್ರಗತಿ ಮತ್ತು ಯೋಜನೆಗಳಿಗೆ ಅಂಕಿಅಂಶಗಳೇ ಅಡಿಪಾಯ ಆಗಿರುವುದರಿಂದ, ನಿಖರ ಮಾಹಿತಿ ಸಂಗ್ರಹಿಸಿ ದಾಖಲಿಸುವುದು ತುಂಬಾ ಮುಖ್ಯ. ಮಾಹಿತಿ ಸೋರಿಕೆಯಾಗಿ ಯಾರದೋ ಕೈ ಸೇರದಂತೆ ತಡೆಯುವುದು ಇನ್ನೂ ಮುಖ್ಯ. ದತ್ತಾಂಶ ಕಳ್ಳತನ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿರುವುದನ್ನು ಗಮನಿಸಿದರೆ, ಆಧುನಿಕ ಜಗತ್ತಿನಲ್ಲಿ ದತ್ತಾಂಶ ಮತ್ತು ಅಂಕಿಅಂಶಕ್ಕಿರುವ ಪ್ರಾಮುಖ್ಯದ ಅರಿವಾಗುತ್ತದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2010ರಲ್ಲಿ, 'ವಿಶ್ವ ಸಂಖ್ಯಾ ವಿಜ್ಞಾನ ದಿನ'ವನ್ನು ಆಚರಿಸಲು ನಿರ್ಣಯ ಕೈಗೊಂಡಿತು. 'ಸೇವೆ, ಸಮಗ್ರತೆ ಮತ್ತು ವೃತ್ತಿಪರತೆ'ಯ ಮೌಲ್ಯಗಳ ಆಧಾರದ ಮೇಲೆ ವಿಶ್ವದಾದ್ಯಂತ ಅಧಿಕೃತ ಅಂಕಿಅಂಶಗಳ ಸಾಧನೆಗಳನ್ನು ಗುರ್ತಿಸುವ ಉದ್ದೇಶದಿಂದ ಇಲ್ಲಿಯವರೆಗೆ ಮೂರು ಬಾರಿ (2010, 2015, ಮತ್ತು 2020ರಲ್ಲಿ) ಸಂಖ್ಯಾ ವಿಜ್ಞಾನ ದಿನವನ್ನು ಆಚರಿಸಲಾಗಿದೆ.

ದತ್ತಾಂಶದ ಪ್ರಾಮುಖ್ಯ ಕುರಿತು ಜಾಗೃತಿ ಮೂಡಿಸಲು, ಸಾಮಾಜಿಕ, ಆರ್ಥಿಕ ಮತ್ತು ಪರಿಸರ ನೀತಿಗಳನ್ನು ರೂಪಿಸಲು, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಲು ನಿಖರವಾದ ಮತ್ತು ಸಕಾಲಿಕ ಅಂಕಿಅಂಶಗಳು ಎಷ್ಟು ನಿರ್ಣಾಯಕ ಎಂಬುದನ್ನು ಜಗತ್ತಿಗೆ ಮನವರಿಕೆ ಮಾಡಿಕೊಡುವುದು ಈ ದಿನದ ಆಚರಣೆಯ ಉದ್ದೇಶವಾಗಿದ್ದರೂ, ಸಾಂಖ್ಯಿಕ ವ್ಯವಸ್ಥೆಗಳ ಬಲವರ್ಧನೆಯೂ ಇದರ ಉಪ ಗುರಿಗಳಲ್ಲೊಂದು.

ಒಂದು ದೇಶದ ಆರೋಗ್ಯ, ಶಿಕ್ಷಣ, ಬಡತನ, ಉದ್ಯೋಗ, ಆರ್ಥಿಕತೆ ಮುಂತಾದ ಕ್ಷೇತ್ರಗಳಲ್ಲಿನ ಪ್ರಗತಿ ಅಳೆಯಲು ನಿಖರವಾದ ಅಂಕಿಅಂಶಗಳು ಅನಿವಾರ್ಯ. ಸರ್ಕಾರವು ಪರಿಣಾಮಕಾರಿ ನೀತಿಗಳನ್ನು ರೂಪಿಸಲು, ಸಂಪನ್ಮೂಲಗಳನ್ನು ಹಂಚಲು ಮತ್ತು ಯೋಜನೆಯ ಪ್ರಗತಿ ಪರಿಶೀಲಿಸಲು ಸಂಖ್ಯಾಶಾಸ್ತ್ರೀಯ ದತ್ತಾಂಶಗಳು ನಿಖರ ನೆಲೆ ಒದಗಿಸುತ್ತವೆ. ಸಂಗ್ರಹಿಸಿದ ದತ್ತಾಂಶ ಆಧರಿಸಿ, ಕೊರತೆ ಇರುವ ಕ್ಷೇತ್ರಗಳ ಅಭಿವೃದ್ಧಿಯ ಕಡೆ ಗಮನ ಹರಿಸಲು ಸರ್ಕಾರಗಳು ಮುಂದಾಗುತ್ತವೆ.

ಪ್ರಸ್ತುತ ಕರ್ನಾಟಕ ಸರ್ಕಾರವು ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮೂಲಕ, ರಾಜ್ಯದ ಜನತೆಯ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಕುರಿತು ಅಧಿಕೃತ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಇದು ನಿಖರ ಮತ್ತು ವಾಸ್ತವಾಂಶಗಳಿಂದ ಕೂಡಿದ್ದರೆ ಜನಪರ ಯೋಜನೆ ರೂಪಿಸಲು ಯೋಜನಾಕರ್ತರಿಗೆ ಅನುಕೂಲವಾಗುತ್ತದೆ.

ಅಧಿಕೃತ ಅಂಕಿಅಂಶಗಳ ಗುಣಮಟ್ಟ ಮತ್ತು ವಿಶ್ವಾಸಾರ್ಹತೆ ಹೆಚ್ಚಿಸುವುದು ಮತ್ತು ಅವುಗಳನ್ನು ಹೆಚ್ಚು ಪಾರದರ್ಶಕಗೊಳಿಸುವುದು ಈ ದಿನದ ಆಚರಣೆಯ ಮತ್ತೊಂದು ಉದ್ದೇಶವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಳ್ಳಿಗೇಕೆ ಬೆರಗಿನ ಬೆಲೆ?

ಚಿನಿವಾರ ಪೇಟೆಯಲ್ಲಿ ಬೆಳ್ಳಿಯ ಧಾರಣೆಯು ಚಿನ್ನದ ಮಾದರಿಯಲ್ಲಿ ಹೆಚ್ಚಾಗುತ್ತಿದೆ. ಮೂರು ದಿನಗಳ ಹಿಂದೆ ಗರಿಷ್ಠ ಮಟ್ಟಕ್ಕೇರಿ ದಾಖಲೆ ಬರೆದಿದೆ. ಒಂದು ವರ್ಷದ ಅವಧಿಯಲ್ಲಿ ಬೆಳ್ಳಿಯ ದರವು ಶೇ 70ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಚಿನ್ನದ ದರ ಗಗನಮುಖಿಯಾಗುತ್ತಿರುವುದನ್ನು ನೋಡುತ್ತಾ ಬಂದಿದ್ದ ಜನರಿಗೆ, ಬೆಳ್ಳಿಯ ಧಾರಣೆಯ ಏರಿಕೆಯ ರಾಕೆಟ್ ವೇಗ ಬೆರುಗು ಮೂಡಿಸಿದೆ

• ಸೂರ್ಯನಾರಾಯಣ ವಿ.

ಬೆಳಕಿನ ಹಬ್ಬ ದೀಪಾವಳಿಗೂ ಮುನ್ನ ಧನತ್ರಯೋದಶಿಯ ಅಂಗವಾಗಿ ಆಭರಣಗಳ ಖರೀದಿಗೆ ಚಿನ್ನಾಭರಣ ಮಳಿಗೆಗಳಿಗೆ ಮುಗಿಬಿದ್ದ ಗ್ರಾಹಕರಿಗೆ ಬೆಳ್ಳಿಯ ಗಟ್ಟಿ, ನಾಣ್ಯಗಳು, ಬೆಳ್ಳಿಯ ಆಭರಣಗಳು ಹಾಗೂ ಇನ್ನಿತರ ವಸ್ತುಗಳು ಬೇಕಾದಷ್ಟು ಪ್ರಮಾಣದಲ್ಲಿ ಸಿಗಲಿಲ್ಲ. ಬೇಡಿಕೆಗೆ ತಕ್ಕಂತೆ ಪೂರೈಸಲು ಮಳಿಗೆಗಳ ಮಾಲೀಕರಿಗೂ ಸಾಧ್ಯವಾಗಲಿಲ್ಲ. 'ಬಿಳಿ ಲೋಹ'ದ ಕೊರತೆ ಮತ್ತು ಅದರ ಧಾರಣೆ ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದ್ದರಿಂದ ವ್ಯಾಪಾರಿಗಳು ಬೆಳ್ಳಿಯ ವಹಿವಾಟಿಗೆ ಮಿತಿ ಹೇರಿದ್ದರು. ಈ ಸನ್ನಿವೇಶ ನಮ್ಮ ರಾಜ್ಯದಲ್ಲಷ್ಟೇ ಅಲ್ಲ; ಇಡೀ ದೇಶದಲ್ಲಿ ಕಂಡು ಬಂದಿದೆ.

ಚಿನಿವಾರ ಪೇಟೆಯಲ್ಲೀಗ ಚಿನ್ನಕ್ಕಿಂತಲೂ ಬೆಳ್ಳಿಗೆ ಹೆಚ್ಚು ಬೇಡಿಕೆ. ಚಿನ್ನದ ಬೆಲೆ ಏರು ಹಾದಿಯಲ್ಲಿದ್ದರೂ, ಬೆಲೆ ಹೆಚ್ಚಳದಲ್ಲಿ ಬೆಳ್ಳಿಯು ಬಂಗಾರವನ್ನು ಹಿಂದಿಕ್ಕಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬೆಳ್ಳಿ ಧಾರಣೆ ಶೇ 75ಕ್ಕೂ ಹೆಚ್ಚಿನ ಏರಿಕೆ ಕಂಡಿದೆ. ಇದೇ 15ರಂದು ಬೆಂಗಳೂರಿನ ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಳ್ಳಿ ಧಾರಣೆ ಕೆಜಿಗೆ ₹2.06 ಲಕ್ಷ ತಲುಪಿತ್ತು. ದಾಖಲೆ ಮಟ್ಟಕ್ಕೆ ಏರಿದ ನಂತರ ಬೆಲೆ ಇಳಿದಿದ್ದರೂ, ಬೆಂಗಳೂರಿನಲ್ಲಿ ಪ್ರತಿ ಕೆಜಿ ಬೆಳ್ಳಿಗೆ ₹1.80 ಲಕ್ಷ ಇದೆ. ದೆಹಲಿಯಲ್ಲಿ ₹1.70 ಲಕ್ಷ ಇದೆ (ಶನಿವಾರದ ಧಾರಣೆ).

ಜಗತ್ತಿನಲ್ಲಿ 'ಬಿಳಿ ಲೋಹ'ದ ಕೊರತೆ

ಜಗತ್ತಿನಲ್ಲೇ ಭಾರತವು ಬೆಳ್ಳಿಯ ಅತಿ ದೊಡ್ಡ ಗ್ರಾಹಕ ರಾಷ್ಟ್ರ. ತನ್ನ ಬೇಡಿಕೆಯಲ್ಲಿ ಶೇ 80ರಷ್ಟು ಬಿಳಿ ಲೋಹವನ್ನು ಆಮದು ಮಾಡಿಕೊಳ್ಳುತ್ತದೆ. ಅಮೆರಿಕ ಮತ್ತು ಚೀನಾಗ ಕೂಡ ಬೆಳ್ಳಿ ಬಳಕೆಯಲ್ಲಿ ಮುಂಚೂಣಿಯಲ್ಲಿವೆ. ಬೆಳ್ಳಿಯ ಧಾರಣೆ ಹೆಚ್ಚಳ ಭಾರತಕ್ಕಷ್ಟೇ ಸೀಮಿತವಾಗಿಲ್ಲ. ಜಗತ್ತಿನೆಲ್ಲೆಡೆ ಈ ಪ್ರವೃತ್ತಿ ಕಂಡು ಬರುತ್ತಿದೆ. ಇದಕ್ಕೆ ಪ್ರಮುಖ ಕಾರಣ ಬೆಳ್ಳಿಯ ಕೊರತೆ. ಇದರ ಜತೆಗೆ ಜಾಗತಿಕ ಆರ್ಥಿಕ, ರಾಜಕೀಯ ಕಾರಣಗಳೂ ಇವೆ.

ಆಧಾರ: ಪಿಟಿಐ, ಸಿಲ್ವರ್ ಇನ್‌ಸ್ಟಿಟ್ಯೂಟ್.ಒಆರ್‌ಜಿ, ರಾಯಿಟರ್ಸ್, ಬ್ಯಾಂಕ್ ಬಜಾರ್.ಕಾಂ, ಮಾಧ್ಯಮ ವರದಿಗಳು

80% ಅಗತ್ಯ ಪೂರೈಸಲು ಭಾರತ ಆಮದು ಮಾಡಿಕೊಳ್ಳುವ ಬೆಳ್ಳಿಯ ಪ್ರಮಾಣ	**3,302** ಟನ್ ಈ ವರ್ಷದ ಮೊದಲ ಎಂಟು ತಿಂಗಳಲ್ಲಿ ಭಾರತ ಆಮದು ಮಾಡಿಕೊಂಡ ಬೆಳ್ಳಿ	**42%** ಕಳೆದ ವರ್ಷಕ್ಕೆ ಹೋಲಿಸಿದರೆ ಆಮದು ಪ್ರಮಾಣದಲ್ಲಿನ ಇಳಿಕೆ	**70+%** ಕಳೆದ ವರ್ಷಕ್ಕೆ ಹೋಲಿಸಿದರೆ ಬೆಳ್ಳಿಯ ಧಾರಣೆಯಲ್ಲಿ ಆಗಿರುವ ಏರಿಕೆ

ಬೆಳ್ಳಿ ಧಾರಣೆಯ ಹಾದಿ

(ಪ್ರತಿ ಕೆಜಿಗೆ)

* ಅ.18ರಂದು ದೆಹಲಿ ಚಿನಿವಾರ ಪೇಟೆಯಲ್ಲಿ ಧಾರಣೆ
** 2025ರ ಅಕ್ಟೋಬರ್ 15ರಂದು ಬೆಂಗಳೂರು ರಿಟೇಲ್ ಮಾರುಕಟ್ಟೆಯಲ್ಲಿ ಕೆ.ಜಿ ಬೆಳ್ಳಿ ಧಾರಣೆ ₹2.06 ಲಕ್ಷ ತಲುಪಿತ್ತು



ಬೇಡಿಕೆ ಹೆಚ್ಚಳ, ಪೂರೈಕೆ ಕಡಿಮೆ

ಭಾರತ ಸೇರಿದಂತೆ ಜಾಗತಿಕವಾಗಿ ಬೆಳ್ಳಿಗೆ ಬೇಡಿಕೆ ಗಣನೀಯವಾಗಿ ಹೆಚ್ಚಾಗಿದೆ. ಆದರೆ, ಅದಕ್ಕೆ ತಕ್ಕಂತೆ ಪೂರೈಕೆಯಾಗುತ್ತಿಲ್ಲ. ನಾಲ್ಕು ವರ್ಷಗಳಿಂದ ಬೇಡಿಕೆ ಮತ್ತು ಪೂರೈಕೆಯಲ್ಲಿ ಗಮನಾರ್ಹ ವ್ಯತ್ಯಾಸ ಕಂಡು ಬರುತ್ತಿದೆ. ಸಿಲ್ವರ್ ಇನ್‌ಸ್ಟಿಟ್ಯೂಟ್‌ನ ವಾರ್ಷಿಕ ವರದಿಯ ಅಂಕಿ ಅಂಶಗಳು ಇದನ್ನು ಹೇಳುತ್ತಿವೆ. 2024ರಲ್ಲಿ 36,217 ಟನ್ ಬೆಳ್ಳಿಗೆ ಬೇಡಿಕೆ ಇತ್ತು. ಆದರೆ, ಪೂರೈಕೆ ಆಗಿದ್ದು 31,570 ಟನ್‌ಗಳಷ್ಟು ಮಾತ್ರ. ಈ ವರ್ಷ ಅಂದರೆ 2025ರಲ್ಲಿ 35,713 ಟನ್‌ಗಳಿಗೆ ಬೇಡಿಕೆ ಬರಬಹುದು. ಇದಕ್ಕೆ ಪ್ರತಿಯಾಗಿ 32,056 ಟನ್‌ಗಳಷ್ಟು ಪೂರೈಕೆ ಮಾತ್ರ ಸಾಧ್ಯವಾಗಲಿದೆ ಎಂದು ಸಿಲ್ವರ್ ಇನ್‌ಸ್ಟಿಟ್ಯೂಟ್ ತನ್ನ 'ವಿಶ್ವ ಬೆಳ್ಳಿ ಸಮೀಕ್ಷೆ–2025' ವರದಿಯಲ್ಲಿ ಅಂದಾಜಿಸಿದೆ.

ಬೆಳ್ಳಿಯು ತಾಮ್ರ, ಸತುವಿನಂತಹ ಮೂಲ ಲೋಹಗಳ ಉಪ ಉತ್ಪನ್ನ. ಈ ಲೋಹಗಳ ಉತ್ಪಾದನೆಯಲ್ಲಿ ವ್ಯತ್ಯಾಸವಾದರೆ ಅದು ಬೆಳ್ಳಿಯ ಉತ್ಪಾದನೆಯ ಮೇಲೂ ಪರಿಣಾಮ ಬೀರುತ್ತದೆ.



ಜಾಗತಿಕ ಪೂರೈಕೆ ಮತ್ತು ಬೇಡಿಕೆ

(ಟನ್‌ಗಳಲ್ಲಿ)

ವರ್ಷ	ಪೂರೈಕೆ	ಬೇಡಿಕೆ
2021	31,821	31,254
2022	32,186	39,957
2023	31,042	37,287
2024	31,570	36,217
2025*	32,056	35,713

*ಅಂದಾಜು

ಜಾಗತಿಕ ಆರ್ಥಿಕ, ರಾಜಕೀಯ ಅನಿಶ್ಚಿತ ಸ್ಥಿತಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯು ಜಾಗತಿಕ ರಾಜಕೀಯದಲ್ಲಿ ಅಸ್ಥಿರತೆ ಉಂಟು ಮಾಡಿದೆ. ಅಮೆರಿಕ–ಚೀನಾ, ಅಮೆರಿಕ–ಭಾರತ ಸುಂಕ ಸಮರ, ಪ್ರಾದೇಶಿಕವಾಗಿ ನಡೆಯುತ್ತಿರುವ ಸಂಘರ್ಷಗಳು ಜಾಗತಿಕ ಆರ್ಥಿಕ ಸ್ಥಿತಿಗತಿ, ಬೆಲೆಬಾಳುವ ಲೋಹಗಳ ಮಾರುಕಟ್ಟೆಯ ಮೇಲೂ ಪರಿಣಾಮ ಬೀರುತ್ತಿದೆ. ಅಲ್ಲದೇ, ಟ್ರಂಪ್ ಆಡಳಿತವು ಬೆಳ್ಳಿಯನ್ನು ಅಪರೂಪದ ಲೋಹ ಖನಿಜಗಳ (rare mineral) ಪಟ್ಟಿಗೆ ಸೇರ್ಪಡೆಗೊಳಿಸಲು ಮುಂದಾಗಿದೆ. ದೇಶದ ಭದ್ರತೆ, ಹಿತಾಸಕ್ತಿ ಕಾಪಾಡುವುದಕ್ಕಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಟ್ರಂಪ್ ಆಡಳಿತ ಹೇಳುತ್ತಿದೆ. ಹೀಗಾಗಿ, ಚೀನಾ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳು ಅಧಿಕ ಪ್ರಮಾಣದಲ್ಲಿ ಬೆಳ್ಳಿ ಖರೀದಿಸಿ ದಾಸ್ತಾನು ಮಾಡಲು ಮುಂದಾಗಿವೆ.

ಕೈಗಾರಿಕೆಗಳಲ್ಲಿ ಹೆಚ್ಚಿದ ಬೇಡಿಕೆ

ಕೃತಕ ಬುದ್ಧಿಮತ್ತೆ (ಎಐ), ಸೋಲಾರ್‌ನಂತಹ ನವೀಕರಿಸಬಹುದಾದ ಇಂಧನ, ವಿದ್ಯುತ್ ಚಾಲಿತ ವಾಹನಗಳ (ಇವಿ) ತಯಾರಿಕೆ ಸೇರಿದಂತೆ ವಿವಿಧ ಕೈಗಾರಿಕೆಗಳಲ್ಲಿ ಬೆಳ್ಳಿಯ ಬಳಕೆ ಹೆಚ್ಚಿದೆ. ಇವೆಲ್ಲ ಆಧುನಿಕ ತಂತ್ರಜ್ಞಾನ ಆಧಾರಿತ ಉದ್ಯಮಗಳಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಪ್ರವರ್ಧಮಾನಕ್ಕೆ ಬಂದವು. ಹಾಗಾಗಿ, ಬೆಳ್ಳಿ ಲೋಹಕ್ಕೆ ಬೇಡಿಕೆ ಜಾಸ್ತಿಯಾಗಿದೆ. ಸೌರ ವಿದ್ಯುತ್ ಕ್ಷೇತ್ರದಲ್ಲಿ ಚೀನಾ ದಾಪುಗಾಲು ಇಡುತ್ತಿದ್ದು, ಅಲ್ಲಿಯೇ ಬೆಳ್ಳಿಗೆ ಹೆಚ್ಚು ಬೇಡಿಕೆ ಇದೆ. ಸೌರ ವಿದ್ಯುತ್ ಉತ್ಪಾದನೆ, ಇ.ವಿ ತಯಾರಿಕೆ ಸೇರಿದಂತೆ ಆಧುನಿಕ ತಂತ್ರಜ್ಞಾನ ಆಧಾರಿತ ಉದ್ದಿಮೆಗಳಲ್ಲಿ ಭಾರತವೂ ಗಣನೀಯ ಪ್ರಮಾಣದಲ್ಲಿ ಬಂಡವಾಳ ಹೂಡುತ್ತಿದ್ದು, ಇವುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳ್ಳಿಯ ಅಗತ್ಯವಿದೆ.

ಭಾರತದ ಕೈಗಾರಿಗಳು 2021ರಲ್ಲಿ 1,064 ಟನ್ ಬೆಳ್ಳಿಗೆ ಬೇಡಿಕೆ ಇಟ್ಟಿದ್ದವು. 2022, 2023 ಮತ್ತು 2024ರಲ್ಲಿ ಕ್ರಮವಾಗಿ 1,325, 1,288 ಮತ್ತು 1,334 ಟನ್‌ಗಳಷ್ಟು ಬೆಳ್ಳಿ ಬಳಸಿದ್ದವು.

ಹೂಡಿಕೆಯತ್ತ ಒಲವು

ಚಿನ್ನ, ಬೆಳ್ಳಿಯಂತಹ ಬೆಲೆಬಾಳುವ ಲೋಹಗಳ ಮೇಲೆ ಹೂಡಿಕೆ ಮಾಡುವುದು ಸುರಕ್ಷಿತ ಎಂಬ ಭಾವನೆ ಜನರಲ್ಲಿದೆ. ಹಾಗಾಗಿ, ಭಾರತ ಸೇರಿದಂತೆ ಜಗತ್ತಿನಾದ್ಯಂತ ಚಿನ್ನದ ರೀತಿಯಲ್ಲೇ ಬೆಳ್ಳಿಯ ಮೇಲೆ ಹೂಡಿಕೆ ಮಾಡುವುದು ಹೆಚ್ಚಾಗಿದೆ. ಎಕ್ಸ್‌ಚೇಂಜ್ ಟ್ರೇಡೆಡ್ ಪ್ರಾಡಕ್ಟ್ಸ್ (ಇಟಿಪಿ) ಎಕ್ಸ್‌ಚೇಂಜ್ ಟ್ರೇಡ್ ಫಂಡ್‌ಗಳಲ್ಲಿ (ಇಟಿಎಫ್) ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಕಳೆದ ತಿಂಗಳು ಬೆಳ್ಳಿ ಇಎಫ್‌ಟಿಯ ಮೇಲೆ ದೇಶದಲ್ಲಿ ₹5,342 ಕೋಟಿಯಷ್ಟು ಹೂಡಿಕೆ ಮಾಡಲಾಗಿದೆ. ಬಂಗಾರವು ವರ್ಷದಿಂದ ವರ್ಷಕ್ಕೆ ದುಬಾರಿಯಾಗುತ್ತಿರುವುದರಿಂದ ಜನರು ಚಿನ್ನದ ಬದಲು ಬೆಳ್ಳಿಯತ್ತ ಮುಖ ಮಾಡಿದ್ದಾರೆ. ಬೆಳ್ಳಿ ಗಟ್ಟಿ, ನಾಣ್ಯಗಳನ್ನು ಹೆಚ್ಚೆಚ್ಚು ಖರೀದಿಸುತ್ತಿದ್ದಾರೆ. ಇದರ ಜೊತೆಗೆ ಬೆಳ್ಳಿ ಆಭರಣ, ವಸ್ತುಗಳ ಖರೀದಿಯನ್ನೂ ಮುಂದುವರಿಸಿದ್ದಾರೆ.

ರೂಪಾಯಿ ಮೌಲ್ಯ ಕುಸಿತ

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಾ ಬಂದಿರುವುದು ಕೂಡ ಬೆಳ್ಳಿ ಧಾರಣೆಯ ಏರಿಕೆಗೆ ಇನ್ನೊಂದು ಕಾರಣ. ಭಾರತವು ತನ್ನ ಬೇಡಿಕೆಯ ಬಹುಪಾಲು ಬೆಳ್ಳಿಯನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ದುರ್ಬಲ ರೂಪಾಯಿ ಮೌಲ್ಯ, ಆಮದು ಸುಂಕ, ಜಿಎಸ್‌ಟಿ, ಸಾಗಣೆ ವೆಚ್ಚಗಳು ಒಟ್ಟಾರೆ ಆಮದು ವೆಚ್ಚವನ್ನು ಜಾಸ್ತಿಯಾಗುವಂತೆ ಮಾಡುತ್ತಿದೆ.

ಇಳಿಯಲಿದೆಯೇ ಬೆಲೆ?

ಅ. 15ರಂದು ದಾಖಲೆ ಮಟ್ಟಕ್ಕೆ ಏರಿದ್ದ ಬೆಳ್ಳಿ ಧಾರಣೆ, ನಂತರ ಇಳಿಕೆ ಕಂಡಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಇಳಿಕೆಯಾಗಲಿದೆಯೇ ಎಂಬ ಪ್ರಶ್ನೆ ಮೂಡಿದೆ. ಈ ಹಿಂದೆ ಬೆಳ್ಳಿ ಧಾರಣೆ ದಿಢೀರ್ ಏರಿಕೆಯಾಗಿ ನಂತರ ಕುಸಿದ ಉದಾಹರಣೆಗಳಿವೆ. ಅದೀಗ ಪುನರಾವರ್ತನೆಯಾಗಲಿದೆಯೇ ಎಂಬ ಕುತೂಹಲವೂ ಉಂಟಾಗಿದೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ ದರ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗದು ಎಂದು ಹೂಡಿಕೆ ತಜ್ಞರು ಹೇಳಿದ್ದಾರೆ.

ರಾಷ್ಟ್ರೀಯ

ಅಯೋಧ್ಯೆಯಲ್ಲಿ ಭಾನುವಾರ ರಾತ್ರಿ ನಡೆದ ದೀಪೋತ್ಸವದ ವೈಮಾನಿಕ ನೋಟ ಪಿಟಿಐ ಚಿತ್ರ

ಅಯೋಧ್ಯೆ: ಆರು ತಿಂಗಳಲ್ಲಿ 23.82 ಕೋಟಿ ಭಕ್ತರ ಭೇಟಿ

ಲಖನೌ/ ಅಯೋಧ್ಯೆ (ಪಿಟಿಐ): ಈ ವರ್ಷ ಜನವರಿ ತಿಂಗಳಿನಿಂದ ಜೂನ್‌ವರೆಗೆ ಅಯೋಧ್ಯೆಗೆ 23.82 ಕೋಟಿ ಭಕ್ತರು ಭೇಟಿ ನೀಡಿದ್ದಾರೆ. ದೀಪೋತ್ಸವದ ಅಂಗವಾಗಿ ಹೆಚ್ಚಿನ ಸಂಖ್ಯೆಯ ಭಕ್ತರು ನಗರಕ್ಕೆ ಬರುತ್ತಿದ್ದಾರೆ.

ಭಾನುವಾರ ನಡೆದ ದೀಪೋತ್ಸವದಲ್ಲಿ 26 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದಾರೆ.

'ಅಯೋಧ್ಯೆಯ ದೀಪೋತ್ಸವ ಕಾರ್ಯಕ್ರಮವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆದಿದೆ. ಹೀಗಾಗಿ, ನಗರಕ್ಕೆ ಭೇಟಿ ನೀಡುತ್ತಿರುವ ಭಕ್ತರ ಸಂಖ್ಯೆಯಲ್ಲಿ ನಿಧಾನವಾಗಿ ಏರಿಕೆಯಾಗುತ್ತಿದೆ. ದೇಶದ ಭಕ್ತರ ಸಂಖ್ಯೆಯೇ ದೊಡ್ಡ ಸಂಖ್ಯೆಯಲ್ಲಿದ್ದು, ವಿದೇಶಿಗರ ಸಂಖ್ಯೆಯಲ್ಲಿಯೂ ಏರಿಕೆಯಾಗಿದೆ' ಎಂದು ಉತ್ತರಪ್ರದೇಶ ಸರ್ಕಾರವು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ದೀಪೋತ್ಸವದ ವೇಳೆ ಪ್ರವಾಸಿಗರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ ಎಂದು ಉತ್ತರ ಪ್ರದೇಶ ಪ್ರವಾಸೋದ್ಯಮ ಇಲಾಖೆಯು ಬಿಡುಗಡೆಗೊಳಿಸಿದ ಅಂಕಿಅಂಶಗಳಿಂದ ತಿಳಿದುಬಂದಿದೆ. ಜನವರಿಯಿಂದ ಜೂನ್ ಅವಧಿಯಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆಯೇ 50 ಸಾವಿರದಷ್ಟು ಏರಿಕೆಯಾಗಿದೆ.

ಹೆಚ್ಚಿನ ಮೂಲಸೌಕರ್ಯ: 'ನಗರಕ್ಕೆ ಸಂಪರ್ಕ ಕಲ್ಪಿಸಲು ನಾಲ್ಕು ಹಾಗೂ ಆರು ಪಥಗಳ ಹೆದ್ದಾರಿ, ವಿಶ್ವದರ್ಜೆಯ ವಿಮಾನ ನಿಲ್ದಾಣ, ಆಧುನಿಕ ರೈಲ್ವೆ ನಿಲ್ದಾಣದಿಂದ ಅಯೋಧ್ಯೆಯು ಆಧ್ಯಾತ್ಮಿಕ ಪುನರುಜ್ಜೀವನದ ಜೊತೆಗೆ ಆರ್ಥಿಕ ಬೆಳವಣಿಗೆಗೆ ಕಾರಣವಾಗಿದೆ' ಎಂದು ಉತ್ತರ ಪ್ರದೇಶ ಸರ್ಕಾರವು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಘಾಟ್‌ಗಳಿಗೆ ಗರಿಷ್ಠ ಭದ್ರತೆ ಕೈಗೊಳ್ಳಲಾಗಿದ್ದು, ಗುರುತಿನ ಚೀಟಿ ಇಲ್ಲದವರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಗಿನ್ನಿಸ್ ದಾಖಲೆ: ಭಾನುವಾರ ರಾತ್ರಿ 26.17 ಲಕ್ಷ ದೀಪ ಉರಿಸಿರುವುದನ್ನು ಗಿನ್ನಿಸ್ ವಿಶ್ವದಾಖಲೆಯ ತಂಡದ ಸದಸ್ಯರು ದೃಢೀಕರಿಸಿದ್ದಾರೆ ಎಂದು ಉತ್ತರಪ್ರದೇಶ ಸರ್ಕಾರ ತಿಳಿಸಿದೆ.

ದೀಪೋತ್ಸವ ವೇಳೆ ಅಯೋಧ್ಯೆಗೆ ಭೇಟಿ ನೀಡಿದ ಪ್ರವಾಸಿಗರು (ಕೋಟಿಗಳಲ್ಲಿ)

ವರ್ಷ	ಪ್ರವಾಸಿಗರು
2017	1.78
2018	1.95
2019	2.05
2020	61 ಲಕ್ಷ
2021	1.57
2022	2.39
2023	5.75
2024	16.44

ದೀಪೋತ್ಸವದಲ್ಲಿ ಯೋಗಿ ಮಾತ್ರ ಭಾಗಿ

ಅಯೋಧ್ಯೆಯಲ್ಲಿ ಭಾನುವಾರ ನಡೆದ ದೀಪೋತ್ಸವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಚಾಲನೆ ನೀಡಿದರು. ಆದರೆ, ಉಪಮುಖ್ಯಮಂತ್ರಿಗಳಾದ ಕೇಶವ ಪ್ರಸಾದ್ ಮೌರ್ಯ ಹಾಗೂ ಬ್ರಜೇಶ್ ಪಾಠಕ್ ಅವರು ಸಮಾರಂಭದಿಂದ ದೂರ ಉಳಿಯುವ ಮೂಲಕ ಸರ್ಕಾರದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದನ್ನು ಬಹಿರಂಗಪಡಿಸಿದರು.

ರಾಜ್ಯದಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಯೋಗಿ ಆದಿತ್ಯನಾಥ ಕಡೆಗಣಿಸುತ್ತಿದ್ದಾರೆ ಎಂದು ನೊಂದು ಇಬ್ಬರೂ ದೂರ ಉಳಿದರು ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಹಾರ ಮುಖ್ಯಮಂತ್ರಿ, ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್ ಅವರನ್ನು ಭೇಟಿ ಮಾಡಿ ಹೂಗುಚ್ಛ ನೀಡುತ್ತಿರುವ ಛಾಯಾಚಿತ್ರವನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಚುನಾವಣೆಗೂ ಮುನ್ನ ಈ ಭೇಟಿ ನಡೆದಿದೆ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು. ಇದು ಇತ್ತೀಚಿನ ಚಿತ್ರ ಅಲ್ಲ.

ಈ ಚಿತ್ರವನ್ನು ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ಇದೇ ಚಿತ್ರವನ್ನು ಹೊಂದಿದ್ದ ಹಲವು ಮಾಧ್ಯಮ ವರದಿಗಳು ಸಿಕ್ಕಿದವು. ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಈ ಚಿತ್ರವು 2023ರ ಏಪ್ರಿಲ್‌ನಲ್ಲಿ ನಡೆದ ಭೇಟಿಯದ್ದು ಎಂದು ತಿಳಿದು ಬಂತು. ನಿತೀಶ್ ಕುಮಾರ್ ಅವರು ಆಗಿನ ತಮ್ಮ ಮೈತ್ರಿ ಪಕ್ಷ ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿದ ಚಿತ್ರ ಅದು. ನಿತೀಶ್ ಎನ್‌ಡಿಎ ಮೈತ್ರಿ ತೊರೆದು ಮಹಾಘಟಬಂಧನ್ ಮೈತ್ರಿಕೂಟ ಸೇರಿದ ನಂತರ ಲಾಲೂ ಅವರನ್ನು ಭೇಟಿ ಮಾಡಿದ್ದಾಗ ಈ ಚಿತ್ರ ತೆಗೆಯಲಾಗಿತ್ತು. 2024ರ ಜನವರಿಯಲ್ಲಿ ಅವರ ಪಕ್ಷ ಮತ್ತೆ ಎನ್‌ಡಿಎಗೆ ಸೇರ್ಪಡೆಗೊಂಡಿತ್ತು. 2023ರಲ್ಲಿ ನಡೆದ ಈ ಭೇಟಿಯ ಚಿತ್ರ ಸಹಿತ ವರದಿಯನ್ನು ಪಿಟಿಐ ಸುದ್ದಿಸಂಸ್ಥೆ ಮಾಡಿತ್ತು. ಇದು ಇತ್ತೀಚಿನದ್ದಲ್ಲ. ಹಳೆಯ ಚಿತ್ರವನ್ನು ಹಂಚಿಕೊಂಡು ಚುನಾವಣೆಗೂ ಮುಂಚಿತವಾಗಿ ಇಬ್ಬರೂ ಭೇಟಿ ಮಾಡಿದ್ದಾರೆ ಎಂದು ತಪ್ಪಾಗಿ ಪ್ರತಿಪಾದಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಸಹಾನುಭೂತಿಯೆಂಬ ಅದ್ಭುತ ಗುಣ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಒಂದು ಕಾಡಿನಲ್ಲಿ ಒಂದು ಆನೆ ಮರಿಯಿತ್ತು. ಅದರ ಹೆಸರು ಗೋಲು. ಅದು ಬಲಶಾಲಿಯಾಗಿತ್ತು. ಆದರೆ ಖುಷಿಯಾಗಿರಲಿಲ್ಲ. ತನ್ನ ಭಾರಿ ಶರೀರವನ್ನು ಇತರ ಪ್ರಾಣಿಗಳ ಹಗುರವಾದ ದೇಹಕ್ಕೆ ಹೋಲಿಸಿಕೊಂಡು ಯಾವಾಗಲೂ ಬೇಸರದಿಂದಿರುತ್ತಿತ್ತು. ಪ್ರತಿ ದಿನ ಬೆಳಿಗ್ಗೆ ಕಾಡಿನಲ್ಲಿ ಪ್ರಾಣಿಗಳು ನಲಿದಾಡುವಾಗ, ಮಾತಾಡುವಾಗ ಗೋಲು ಹೊಳೆಯ ಹತ್ತಿರ ಹೋಗಿ ತಾನೇ ನೀರಾಟವಾಡುತ್ತ, 'ನಾನು ಇಷ್ಟು ಭಾರಿ ದೇಹ ಹೊಂದಿದ್ದೇನೆ, ನನ್ನ ದೇಹವೇ ನನಗೆ ಭಾರ, ನಾನು ಇತರ ಪ್ರಾಣಿಗಳಂತೆ ಸುಖಿಯಾಗಿರಲು ಸಾಧ್ಯವೇ ಇಲ್ಲ' ಅಂದುಕೊಳ್ಳುತ್ತಿತ್ತು.

ಗೋಲು ಬೇಸರ ಮಾಡಿಕೊಂಡಿರುವುದು ಇತರ ಪ್ರಾಣಿಗಳಿಗೆ ಸರಿಬರಲಿಲ್ಲ. ಬಲಿಷ್ಠ ಪ್ರಾಣಿಯಾದರೂ ಗೋಲು ಬೇರೆ ಪ್ರಾಣಿಗಳ ಜತೆ ಅಹಂಕಾರ ತೋರಿಸುತ್ತಿರಲಿಲ್ಲ. ಸಂದರ್ಭ ಬಂದಾಗಲೆಲ್ಲ ಇತರರಿಗೆ ಸಹಾಯ ಮಾಡುತ್ತಿತ್ತು. ವಯಸ್ಸಾದ ಒಂದು ಆಮೆ ಗೋಲುಗೆ ಅದರ ಒಳ್ಳೆಯತನದ ಪರಿಚಯ ಮಾಡಿಕೊಡಲು ನಿರ್ಧರಿಸಿತು.

'ನನ್ನ ಜತೆ ಬಾ ಗೋಲು. ಹೀಗೆಯೇ ತಿರುಗಾಡಿಕೊಂಡು ಬರೋಣ' ಎಂದಿತು ಆಮೆ.

ಆನೆ ಮತ್ತು ಆಮೆ ತಿರುಗಾಡುತ್ತ ಹೋಗುವಾಗ ಒಂದು ಅಳಿಲು ಕಾಯೊಂದನ್ನು ಎತ್ತಿಕೊಳ್ಳಲು ಕಷ್ಟಪಡುತ್ತಿರುವುದನ್ನು ನೋಡಿದ ಗೋಲು ತನ್ನ ಸೊಂಡಿಲಿನಿಂದ ಅದನ್ನು ಅಳಿಲಿನ ಕಡೆಗೆ ಹಗೂರಕ್ಕೆ ತಳ್ಳಿತು. ಅಳಿಲು ನಕ್ಕು 'ಧನ್ಯವಾದಗಳು ಗೋಲು' ಎಂದಿತು. ಸ್ವಲ್ಪ ಸಮಯದ ನಂತರ ನವಿಲೊಂದರ ರೆಕ್ಕೆಗಳು ಪೊದೆಯಲ್ಲಿ ಸಿಕ್ಕಿ ಹಾಕಿಕೊಂಡಿರುವುದನ್ನು ಬಿಡಿಸಿತು ಗೋಲು. ಹಕ್ಕಿ ಕೂಡ ಖುಷಿಯಿಂದ ಕೃತಜ್ಞತೆ ಹೇಳಿ ಹಾರಿಹೋಯಿತು. ಅದೇ ರೀತಿ ಬೇರೆ ಬೇರೆ ಪ್ರಾಣಿಗಳಿಗೆ ಸಹಾಯ ಮಾಡುತ್ತಲೇ ನಡೆದಿತ್ತು ಗೋಲು. ಅರಣ್ಯದ ಮತ್ತೊಂದು ಭಾಗಕ್ಕೆ ತಲುಪಿದಾಗ ಗೋಲುವಿನ ಮುಖದಲ್ಲಿ ಸಣ್ಣ ಮುಗುಳ್ನಗೆಯಿತ್ತು.

ಆಮೆ ಕೇಳಿತು, 'ಅರ್ಥ ಆಯ್ತಾ ನಿನಗೆ ಈಗ'. ಗೋಲು ಹೇಳಿತು, 'ಏನು ಅರ್ಥ ಆಗೋದು'

'ಸಂತೋಷದ ಗುಟ್ಟು. ಪ್ರತೀ ಸಲ ನೀನು ಬೇರೆಯವರಿಗೆ ಸಹಾಯ ಮಾಡಿದಾಗ ನಿನಗೇ ಗೊತ್ತಿಲ್ಲದೇ ನಿನ್ನ ಮುಖದ ಮೇಲೊಂದು ಕಿರುನಗು ಮೂಡುತ್ತದಲ್ಲ, ಅದೇ ನಿನ್ನ ಸಂತೋಷದ ಗುಟ್ಟು ಗೋಲು' ಅಂದಿತು ಆಮೆ.

ಗೋಲುಗೆ ತನ್ನ ಎದೆಯ ಭಾರ ಇಳಿದಂತೆ ಭಾಸವಾಯಿತು. ಮುಂದೆ ಆನೆ ಮರಿ ಖುಷಿಯಾಗಿ ಬೇರೆಯವರಿಗೆ ಸಹಾಯ ಮಾಡುವುದನ್ನು ಮುಂದುವರಿಸುತ್ತ ಆರಾಮಾಗಿತ್ತು. ತಾನು ಬಲಶಾಲಿ ಎಂಬ ಗರ್ವ, ಭಾರಿ ದೇಹ ಹೊಂದಿದ್ದೇನೆ ಎಂಬ ಕೀಳರಿಮೆ... ಯಾವುದೂ ಇಲ್ಲದೆ ಬೇರೆಯವರಿಗೆ ಸಂತೋಷ ಕೊಡುವುದರಲ್ಲೇ ಸಂತೋಷವನ್ನು ಕಂಡುಕೊಂಡು ಖುಷಿಯಾಗಿತ್ತು.

ನಿಜವಾದ ಸಂತೋಷ ಇತರರಿಗೆ ಸಹಾಯ ಮಾಡುವುದರಲ್ಲಿ, ಇತರರೆಡೆ ಸಹಾನುಭೂತಿಯನ್ನು ಹೊಂದಿರುವಲ್ಲಿ ಇದೆ ಎಂಬುದನ್ನು ಗೋಲು ಅರ್ಥ ಮಾಡಿಕೊಂಡ ಹಾಗೆ ನಾವು ಕೂಡ ಅರಿತುಕೊಳ್ಳಬೇಕಿದೆ. ನಮ್ಮ ಕೀಳರಿಮೆಗಳನ್ನು ಮೀರಲು ಇರುವ ಅಸಂಖ್ಯ ದಾರಿಗಳಲ್ಲಿ ಇದೂ ಒಂದು. ಸ್ವಲ್ಪ ಕಣ್ಣು ತೆರೆದು ನೋಡಿದರೆ ಅತ್ಯಂತ ಕನಿಷ್ಠ ಸ್ಥಿತಿಯಲ್ಲಿರುವ ಜನರು ಹೆಜ್ಜೆಹೆಜ್ಜೆಗೂ ಸಿಗುತ್ತಾರೆ. ಬೇರೆಯವರಿಗೆ ಸಹಾಯ ಮಾಡುವ ಸ್ಥಿತಿಯಲ್ಲಿ ನಾವಿದ್ದೇವೆ ಎಂಬುದೇ ನಮಗೆ ಗಟ್ಟಿತನವನ್ನು ನೀಡಿ ಆತ್ಮವಿಶ್ವಾಸವನ್ನು ನೀಡುತ್ತದೆ. ಸಹಾನುಭೂತಿ ಒಂದು ಅದ್ಭುತ ಗುಣ.

ಗುಂಡಣ್ಣ

ಪದಬಂಧ 6199

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಯಸ್ಕಾಂತವನ್ನು ಹೀಗೂ ಹೇಳುತ್ತಾರೆ (5)
3.ಮಣ್ಣಿನ ಪಾತ್ರೆಗಳನ್ನು ಮಾಡುವವನು (3)
5.ಮುದುಕರಲ್ಲಿರುವ ಆಭರಣವಿಲ್ಲಿ ತಿರುವುಮುರುವಾ ಗಿದೆ! (2)
8.ಭಾರತದ ಖ್ಯಾತ ಗಣಿತಜ್ಞ (4)
10.ಕರುವಿನ ಪಚನಾಂಗ (3)
11.ಕೊನೆಗೆ ಬೆಲೆಯಿದ್ದರೆ ಕಣಿವೆ ಕಾಣುವುದೇ? (3)
12.ಅಂತಃಪುರ ಇಲ್ಲಿದೆ (4)
15.ಈತ ನರಕಾಧಿಪತಿ (2)
17.ಬಿಡಿಸಲು ಕಷ್ಟವಾದ ಪ್ರಶ್ನೆ (3)
18.ಬೆಲೆಯುಳ್ಳ ಮಣಿಗಳನ್ನು ಕುಂದಣಿಸಿದುದು (5)

ಮೇಲಿಂದ ಕೆಳಕ್ಕೆ
1.ಅತ್ತಿಂದಿತ್ತ ತೂಗಾಡುವ ವಸ್ತು (3)
2.ಕರ್ತಾರನ ಕೈ! (2)
4.ನೆತ್ತರು ಪ್ರವಹಿಸುವಿಕೆ (5)
6.ಕಿರೀಟ ಇಲ್ಲಿದೆ (3)
7.ಕೆಚ್ಚು ಇಲ್ಲಿ ಕಾಣುತ್ತಿದೆ (2)
8.ಆಕಳು ಹಿಡಿದುಕೊಂಡಿರುವ ಸೇವಕ (2)
9.ಕರಂಡಕ ಎನ್ನುವ ಅರ್ಥವೂ ಬರುವ ನಕ್ಷತ್ರ (3)
10.ಬಾಡ ಗ್ರಾಮದಲ್ಲಿ ಜನಿಸಿದ ಭಕ್ತಿ ಪಂಥದ ಮುಖ್ಯ ಹರಿದಾಸರು (5)
11.ಶ್ರೀಕೃಷ್ಣನ ಸೋದರಮಾವ (2)
12.ಕರ್ಣನ ಇನ್ನೊಂದು ಹೆಸರು (3)
13.ಕಿಷ್ಕಿಂದೆಯ ರಾಜನಾಗಿದ್ದ ಈತ ಸುಗ್ರೀವನ ಅಣ್ಣ (2)
14.ಅಗಲವಾದ ಹರಿವಾಣ (3)
16.ಮಧುರ ಹಣ್ಣುಗಳನ್ನು ನೀಡುವ ವೃಕ್ಷ (2)



6198ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಗ್ಗಿ 3.ಜ್ಞಾನಿ
5.ಹಣಬರಹ 6.ಗಡವ
7.ಜಳಕ 8.ದಳ್ಳಾಳಿತನ
9.ವಿಧಾನ 10.ನಾಸ್ತಿಕ
13.ಪಾರಿತೋಷಕ 14.ನೆಪ
15.ಮಚ್ಚು

ಮೇಲಿಂದ ಕೆಳಕ್ಕೆ:
1.ಮಲರೋಗ 2.ಸಿಂಬಳ
4.ನಿರರ್ಥಕ 5.ಹಯವದನ
7.ಜನನಾಯಕ 9.ವಿಜ್ಞಾಪನೆ
11.ಕಲಗಚ್ಚು 12.ಸಂತೋಷ

ಸುಡೊಕು 6583

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6				5		2		8
5		4	1		8		3	
	8			7			5	4
	6			3		1		2
2		5		1	7			
	3			8		5		6
		8			6		2	
3		2	7	4			6	
	5			2		4		1

6582 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

20 ಅಕ್ಟೋಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಚತುರ್ದಶಿ ಗಂ. 15-45 ನಕ್ಷತ್ರ: ಹಸ್ತ ಗಂ. 20-17 ಯೋಗ: ವೈಧೃತಿ ಗಂ. 26-35 ಕರಣ: ಶಕುನಿ ಗಂ. 15-45 ತುಲಾ ಮಾಸದ 03 ನೇ ದಿನ. ಮಳೆ ನಕ್ಷತ್ರ : ಚಿತ್ತಾ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 09-00, **ಸೂರ್ಯೋದಯ :** 06-25 **ಸೂರ್ಯಾಸ್ತ :** 06-05, **ಮುಸ್ಲಿಂ ದಿನಾಂಕ :** 27 ರಬಿಯುಸ್ಸಾನಿ, **ದಿನ ವಿಶೇಷ :** ನರಕ ಚತುರ್ದಶಿ, ಸಾಯಂಕಾಲ ಧನಲಕ್ಷ್ಮಿ ಪೂಜೆ, **ಅದೃಷ್ಟ ಸಂಖ್ಯೆ :** 1, 4

ಮೇಷ: ಶಿಕ್ಷಕರಾಗಿದ್ದರೆ ಗಿಳಿ ಪಾಠದಿಂದ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಹಬ್ಬದ ಕೆಲಸಗಳು ಮಕ್ಕಳ ಸಹಾಯದಿಂದ ಸುಗಮವಾಗಿ ನಡೆಯಲಿವೆ.

ವೃಷಭ: ವ್ಯವಹಾರ ವಿಶ್ಲೇಷಣೆಗೂ ಹಾಗೂ ವಾಸ್ತವ ಪರಿಸ್ಥಿತಿಗೂ ಹಲವು ವ್ಯತ್ಯಾಸಗಳು ಉಂಟಾಗಬಹುದು. ಚಿನ್ನ, ಬೆಳ್ಳಿ ವ್ಯಾಪಾರಿಗಳು ಅಭಿವೃದ್ಧಿ ಹೊಂದುವರು. ಊಟ ಉಪಹಾರಗಳನ್ನು ಸ್ವಗೃಹದಲ್ಲಿ ಮಾಡಿ.

ಮಿಥುನ: ಎಂಜಿನಿಯರ್‌ಗಳಿಗೆ ಹಿರಿಯ ಅನುಭವಿ ವ್ಯಕ್ತಿಗಳಿಂದ ಮಾರ್ಗದರ್ಶನ ದೊರೆಯುತ್ತದೆ. ಬರವಣಿಗೆಯ ಹವ್ಯಾಸಗಳಿಂದ ವರಮಾನ ಹೆಚ್ಚಲಿದೆ. ಇಂದಿನ ಸಮಯವು ಅವಿಸ್ಮರಣೀಯವಾಗುವುದು.

ಕರ್ಕಾಟಕ: ಇಷ್ಟದ ವಸ್ತು ಉಡುಗೊರೆಯ ರೂಪದಲ್ಲಿ ಕೈಸೇರುತ್ತದೆ. ನಿವೇಶನ ಅಥವಾ ಜಮೀನು ಖರೀದಿಸುವ ಯೋಚನೆಗಳು ಬರಲಿವೆ. ಕೆಮ್ಮು, ಶೀತವನ್ನು ಕಡೆಗಣಿಸದಿರಿ.

ಸಿಂಹ: ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಬೇಕಾದ ಸಕಲ ಸಿದ್ಧತೆಯನ್ನು ಮಾಡಿಕೊಳ್ಳಿ. ಯಾರಾದರೂ ಜೀವನದ ಬಗ್ಗೆ ಕೆಟ್ಟದಾಗಿ ಯೋಚನೆಯನ್ನು ಮಾಡುತ್ತಿದ್ದರೆ ತಡೆಗಟ್ಟಲು ಸಾಧ್ಯ.

ಕನ್ಯಾ: ಮಸಾಲೆ ಪದಾರ್ಥ ಅಥವಾ ಖಾದ್ಯ ವಸ್ತುಗಳ ಮಾರಾಟದ ಉದ್ಯೋಗದವರು ನೆಮ್ಮದಿ ಕಾಣಬಹುದು. ಸಂಬಂಧಿಕರ ಆಗಮನದಿಂದ ಸಡಗರ ಹೆಚ್ಚಳವಾಗುವುದು. ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ.

ತುಲಾ: ನವದಂಪತಿಗೆ ಉಲ್ಲಾಸಕರ ಸಮಯವನ್ನು ಅನುಭವಿಸಲು ಕಾಲಾವಕಾಶ ಸಿಗಲಿದೆ. ಮಕ್ಕಳ ಸಣ್ಣಪುಟ್ಟ ಜಗಳಗಳನ್ನು ಬಗೆ ಹರಿಸಲು ಭಾಗಿಯಾಗದಿರಿ. ಸ್ವಯಂ ಸಾಮರ್ಥ್ಯದಿಂದ ಅವಕಾಶ ಸಿಗಲಿದೆ.

ವೃಶ್ಚಿಕ: ಮನಸ್ಸಿಗೆ ಒಪ್ಪಿಗೆ ಇಲ್ಲದಂಥ ಕೆಲಸಗಳನ್ನು ಮಾಡುವಂತಹ ಸಾಹಸಕ್ಕೆ ಕೈಹಾಕಲು ಹೋಗದಿರಿ. ವಾರ್ಷಿಕವಾಗಿ ಆಚರಿಸುವ ದೇವತಾ ಕಾರ್ಯಗಳತ್ತ ಗಮನವನ್ನು ನೀಡಿ. ಹೊಸ ವಸ್ತುಗಳ ಖರೀದಿ ಇಂದು ಬೇಡ.

ಧನು: ಮಗನ ಕೆಲಸಗಳಿಗಾಗಿ ಅಲೆದಾಟ ಹೆಚ್ಚಿ ದಣಿವಾದರೂ ಕೆಲಸ ಕೈಗೊಂಡಿದ್ದಕ್ಕೆ ಮನಸ್ಸಿಗೆ ಸಮಾಧಾನ ಸಿಗುವುದು. ವ್ಯಕ್ತಿಗಳನ್ನು ಸರಿಯಾಗಿ ಮಾತನಾಡಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಉತ್ತಮ.

ಮಕರ: ಶತ್ರುಗಳ ಪ್ರಾಬಲ್ಯವನ್ನು ನಿಮ್ಮ ಬುದ್ಧಿಮಟ್ಟದಿಂದ ಮಟ್ಟ ಹಾಕುವ ಸಮಯ ಇದಾಗಲಿದೆ. ಮನೆಯ ವ್ಯಕ್ತಿಗಳ ದೂರಪ್ರಯಾಣವು ಆತಂಕಕ್ಕೆ ಎಡೆ ಮಾಡಿಕೊಡಬಹುದು. ರಫ್ತು ವ್ಯಾಪಾರದಿಂದ ಹೇರಳ ಲಾಭ ಸಿಗುತ್ತದೆ.

ಕುಂಭ: ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂತಹ ದಿನ. ಮಗಳು ಮತ್ತು ಸೊಸೆ ಎನ್ನುವ ಭಾವನೆಯಿಲ್ಲದೆ ಸಮಾನವಾಗಿ ಕಾಣುವ ನಿಮ್ಮ ಗುಣದ ಉತ್ತಮ ಫಲಗಳು ಕಾಣಸಿಗುತ್ತವೆ.

ಮೀನ: ವಿದ್ಯಾವಂತರಾಗಿದ್ದರೂ ಪ್ರಜ್ಞಾವಂತಿಕೆ ಕಳೆದುಕೊಂಡರೆ ವಿದ್ಯೆಗೆ ಬೆಲೆ ಬರುವುದಿಲ್ಲ. ತಾಯಿ ತಂದೆ ಆರೋಗ್ಯದ ಮೇಲೆ ವಿಶೇಷ ಕಾಳಜಿ ವಹಿಸಿ. ಆಹಾರದಲ್ಲಿ ಅನಿಶ್ಚಿತ ಬದಲಾವಣೆಗಳು ಬೇಡ.

186 ಕಾರು ಖರೀದಿ, ₹21 ಕೋಟಿ ರಿಯಾಯಿತಿ

ಒಂದನೇ ಪುಟದಿಂದ...

‘ಖರೀದಿ ಶಕ್ತಿಯು ಜೈನರ ಪ್ರಮುಖ ತಾಕತ್ತುಗಳಲ್ಲಿ ಒಂದು. ಹೀಗಾಗಿ, ನಮ್ಮ ಸದಸ್ಯರು ಮಾಡುವ ಖರೀದಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಿಯಾಯಿತಿ ಪಡೆದುಕೊಳ್ಳಲು ನೇರವಾಗಿ ಕಂಪನಿಗಳನ್ನೇ ಸಂಪರ್ಕಿಸುವ ಆಲೋಚನೆ ನಮಗೆ ಬಂತು. ಕಾರು ತಯಾರಿಕಾ ಕಂಪನಿಗಳು ಕೂಡ ಈ ಬಗೆಯ ವಹಿವಾಟಿನಲ್ಲಿ ತಮಗೂ ಲಾಭವಿದೆ ಎಂಬುದನ್ನು ಕಂಡುಕೊಂಡವು. ಆ ಕಂಪನಿಗಳಿಗೆ ಮಾರಾಟ ವೆಚ್ಚದಲ್ಲಿ ಉಳಿತಾಯ ಆದ ಕಾರಣಕ್ಕೆ ಅವು ನಮಗೆ ರಿಯಾಯಿತಿ ನೀಡಿದವು’ ಎಂದು ನಿತಿನ್ ಜೈನ್ ತಿಳಿಸಿದರು.

ಭಾರಿ ಪ್ರಮಾಣದ ರಿಯಾಯಿತಿ ಬಗ್ಗೆ ಸುದ್ದಿ ಆಗುವ ಮೊದಲೇ ಸಮುದಾಯದ ಕೆಲವರು ಕಾರು ಖರೀದಿಸಿದ್ದರು. ನಂತರ ಜೆಐಟಿಒ ಸಂಘಟನೆಯ ಇತರ ಸದಸ್ಯರು ಕಾರು ಖರೀದಿ ಆರಂಭಿಸಿದರು. ಒಟ್ಟು 186 ಕಾರುಗಳನ್ನು ಖರೀದಿಸಲಾಗಿದೆ, ₹21 ಕೋಟಿ ಉಳಿತಾಯ ಆಗಿದೆ. ಸರಾಸರಿ ಲೆಕ್ಕದಲ್ಲಿ ಹೇಳುವುದಾದರೆ ಪ್ರತಿ ಸದಸ್ಯ ಕೂಡ ₹8 ಲಕ್ಷದಿಂದ ₹17 ಲಕ್ಷದವರೆಗೆ ಉಳಿತಾಯ ಮಾಡಿದ್ದಾನೆ. ಈ ಮೊತ್ತವು ಕುಟುಂಬಕ್ಕೆ ಇನ್ನೊಂದು ಕಾರು ಖರೀದಿಸಲು ಸಾಕು’ ಎಂದು ಜೈನ್ ಸಂತಸದಿಂದ ಹೇಳಿದರು.

ಚಿನ್ನ: 10 ಗ್ರಾಂಗೆ ₹3 ಲಕ್ಷ ಆಗುವುದೇ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ವರ್ಷ	ನಿರೀಕ್ಷಿತ ಬೆಲೆ ₹ಗಳಲ್ಲಿ/10 ಗ್ರಾಂ	ಬೆಲೆ ಏರಿಕೆಗೆ ಪ್ರಮುಖ ಕಾರಣಗಳು
2025	1.28 ಲಕ್ಷ (ದಾಖಲೆ ಮಟ್ಟ)	ಹಣದುಬ್ಬರ, ಫೆಡರಲ್ ಬ್ಯಾಂಕ್ ಬಡ್ಡಿ ನೀತಿ
2026	1.35 ಲಕ್ಷದಿಂದ 1.45 ಲಕ್ಷ	ಕೇಂದ್ರೀಯ ಬ್ಯಾಂಕ್‌ಗಳಿಂದ ಚಿನ್ನದ ಖರೀದಿ, ಬಡ್ಡಿ ದರ ಕಡಿತ
2030	1.8 ಲಕ್ಷದಿಂದ 2.25 ಲಕ್ಷ	ಹಣದುಬ್ಬರ, ರೂಪಾಯಿ ಮೌಲ್ಯ ಕುಸಿತ
2035	2.3 ಲಕ್ಷದಿಂದ 2.5 ಲಕ್ಷ	ಏಷ್ಯಾದಲ್ಲಿ ಚಿನ್ನಕ್ಕೆ ಸ್ಥಿರವಾದ ಬೇಡಿಕೆ

(ಐತಿಹಾಸಿಕ ದತ್ತಾಂಶ, ಗೋಲ್ಡ್‌ಮನ್ ಸ್ಯಾಕ್ಸ್ ಮತ್ತು ಬ್ಯಾಂಕ್ ಆಫ್ ಅಮೆರಿಕದ ವರದಿ ಆಧಾರದಲ್ಲಿ ಚಿನ್ನದ ಬೆಲೆ ಹೇಗೆ ಸಾಗಬಹುದು ಎಂಬ ಅಂದಾಜು)

ಮಾರುಕಟ್ಟೆಯಲ್ಲಿ 24 ಕ್ಯಾರಟ್ ಚಿನ್ನದ ಬೆಲೆ 10 ಗ್ರಾಂ ಗೆ ₹1.28 ಲಕ್ಷದ ಗಡಿ ದಾಟಿ ಸಾರ್ವಕಾಲಿಕ ದಾಖಲೆ ಬರೆದಿದೆ. ಹೀಗಾಗಿ, ಮುಂಬರುವ ವರ್ಷಗಳಲ್ಲಿ ಚಿನ್ನದ ಬೆಲೆ 10 ಗ್ರಾಂಗೆ ₹3 ಲಕ್ಷ ತಲುಪಬಹುದೇ ಎಂಬ ಪ್ರಶ್ನೆ ಅನೇಕರನ್ನು ಕಾಡುತ್ತಿದೆ. ಇದನ್ನು ಅರ್ಥಮಾಡಿಕೊಳ್ಳಲು, ನಾವು ಹಳೆಯ ದತ್ತಾಂಶ, ಗೋಲ್ಡ್‌ಮನ್ ಸ್ಯಾಕ್ಸ್ ವರದಿ ಸೇರಿದಂತೆ ಜಾಗತಿಕ ವಿಶ್ಲೇಷಣೆಗಳು ಮತ್ತು ಭಾರತದ ಆರ್ಥಿಕತೆಯ ಮನ್ನೋಟವನ್ನು ಪರಿಶೀಲಿಸಬೇಕಾಗುತ್ತದೆ.

ಬಂಗಾರದ ಓಟ: 1964ರಲ್ಲಿ 10 ಗ್ರಾಂ ಚಿನ್ನದ ಬೆಲೆ ₹63 ಇತ್ತು. 1980ರಲ್ಲಿ ₹1,800, 1990ರಲ್ಲಿ ₹3,200, 2,000ನೇ ಇಸವಿಯಲ್ಲಿ ₹4,400, 2010ರಲ್ಲಿ ₹18,500, 2020ರಲ್ಲಿ ₹48,651 ಇದ್ದ 10 ಗ್ರಾಂ ಬಂಗಾರದ ದರ 2025ರ ಅಕ್ಟೋಬರ್‌ನಲ್ಲಿ ₹1.28 ಲಕ್ಷದ ಗಡಿ ದಾಟಿ ದಾಖಲೆ ಬರೆದಿದೆ.

ಭಾರತದಲ್ಲಿ ಬಂಗಾರದ ಬೆಲೆಯನ್ನು ಗಮನಿಸಿದಾಗ ಕಳೆದ ಆರು ದಶಕಗಳಲ್ಲಿ ಅದು ವಾರ್ಷಿಕ ಸರಾಸರಿ ಶೇ 12ರಿಂದ ಶೇ 13ರ ದರದಲ್ಲಿ ಬೆಳೆದಿರುವುದು ಗೊತ್ತಾಗುತ್ತದೆ. ಹಣದುಬ್ಬರ, ರೂಪಾಯಿ ಮೌಲ್ಯ ಕುಸಿತ ಮತ್ತು ಹೂಡಿಕೆದಾರಿಂದ ಬೇಡಿಕೆ ಹೆಚ್ಚಳ ಇದಕ್ಕೆ ಮುಖ್ಯ ಕಾರಣಗಳು.

ಪ್ರಮುಖ ವರದಿಗಳು ಹೇಳುವುದೇನು?: ಗೋಲ್ಡ್‌ಮನ್ ಸ್ಯಾಕ್ಸ್ 2025ರ ವರದಿ ಮತ್ತು ಜಾಗತಿಕ ಬ್ಯಾಂಕ್‌ಗಳ ಅಂದಾಜಿನ ಪ್ರಕಾರ 2026ರ ಡಿಸೆಂಬರ್ ವೇಳೆಗೆ ಚಿನ್ನದ ಬೆಲೆ ಶೇ 23ರಷ್ಟು ಹೆಚ್ಚಾಗಿ, 10 ಗ್ರಾಂಗೆ ₹1,38,500 ತಲುಪಲಿದೆ. ಕೇಂದ್ರೀಯ ಬ್ಯಾಂಕ್‌ಗಳು ಚಿನ್ನ ಖರೀದಿಸುತ್ತಿರುವುದು, ಹಣದುಬ್ಬರದ ಆತಂಕ ಮತ್ತು ಅಮೆರಿಕದ ಡಾಲರ್ ಮೇಲಿನ ಅವಲಂಬನೆಯನ್ನು ಕೆಲವು ದೇಶಗಳು ಕಡಿಮೆ ಮಾಡುತ್ತಿರುವುದು ಈ ಏರಿಕೆಗೆ ಮುಖ್ಯ ಕಾರಣಗಳಾಗಿವೆ. ಅಂದರೆ ಚಿನ್ನದ ಬೆಲೆ ದಿಢೀರನೆ ಏರಿಕೆ ಆಗುವುದಿಲ್ಲ, ಬದಲಾಗಿ ಮಧ್ಯಮ ಗತಿಯಲ್ಲಿ ಸ್ಥಿರವಾಗಿ ಏರಿಕೆಯಾಗಲಿದೆ ಎಂಬುದನ್ನು ಈ ವರದಿ ಹೇಳುತ್ತದೆ. 2026ರ ವೇಳೆಗೆ 10 ಗ್ರಾಂಗೆ ಬೆಲೆ ₹1.42 ಲಕ್ಷ ಆಗಬಹುದು ಎಂದು ಬ್ಯಾಂಕ್ ಆಫ್ ಅಮೆರಿಕ ಊಹಿಸಿದೆ. ಬಜಾಜ್ ಫಿನ್‌ಸರ್ವ್, ರುಪೀಝಿ ಸಂಸ್ಥೆಗಳು ಹಣದುಬ್ಬರ ಇದೇ ರೀತಿ ಹೆಚ್ಚಾಗಿಯೇ ಉಳಿದರೆ 10 ಗ್ರಾಂ ಚಿನ್ನದ ಬೆಲೆ ₹1.55 ಲಕ್ಷದವರೆಗೆ ಹೋಗಬಹುದು ಎಂದು ಹೇಳಿವೆ.

2035ರ ವೇಳೆಗೆ ಏನಾಗಬಹುದು?: ಮಾರುಕಟ್ಟೆ ವಿಶ್ಲೇಷಕರ ಪ್ರಕಾರ, ಭಾರತದಲ್ಲಿ ಚಿನ್ನದ ಬೆಲೆ 2030ರ ವೇಳೆಗೆ 10 ಗ್ರಾಂಗೆ ₹1.8 ಲಕ್ಷದಿಂದ ₹2.25 ಲಕ್ಷದವರೆಗೆ ಮತ್ತು 2035ರ ವೇಳೆಗೆ ₹2.5 ಲಕ್ಷದವರೆಗೆ ಏರಿಕೆ ಕಾಣುವ ಸಾಧ್ಯತೆಯಿದೆ. ಆದರೆ ಬೆಲೆ ಏರಿಕೆಯು, ಹಣದುಬ್ಬರ ಪ್ರಮಾಣ, ವಾರ್ಷಿಕ ರೂಪಾಯಿ ಮೌಲ್ಯ ಕುಸಿತ, ಕೇಂದ್ರೀಯ ಬ್ಯಾಂಕ್‌ಗಳಿಂದ ಚಿನ್ನದ ಖರೀದಿ ಭರಾಟೆ ಮುಂತಾದ ಅಂಶಗಳನ್ನು ಅವಲಂಬಿಸಿದೆ.

₹3 ಲಕ್ಷಕ್ಕೆ ಚಿನ್ನದ ಬೆಲೆ?: ಭಾರತದಲ್ಲಿ 10 ಗ್ರಾಂ ಚಿನ್ನ ₹3 ಲಕ್ಷ ಆಗಬೇಕಾದರೆ, ಪ್ರಮುಖ ದೇಶಗಳಲ್ಲಿ ಅತಿ ಹೆಚ್ಚಿನ ಹಣದುಬ್ಬರ, ಜಾಗತಿಕ ಆರ್ಥಿಕ ವ್ಯವಸ್ಥೆಯ ಪತನ, ಅಂತರರಾಷ್ಟ್ರೀಯ ಸಂಘರ್ಷಗಳು ಸೇರಿದಂತೆ ತೀವ್ರ ತರಹದ ಘಟನೆಗಳು ನಡೆಯಬೇಕು. ಆದರೆ ಸದ್ಯಕ್ಕೆ ಯಾವುದೇ ಪ್ರಮುಖ ಹಣಕಾಸು ಸಂಸ್ಥೆಗಳು ಇಂತಹ ಸಂದರ್ಭವನ್ನು ಊಹಿಸಿಲ್ಲ. ಭಾರತದಲ್ಲಿ ಚಿನ್ನದ ಬೇಡಿಕೆಯು ಯಾವಾಗಲೂ ಸಂಸ್ಕೃತಿ ಮತ್ತು ಆರ್ಥಿಕತೆಯೊಂದಿಗೆ ಬೆರೆತುಹೋಗಿದೆ. ದೇಶೀಯವಾಗಿ ಹಲವು ಅಂಶಗಳು ಬಂಗಾರದ ಬೆಲೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ರೂಪಾಯಿ ಮೌಲ್ಯ ಕುಸಿತ, ಹಬ್ಬಗಳು ಮತ್ತು ಮದುವೆಗಳ ಸಮಯದಲ್ಲಿ ಚಿನ್ನಕ್ಕೆ ಸತತ ಬೇಡಿಕೆ, ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಬಂಗಾರದ ಮೀಸಲು ಸಂಗ್ರಹ ಹೆಚ್ಚಳ ಸೇರಿದಂತೆ ಕೆಲವು ಅಂಶಗಳು ಚಿನ್ನದ ಬೆಲೆಯನ್ನು ನಿರ್ಧರಿಸುತ್ತವೆ.

ಕಿವಿಮಾತು: ಹಣದುಬ್ಬರ (ಬೆಲೆ ಏರಿಕೆ) ಮತ್ತು ರೂಪಾಯಿ ಮೌಲ್ಯ ಕುಸಿತದಂತಹ ಸಮಸ್ಯೆಗಳಿಂದ ನಮ್ಮನ್ನು ಕಾಪಾಡಿಕೊಳ್ಳಲು, ಚಿನ್ನವು ದೀರ್ಘಾವಧಿಯಲ್ಲಿ ಒಂದು ಉತ್ತಮ ಹೂಡಿಕೆ. ಆದರೆ ಯಾವುದೇ ಒಂದು ಹೂಡಿಕೆಯನ್ನು ನೆಚ್ಚಿಕೊಂಡು ಅತಿಯಾಗಿ ಅದರಲ್ಲಿ ಹಣ ತೊಡಗಿಸುವುದು ಸರಿಯಲ್ಲ. ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳುವುದು ಬಹಳ ಮುಖ್ಯ. ಒಂದು ವೇಳೆ ರೂಪಾಯಿ ಮೌಲ್ಯದಲ್ಲಿ ಭಾರಿ ಕುಸಿತವಾದರೆ ಅಥವಾ ಹಣದುಬ್ಬರ ನಿರಂತರವಾಗಿ ತೀವ್ರವಾಗಿಯೇ ಉಳಿದರೆ ಮಾತ್ರ ಚಿನ್ನದ ಬೆಲೆ ಪ್ರತಿ 10 ಗ್ರಾಂಗೆ ₹3 ಲಕ್ಷದ ಮಟ್ಟಕ್ಕೆ ಏರಬಹುದು. ಇಲ್ಲದಿದ್ದರೆ, 2038–2040ಕ್ಕಿಂತ ಮೊದಲು 10 ಗ್ರಾಂ ಚಿನ್ನದ ಬೆಲೆ ₹3 ಲಕ್ಷ ತಲುಪುವ ಸಾಧ್ಯತೆ ಕಡಿಮೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಸ್. ಕೆ. ಕರಿಯಪ್ಪಗೌಡ ರವರು
ಅಧ್ಯಕ್ಷರು,
ಶ್ರೀರಾಮ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಲ್ಲೇಶ್ವರಂ, ಬೆಂಗಳೂರು. ಇವರು ದಿನಾಂಕ: 19–10–2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಇವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು:
ಶ್ರೀರಾಮ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಮಂಡಳಿ, ಸಿಬ್ಬಂದಿ ವರ್ಗದವರು ಹಾಗೂ ಬ್ಯಾಂಕಿನ ಸದಸ್ಯರುಗಳು.

ಅಕ್ಟೋಬರ್‌ನಲ್ಲಿ ಎಫ್‌ಪಿಐ ಹೂಡಿಕೆ ₹6 ಸಾವಿರ ಕೋಟಿ

ನವದೆಹಲಿ (ಪಿಟಿಐ): ಸತತ ಮೂರು ತಿಂಗಳುಗಳಿಂದ ಹಣವನ್ನು ಹಿಂಪಡೆಯುತ್ತಿದ್ದ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಅಕ್ಟೋಬರ್‌ನಲ್ಲಿ ಇದುವರೆಗೆ ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಒಟ್ಟು ₹6,480 ಕೋಟಿ ನಿವ್ವಳ ಹೂಡಿಕೆ ಮಾಡಿದ್ದಾರೆ.

ದೇಶದ ಅರ್ಥ ವ್ಯವಸ್ಥೆಯ ಹಲವು ಅಂಶಗಳು ಬಲಿಷ್ಠವಾಗಿರುವುದು ಈ ಹೂಡಿಕೆಗೆ ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಎಫ್‌ಪಿಐಗಳು ಸೆಪ್ಟೆಂಬರ್‌ನಲ್ಲಿ ನಿವ್ವಳ ₹23,885 ಕೋಟಿ, ಆಗಸ್ಟ್‌ನಲ್ಲಿ ₹34,990 ಕೋಟಿ ಹಾಗೂ ಜುಲೈನಲ್ಲಿ ₹17,700 ಕೋಟಿ ಹೂಡಿಕೆ ಹಿಂಪಡೆದಿದ್ದರು. ಆದರೆ ಅಕ್ಟೋಬರ್ ನಲ್ಲಿ ನಿವ್ವಳ ಹೂಡಿಕೆ ಹೆಚ್ಚಾಗಿರುವುದು ವಿದೇಶಿ ಹೂಡಿಕೆದಾರರ ಆಲೋಚನೆಗಳು ಬದಲಾಗಿರುವುದನ್ನು, ಭಾರತದ ಮಾರುಕಟ್ಟೆಗಳ ಬಗ್ಗೆ ಜಾಗತಿಕ ಹೂಡಿಕೆದಾರರಲ್ಲಿ ವಿಶ್ವಾಸ ಮತ್ತೆ ಮೂಡಿರುವುದನ್ನು ಹೇಳುತ್ತಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಇತರ ಹಲವು ದೇಶಗಳಿಗೆ ಹೋಲಿಸಿದರೆ ಭಾರತದ ಅರ್ಥ ವ್ಯವಸ್ಥೆಯು ಬಲಿಷ್ಠವಾಗಿದೆ. ಭಾರತದಲ್ಲಿ ಬೆಳವಣಿಗೆ ದರ ಸ್ಥಿರವಾಗಿದೆ, ಹಣದುಬ್ಬರ ಪ್ರಮಾಣವು ನಿಯಂತ್ರಣದಲ್ಲಿದೆ, ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆಯು ಕುಸಿದಿಲ್ಲ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾ ಸಂಸ್ಥೆಯ ಹಿಮಾಂಶು ಶ್ರೀವಾಸ್ತವ ಹೇಳಿದರು.

ಭಾರತದ ಮಾರುಕಟ್ಟೆಗಳು ಈಗ ಇತರ ಮಾರುಕಟ್ಟೆಗಳಿಗೆ ಹೋಲಿಸಿದರೆ ದುಬಾರಿ ಆಗಿ ಉಳಿದಿಲ್ಲ. ಇದು ಕೂಡ ವಿದೇಶಿ ಹೂಡಿಕೆದಾರರು ಮತ್ತೆ ಭಾರತದ ಕಡೆ ಮುಖ ಮಾಡಿರುವುದಕ್ಕೆ ಒಂದು ಕಾರಣ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಸಂಸ್ಥೆಯ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು ಹೇಳಿದರು.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹580	100 ಕ್ಕೆ	₹583
12 ಕ್ಕೆ	₹80		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-642
ದ್ವಿತಳಿ (ಬಿ.ವಿ)	₹544-793

24 ದೇಶಗಳಿಗೆ ಭಾರತದ ರಫ್ತು ಹೆಚ್ಚಳ

ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ₹11.37 ಲಕ್ಷ ಕೋಟಿ ಮೌಲ್ಯದ ವಹಿವಾಟು

ನವದೆಹಲಿ / ಕೋಲ್ಕತ್ತ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್‌ನಿಂದ ಸೆಪ್ಟೆಂಬರ್ ಅಂತ್ಯದವರೆಗೆ) 24 ದೇಶಗಳಿಗೆ ದೇಶದ ರಫ್ತು ಏರಿಕೆ ಕಂಡಿದೆ ಎಂದು ಸರ್ಕಾರದ ಅಂಕಿ ಅಂಶಗಳು ತಿಳಿಸಿವೆ.

ಇದೇ ಅವಧಿಯಲ್ಲಿ ಹೆಚ್ಚಿನ ಸುಂಕದಿಂದಾಗಿ ಅಮೆರಿಕಕ್ಕೆ ರಫ್ತು ಪ್ರಮಾಣ ಇಳಿಕೆಯಾಗಿದೆ. ಕೊರಿಯಾ, ಯುಎಇ, ಜರ್ಮನಿ, ಈಜಿಪ್ಟ್, ವಿಯೆಟ್ನಾಂ, ಇರಾಕ್, ಮೆಕ್ಸಿಕೊ, ರಷ್ಯಾ, ಕೆನ್ಯಾ, ನೈಜೀರಿಯಾ, ಕೆನಡಾ ಸೇರಿದಂತೆ 24 ರಾಷ್ಟ್ರಗಳಿಗೆ ದೇಶದಿಂದ ಆಗುವ ರಫ್ತು ಹೆಚ್ಚಾಗಿದೆ.

ಭಾರತವು ತನ್ನ ಸರಕುಗಳನ್ನು ಬೇರೆ ಬೇರೆ ಮಾರುಕಟ್ಟೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲು ಆದ್ಯತೆ ನೀಡುತ್ತಿರುವುದನ್ನು ಇದು ತೋರಿಸುತ್ತಿದೆ.

ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ದೇಶದ ಒಟ್ಟು ರಫ್ತಿನಲ್ಲಿ ಶೇ 3.02ರಷ್ಟು ಹೆಚ್ಚಳವಾಗಿದ್ದು, ₹19.35 ಲಕ್ಷ ಕೋಟಿಯಷ್ಟಾಗಿದೆ. ದೇಶದ ಆಮದು ಶೇ 4.53ರಷ್ಟು ಏರಿಕೆಯಾಗಿದ್ದು, ₹33 ಲಕ್ಷ ಕೋಟಿಯಷ್ಟಾಗಿದೆ. ವ್ಯಾಪಾರ ಕೊರತೆ ₹13.63 ಲಕ್ಷ ಕೋಟಿಯಾಗಿದೆ.

ಇದೇ ಅವಧಿಯಲ್ಲಿ ಈ 24 ದೇಶಗಳಿಗೆ ₹11.37 ಲಕ್ಷ ಕೋಟಿ ಮೌಲ್ಯದಷ್ಟು ರಫ್ತು ವಹಿವಾಟು ದೇಶದಿಂದ ನಡೆದಿದೆ. ಇದು ದೇಶದ ಒಟ್ಟು ರಫ್ತಿನಲ್ಲಿ ಶೇ 59ರಷ್ಟಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆದರೆ, ಕೇಂದ್ರ ವಾಣಿಜ್ಯ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, ಈ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ 16 ದೇಶಗಳಿಗೆ ದೇಶದ ರಫ್ತು ಪ್ರಮಾಣ ಇಳಿಕೆಯಾಗಿದೆ. ಈ ದೇಶಗಳು ದೇಶದ ಒಟ್ಟು ರಫ್ತಿನಲ್ಲಿ ಶೇ 27ರಷ್ಟು ಪಾಲು ಹೊಂದಿವೆ.

ಅಮೆರಿಕಕ್ಕೆ ರಫ್ತು ಇಳಿಕೆ

ಸೆಪ್ಟೆಂಬರ್ ತಿಂಗಳಿನಲ್ಲಿ ಅಮೆರಿಕಕ್ಕೆ ದೇಶದ ಸರಕುಗಳ ರಫ್ತು ಇಳಿಕೆ ಆಗಿದೆ. ಇದೇ ಅವಧಿಯಲ್ಲಿ ಅಮೆರಿಕ ಹೊರತುಪಡಿಸಿ ಬೇರೆ ದೇಶಗಳಿಗೆ ರಫ್ತು ಹೆಚ್ಚಳವಾಗಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ವರದಿ ಹೇಳಿದೆ.

ಆಗಸ್ಟ್ ತಿಂಗಳಿನಲ್ಲಿ ಅಮೆರಿಕಕ್ಕೆ ದೇಶದಿಂದ ರಫ್ತಾದ ಸರಕುಗಳಲ್ಲಿ ಶೇ 7ರಷ್ಟು ಬೆಳವಣಿಗೆ ಆಗಿತ್ತು. ಆದರೆ, ಸೆಪ್ಟೆಂಬರ್‌ನಲ್ಲಿ ರಫ್ತು ಪ್ರಮಾಣ ಶೇ 11.9ರಷ್ಟು ಇಳಿಕೆಯಾಗಿದೆ. ಇದು ಹಣಕಾಸಿನ ಮೌಲ್ಯದಲ್ಲಿ ₹48,372 ಕೋಟಿಯಷ್ಟಾಗಿದೆ.

ಇದೇ ಅವಧಿಯಲ್ಲಿ ಅಮೆರಿಕ ಹೊರತುಪಡಿಸಿ ಬೇರೆ ದೇಶಗಳಿಗೆ, ಭಾರತದಿಂದಾದ ಸರಕುಗಳ ರಫ್ತು ಶೇ 10.9ರಷ್ಟು ಹೆಚ್ಚಳವಾಗಿದೆ. ಆಗಸ್ಟ್‌ನಲ್ಲಿ ರಫ್ತು ಶೇ 6.6ರಷ್ಟು ಮಾತ್ರ ಇತ್ತು.

ಅಮೆರಿಕದ ಹೆಚ್ಚುವರಿ ಸುಂಕವು ದೇಶದ ಸರಕುಗಳ ರಫ್ತಿನ ಮೇಲೆ ಪರಿಣಾಮ ಬೀರಲಿದೆ ಎಂದು ಕ್ರಿಸಿಲ್ ಎಚ್ಚರಿಸಿದೆ.

ಅಮೆರಿಕವು ಭಾರತದಿಂದ ಆಮದಾಗುವ ಸರಕುಗಳ ಮೇಲೆ ವಿಧಿಸಿರುವ ಶೇ 50ರಷ್ಟು ಸುಂಕವು, ಅಮೆರಿಕಕ್ಕೆ ರಫ್ತು ಮಾಡಲು ತೊಂದರೆ ಉಂಟು ಮಾಡಿದೆ. ಆದರೆ, ರಫ್ತುದಾರರು ಆಫ್ರಿಕಾ, ಲ್ಯಾಟಿನ್ ಅಮೆರಿಕ, ಪಶ್ಚಿಮ ಏಷ್ಯಾ ಸೇರಿದಂತೆ ವಿವಿಧ ದೇಶಗಳಿಗೆ ರಫ್ತು ಮಾಡಲು ಮುಂದಾಗಿದ್ದಾರೆ. ಮುಂದಿನ ದಿನಗಳಲ್ಲೂ ಈ ರಫ್ತು ಹೆಚ್ಚಳವಾಗಲಿದೆ ಎಂದು ರಫ್ತುದಾರರೊಬ್ಬರು ಹೇಳಿದ್ದಾರೆ.

ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಅಮೆರಿಕಕ್ಕೆ ದೇಶದ ರಫ್ತು ಶೇ 13.37ರಷ್ಟು ಹೆಚ್ಚಳವಾಗಿದೆ. ಇದು ರೂಪಾಯಿ ಮೌಲ್ಯದಲ್ಲಿ ₹4 ಲಕ್ಷ ಕೋಟಿಯಷ್ಟಾಗಿದೆ. ಆಮದು ಶೇ 9ರಷ್ಟು ಏರಿಕೆಯಾಗಿದ್ದು, ₹2.25 ಲಕ್ಷ ಕೋಟಿ ಆಗಿದೆ.

2024–25ರ ಆರ್ಥಿಕ ವರ್ಷದಲ್ಲಿ ಅಮೆರಿಕವು ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಪ್ರವಾಸ

Travel Agencies

6 ದಿನಗಳು ದುಬೈ, 6 ದಿನಗಳು ಬಾಲಿ, ನಾಲ್ಕು ದಿನಗಳು ಲಂಕಾವಿ, 7 ದಿನಗಳು ಜಪಾನ್ ಭಟ್ ಟ್ರಾವೆಲ್ಸ್:9844037295/ 9844166555

Travel

ತಾ 25.10.2025 ರಿಂದ 6 ದಿನಗಳ ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂಡ್ರಂ, ಅಲಪಿಬೋಟಿಂಗ್, ಗುರುವಾಯೂರು, ಶ್ರೀರಂಗ. ತಾ 31.10.2025 ರಿಂದ 5 ದಿನಗಳ ಕಾಶಿ, ಅಯೋಧ್ಯೆ, ಗಯಾ, ಪ್ರಯಾಗರಾಜ್, ಬುದ್ಧಗಯಾ.ತಾ 01.11.2025 ರಿಂದ 4 ದಿನಗಳ ಧರ್ಮಸ್ಥಳ, ಮುರಡೇಶ್ವರ, ಸಿಗಂದೂರು, ಕೊಲ್ಲೂರು, ಹೊರನಾಡು, ಶೃಂಗೇರಿ.ತಾ 16.11.2025 ರಿಂದ 8 ದಿನಗಳ ಓಂಕಾರೇಶ್ವರ, ಶಿರಡಿ, ಉಜ್ಜಯಿನಿ, ಭೀಮಾಶಂಕರ, ತುಳಜಾಪುರ, ಎಲ್ಲೋರ,ಶ್ರೀ ಗುರುರಾಜ ಟ್ರಾವೆಲ್ಸ್. ಕೋಲಾರ- 9611082432, 9449652555, 8123099913

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಫಾಸ್ಟ್ಯಾಗ್ ಉಡುಗೊರೆಗೆ ಅವಕಾಶ

ನವದೆಹಲಿ (ಪಿಟಿಐ): ‘ರಾಜ್‌ಮಾರ್ಗ್‌ಯಾತ್ರಾ’ ಆ್ಯಪ್ ಮೂಲಕ ತಮ್ಮ ಪ್ರೀತಿಪಾತ್ರರಿಗೆ ವಾರ್ಷಿಕ ಫಾಸ್ಟ್ಯಾಗ್ ಉಡುಗೊರೆಯಾಗಿ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ತಿಳಿಸಿದೆ.

ದೀಪಾವಳಿ ಅಂಗವಾಗಿ ತಮ್ಮ ಪ್ರೀತಿಪಾತ್ರರಿಗೆ ಉಡುಗೊರೆಯಾಗಿ ಫಾಸ್ಟ್ಯಾಗ್ ನೀಡಲು ಈ ಅವಕಾಶ ಜಾರಿಗೆ ತಂದಿದೆ.

ರಾಜ್‌ಮಾರ್ಗ್‌ಯಾತ್ರಾ ಆ್ಯಪ್‌ನಲ್ಲಿರುವ ಪಾಸ್ ಸೇರ್ಪಡೆ (ಆ್ಯಡ್ ಪಾಸ್) ಆಯ್ಕೆ ಕ್ಲಿಕ್ ಮಾಡಬೇಕು. ಯಾವ ವ್ಯಕ್ತಿಗೆ ವಾರ್ಷಿಕ ಫಾಸ್ಟ್‌ಟ್ಯಾಗ್ ಅನ್ನು ಉಡುಗೊರೆಯಾಗಿ ನೀಡಬೇಕಿದೆಯೋ ಆ ವ್ಯಕ್ತಿ ಬಳಸುವ ವಾಹನದ ಸಂಖ್ಯೆ, ಸಂಪರ್ಕ ವಿವರವನ್ನು ನಮೂದಿಸಬೇಕು. ಒಟಿಪಿ ಪರಿಶೀಲನೆ ಬಳಿಕ ಈ ಫಾಸ್ಟ್‌ಟ್ಯಾಗ್ ಸಕ್ರಿಯ ಆಗಲಿದೆ ಎಂದು ತಿಳಿಸಿದೆ.

ಈ ವಾರ್ಷಿಕ ಪಾಸ್‌ನ ಮೌಲ್ಯ ₹3 ಸಾವಿರ. ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇಗಳನ್ನು ಬಳಸುವ ವಾಣಿಜ್ಯೇತರ ವಾಹನಗಳು (ಖಾಸಗಿ ಕಾರು, ಜೀಪ್, ವ್ಯಾನ್‌ಗಳು) 200 ಟ್ರಿಪ್‌ಗಳವರೆಗೆ ಈ ಪಾಸ್ ಬಳಸಬಹುದು.

ಜಿಎಸ್‌ಟಿಆರ್–3ಬಿ ವಿವರ ಸಲ್ಲಿಕೆಗೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಮಾಸಿಕ ಜಿಎಸ್‌ಟಿ-ಆರ್–3ಬಿ ವಿವರ ಸಲ್ಲಿಸಲು ಇದ್ದ ಗಡುವನ್ನು ಅಕ್ಟೋಬರ್ 25ರವರೆಗೆ ವಿಸ್ತರಿಸಲಾಗಿದೆ. ತೆರಿಗೆ ವಿವರ ಸಲ್ಲಿಸಲು ಅಕ್ಟೋಬರ್ 20 ಕೊನೆಯ ದಿನವಾಗಿತ್ತು.

ಜಿಎಸ್‌ಟಿಆರ್–3ಬಿ ಎನ್ನುವುದು ಮಾಸಿಕ ಮತ್ತು ತ್ರೈಮಾಸಿಕ ವಿವರ ಸಲ್ಲಿಸುವುದಾಗಿದೆ. ವಿವಿಧ ವರ್ಗಗಳ ತೆರಿಗೆ ಪಾವತಿದಾರರು ಪ್ರತಿ ತಿಂಗಳ 20,22 ಮತ್ತು 24ರ ನಡುವೆ ತೆರಿಗೆ ವಿವರ ಸಲ್ಲಿಸುತ್ತಾರೆ.

ಸೆಪ್ಟೆಂಬರ್ ತಿಂಗಳು ಮತ್ತು ಸೆಪ್ಟೆಂಬರ್ ತ್ರೈಮಾಸಿಕಕ್ಕೆ ತೆರಿಗೆ ವಿವರ ಸಲ್ಲಿಸಲು ಇದ್ದ ಗಡುವನ್ನು ಅಕ್ಟೋಬರ್ 25ರವರೆಗೆ ವಿಸ್ತರಿಸಲಾಗಿದೆ ಎಂದು ಸಿಬಿಐಸಿ ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಭಾನುವಾರ ತಿಳಿಸಿದೆ.

ವಿಮಾನದಲ್ಲಿ ಅನುಚಿತ ವರ್ತನೆ: ಬಂಧನ

ಹೈದರಾಬಾದ್ (ಪಿಟಿಐ): ಚೆನ್ನೈನಿಂದ ಹೈದರಾಬಾದ್‌ಗೆ ಹೊರಟಿದ್ದ ವಿಮಾನದಲ್ಲಿ ವ್ಯಕ್ತಿಯೊಬ್ಬ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದಡಿ ಆತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆ ಶುಕ್ರವಾರ ನಡೆದಿದ್ದು, ಉತ್ತರ ಪ್ರದೇಶದಿಂದ ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬ ಕುಡಿತದ ಅಮಲಿನಲ್ಲಿ, ಪಕ್ಕದಲ್ಲೇ ಕುಳಿತಿದ್ದ 38 ವರ್ಷದ ಐಟಿ ಉದ್ಯೋಗಿಯನ್ನು ಅನುಚಿತವಾಗಿ ಸ್ಪರ್ಶಿಸಿದ. ಬಳಿಕ ಮಹಿಳೆ ಪೊಲೀಸರಿಗೆ ತಿಳಿಸಿ, ಆರೋಪಿ ವಿರುದ್ಧ ದೂರು ದಾಖಲಿಸಿದರು.

ಆರೋಪಿಯನ್ನು ಬಂಧಿಸಲಾಗಿದ್ದು, ಉದ್ದೇಶಪೂರ್ವಕವಾಗಿ ಮಹಿಳೆಯನ್ನು ಸ್ಪರ್ಶಿಸಿಲ್ಲ ಎಂದು ಆರೋಪಿ ತಿಳಿಸಿದ್ದಾನೆ.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
ಒಳ್ಳೆಯ ಜನ, ಒಳ್ಳೆಯ ಬ್ಯಾಂಕ್

ಟೆಂಡರ್ ಪ್ರಕಟಣೆ

ಸಾರ್ವಜನಿಕ ವಲಯದ ಅಗ್ರಗಣ್ಯ ಬ್ಯಾಂಕುಗಳಲ್ಲಿ ಒಂದಾದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, **ಬೆಂಗಳೂರಿನ ಜ್ಞಾನ ಕೇಂದ್ರದ ಮೂಲಕ ULA ಗಳು ಮತ್ತು ZLC ಗಳಿಗೆ ISO 9001:2015 ಮತ್ತು ISO 21001:2018 ಪ್ರಮಾಣೀಕರಣಗಳನ್ನು** ಪಡೆಯಲು ಸಂಪೂರ್ಣ (End-to-End) ಸಮಾಲೋಚನಾ ಸೇವೆಗಳಿಗಾಗಿ ಬಾಹ್ಯ ಸಲಹೆಗಾರರ ತೊಡಗಿಸಿಕೊಳ್ಳುವಿಕೆಯ RFP ಅನ್ನು ಅದರ GEM ಪೋರ್ಟಲ್ ಬಿಡ್ ಉಲ್ಲೇಖ ಸಂಖ್ಯೆ: GEM/2025/B/6804209 ದಿನಾಂಕ 20.10.2025 ರ ಮೂಲಕ ಆಹ್ವಾನಿಸುತ್ತದೆ. ಅರ್ಹತಾ ಮಾನದಂಡಗಳು, RFP ದಾಖಲೆ ಡೌನ್‌ಲೋಡ್ ಮತ್ತು ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಬ್ಯಾಂಕಿನ ವೆಬ್‌ಸೈಟ್ **www.unionbankofindia.co.in** ಅಥವಾ ಸರ್ಕಾರಿ ಜಾಲತಾಣ **www.eprocure.gov.in** ಅಥವಾ ಸರ್ಕಾರಿ ಇ-ಮಾರ್ಕೆಟ್‌ಪ್ಲೇಸ್ (GeM) **https://www.gem.gov.in** ಗೆ ಸಂದರ್ಶಿಸುವುದು. ಬಿಡ್ ಸಲ್ಲಿಸಲು ಕೊನೆಯ ದಿನಾಂಕ **10.11.2025** ಸಂಜೆ 3.00 ಗಂಟೆ ವರೆಗೆ.

ಕದನ ವಿರಾಮಕ್ಕೆ ಒಪ್ಪಿದ ಪಾಕ್–ಅಫ್ಗಾನಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಗಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಕದನ ವಿರಾಮ ಘೋಷಿಸಿ, ಶಾಂತಿ ಮರುಸ್ಥಾಪನೆಗೆ ಮುಂದಾಗಲು ಪಾಕಿಸ್ತಾನ–ಅಫ್ಗಾನಿಸ್ತಾನ ಭಾನುವಾರ ಒಪ್ಪಿಗೆ ಸೂಚಿಸಿವೆ.

ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಮತ್ತು ಅಫ್ಗಾನಿಸ್ತಾನದ ಹಂಗಾಮಿ ರಕ್ಷಣಾ ಸಚಿವ ಮುಲ್ಲಾ ಯಾಕೂಬ್ ದೋಹಾದಲ್ಲಿ ಮಾತುಕತೆ ನಡೆಸಿದ ಬೆನ್ನಲ್ಲೇ ಉಭಯ ದೇಶಗಳು ಕದನ ವಿರಾಮಕ್ಕೆ ಒಪ್ಪಿವೆ ಎಂದು ಕತಾರ್‌ನ ವಿದೇಶಾಂಗ ಸಚಿವಾಲಯ ಹೇಳಿದೆ. ಈ ಸಂಧಾನಕ್ಕೆ ಕತಾರ್ ಮತ್ತು ಟರ್ಕಿ ಮಧ್ಯಸ್ಥಿಕೆ ವಹಿಸಿದ್ದವು.

ಶಾಂತಿ ಮರುಸ್ಥಾಪನೆ ಮತ್ತು ಸ್ಥಿರತೆ ತರುವ ವಿಚಾರದಲ್ಲಿ ಸಭೆಗಳು ನಡೆಯಲಿವೆ ಎಂದು ಉಭಯ ದೇಶಗಳು ಹೇಳಿವೆ. ನಿಷೇಧಿತ ತೆಹ್ರೀಕ್–ಎ–ತಾಲಿಬಾನ್ ಪಾಕಿಸ್ತಾನ್‌ನ (ಟಿಟಿಪಿ) ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನವು ದೋಹಾ ಸಭೆಯಲ್ಲಿ ಅಫ್ಗಾನಿಸ್ತಾನವನ್ನು ಒತ್ತಾಯಿಸಿದೆ.

ಸಂಕ್ಷಿಪ್ತ ಸುದ್ದಿ

ಪ್ರಾಚೀನ ಭಾರತೀಯರು ಮತಾಂತರಿಸಿಲ್ಲ: ಭಾಗವತ್

ಮೋಹನ್ ಭಾಗವತ್

ಮುಂಬೈ (ಪಿಟಿಐ): ಪ್ರಪಂಚದಾದ್ಯಂತ ಪ್ರವಾಸ ಮಾಡಿದ್ದ ಪ್ರಾಚೀನ ಕಾಲದ ಭಾರತೀಯರು ಸಂಸ್ಕೃತಿಯನ್ನು ಮತ್ತು ವಿಜ್ಞಾನವನ್ನು ಪ್ರಚಾರ ಮಾಡಿದರೇ ವಿನಾ ಆಕ್ರಮಣವನ್ನಾಗಲೀ ಧಾರ್ಮಿಕ ಮತಾಂತರವನ್ನಾಗಲೀ ಮಾಡಲಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.

ಇಲ್ಲಿ ಆರ್ಯ ಯುಗ ವಿಷಯ ಕೋಶ ವಿಶ್ವಕೋಶವನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಹಲವಾರು ಆಕ್ರಮಣಕಾರರು ಭಾರತವನ್ನು ಲೂಟಿ ಮಾಡಿ ಗುಲಾಮರನ್ನಾಗಿ ಮಾಡಿದರು ಮತ್ತು ಕೊನೆಯಲ್ಲಿ ಆಕ್ರಮಣ ಮಾಡಿದವರು ಭಾರತೀಯರ ಮನಸ್ಸನ್ನು ಲೂಟಿ ಮಾಡಿದರು ಎಂದಿದ್ದಾರೆ.

‘ನಮ್ಮ ಪೂರ್ವಜನರು ಮೆಕ್ಸಿಕೋದಿಂದ ಸೈಬೀರಿಯಾದವರೆಗೆ ಪ್ರವಾಸ ಕೈಗೊಂಡು ವಿಜ್ಞಾನ ಮತ್ತು ಸಂಸ್ಕೃತಿಯನ್ನು ಕಲಿಸಿದರು. ಅವರು ಯಾರನ್ನೂ ಮತಾಂತರ ಮಾಡಲಿಲ್ಲ. ಸದ್ಭಾವನೆ ಮತ್ತು ಏಕತೆಯ ಸಂದೇಶ ಸಾರಿದ್ದರು’ ಎಂದರು.

ಪತ್ನಿ ಕೊಂದು, ಕೊಠಡಿಯಲ್ಲಿ ಶವ ಹೂತು ಹಾಕಿದ ಪತಿ

ಬಹ್ರೈಚ್ (ಪಿಟಿಐ): ಪತ್ನಿಯನ್ನು ಹತ್ಯೆಗೈದ ವ್ಯಕ್ತಿಯೊಬ್ಬ, ಆಕೆಯ ಮೃತದೇಹವನ್ನು ಮಂಚದ ಕೆಳಗೆ ಹೂತು ಹಾಕಿದ್ದ ಘಟನೆ ಉತ್ತರ ಪ್ರದೇಶದ ಬಹರೈಚ್‌ನಲ್ಲಿ ನಡೆದಿದೆ.

ನರ್ಪತ್‌ಪುರವ ಗ್ರಾಮದ ನಿವಾಸಿಯಾಗಿರುವ ಆರೋಪಿ ಹರಿಕೃಷ್ಣನ್, ತನ್ನ ಪತ್ನಿ ಫೂಲಾದೇವಿಯನ್ನು (45) ಹತ್ಯೆ ಮಾಡಿ, ಮನೆಯ ಕೊಠಡಿಯಲ್ಲಿ ಮಂಚದ ಕೆಳಗೆ ಹೂತು ಹಾಕಿದ್ದಾನೆ. ಅದೇ ಮಂಚದ ಮೇಲೆ ಆತ ಮಲಗುತ್ತಿದ್ದ ಎಂದು ಪೊಲೀಸರು ತಿಳಿಸಿದರು.

ಅ.6ರಿಂದ ಫೂಲಾ ಅವರು ಕಾಣೆಯಾಗಿದ್ದರಿಂದ ಆಕೆಯ ಕುಟುಂಬಸ್ಥರು ಪ್ರಕರಣ ದಾಖಲಿಸಿದ್ದರು.

ಮಂಚದ ಕೆಳಗೆ ಮಣ್ಣು ಅಗೆದು, ಮುಚ್ಚಿದ್ದನ್ನು ಗಮನಿಸಿದ ಫೂಲಾ ಅವರ ಸಹೋದರ ಅನುಮಾನಗೊಂಡು, ಶುಕ್ರವಾರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬಳಿಕ ಪರಿಶೀಲನೆ ನಡೆಸಿ, ಮೃತದೇಹವನ್ನು ಹೊರತೆಗೆಯಲಾಗಿದೆ. ಆರೋಪಿ ಹರಿಕೃಷ್ಣನ್ ಪರಾರಿಯಾಗಿದ್ದು, ಆತನ ಪತ್ತೆಗೆ ಬಲೆ ಬೀಸಲಾಗಿದೆ ಎಂದು ಹೇಳಿದರು.

ಮಣಿಪುರ: ಸುಲಿಗೆ ಆರೋಪ ಇಬ್ಬರು ಬಂಡುಕೋರರ

ಇಂಫಾಲ್ (ಪಿಟಿಐ): ‘ಸುಲಿಗೆ ಆರೋಪದ ಮೇಲೆ ನಿಷೇಧಿತ ಬಂಡುಕೋರ ಸಂಘಟನೆಯ ಇಬ್ಬರು ಮಹಿಳಾ ಕಾರ್ಯಕರ್ತರನ್ನು ಮಣಿಪುರದಲ್ಲಿ ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಇಂಫಾಲ್ ಪಶ್ಚಿಮ ಜಿಲ್ಲೆಯ ಪಿಶುಮ್‌ಒಯ್ನೆನಮ್ ಪ್ರದೇಶದಲ್ಲಿದ್ದ ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾದ ಮೈಕಮ್ ಬಸಂತ್‌ರಾಣಿ ದೇವಿ (42) ಅವರನ್ನು ಬಂಧಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭೂವ್ಯಾಜ್ಯ, ಸಾಲ ಮರುಪಾವತಿ ವಿಚಾರದಲ್ಲಿ ಮಧ್ಯವರ್ತಿ ಕೆಲಸ ಮಾಡುವ ಮೂಲಕ ಸುಲಿಗೆ ನಡೆಸಿದ್ದರು.

ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಮೋಟರ್ ವಾಹನ ಇಲಾಖೆಯ ಅಧಿಕಾರಿಗಳು ಎಂದು ಬಿಂಬಿಸಿಕೊಂಡು ವಸೂಲಿಗೆ ಇಳಿದಿದ್ದ ಮತ್ತಿಬ್ಬರನ್ನು ಬಂಧಿಸಲಾಗಿದೆ.

ಆರೋಪಿಗಳಾದ ಎಂ.ಡಿ. ಅನೀಶ್ ಇಕ್ಬಾಲ್, ಎಂ.ಡಿ. ಅಮೀರ್ ರಹಮಾನ್ ಅವರು ಬೀದಿ ಬದಿಯ ಗ್ಯಾಂಬ್ಲರ್‌ಗಳಿಂದ ಹಣ ಪಡೆಯುತ್ತಿದ್ದ ವೇಳೆ ಬಂಧಿಸಲಾಯಿತು. ಇಕ್ಬಾಲ್, ಮೋಟರ್ ವಾಹನ ಸಾರಿಗೆ ಇಲಾಖೆ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಪರೀಕ್ಷೆ ಬರೆದಿದ್ದು, ವೇಯ್ಟಿಂಗ್ ಲಿಸ್ಟ್‌ನಲ್ಲಿದ್ದ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಕಲಿ ಸುದ್ದಿ ವಿರುದ್ಧ ಕ್ರಮ: ರೈಲ್ವೆ

ನವದೆಹಲಿ (ಪಿಟಿಐ): ಹಬ್ಬದ ದಟ್ಟಣೆಯ ಸಂದರ್ಭದಲ್ಲಿ ದಾರಿ ತಪ್ಪಿಸುವಂತಹ ಹಾಗೂ ಹಳೆ ವಿಡಿಯೊಗಳನ್ನು ಹರಿಬಿಡುವ ಸಾಮಾಜಿಕ ಜಾಲತಾಣ ಖಾತೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಭಾರತೀಯ ರೈಲ್ವೆ ತಿಳಿಸಿದೆ.

ಅಂತಹ ವಿಡಿಯೊಗಳು ಪ್ರಯಾಣಿಕರಲ್ಲಿ ಅನವಶ್ಯಕ ಭಯ ಉಂಟುಮಾಡುತ್ತವೆ. ಹೀಗಾಗಿ ಆಡಳಿತದ ಡಿಜಿಟಲ್ ಕಣ್ಗಾವಲು ವ್ಯವಸ್ಥೆಯನ್ನು ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ಅದು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಎಕ್ಸ್, ಇನ್‌ಸ್ಟಾಗ್ರಾಂ ಹಾಗೂ ಯೂಟ್ಯೂಬ್ ಸೇರಿದಂತೆ ಇತರ ಜಾಲತಾಣಗಳಲ್ಲಿ ಕೆಲವು ನಕಲಿ ಖಾತೆಗಳಿವೆ. ಪ್ಲಾಟ್‌ಫಾರ್ಮ್, ರೈಲು ಹಾಗೂ ರೈಲು ನಿಲ್ದಾಣಗಳಲ್ಲಿ ಅಧಿಕ ಜನದಟ್ಟಣೆ ಇರುವಂತಹ ಚಿತ್ರಗಳು ಮತ್ತು ವಿಡಿಯೊಗಳನ್ನು ಈ ಖಾತೆಗಳಿಂದ ಹರಿಬಿಡಲಾಗುತ್ತಿದೆ. ಇಂತಹ 20ಕ್ಕೂ ಅಧಿಕ ಖಾತೆಗಳನ್ನು ಗುರುತಿಸಲಾಗಿದ್ದು, ಇವುಗಳ ವಿರುದ್ಧ ಎಫ್‌ಐಆರ್ ದಾಖಲಿಸುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

ಸಚಿವಾಲಯವು ದಿನ 24 ಗಂಟೆಯೂ ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣೆ ಮಾಡಲು ಪ್ರಾರಂಭಿಸಿದೆ.

ಪ್ರತಿಭಟನೆಯ ಬಿಸಿ

ಎಎಫ್‌ಪಿ ಚಿತ್ರ

ಡೊನಾಲ್ಡ್ ಟ್ರಂಪ್ ಅವರ ಆಡಳಿತ ನೀತಿಯನ್ನು ವಿರೋಧಿಸಿ ಅಮೆರಿಕದ 50 ರಾಜ್ಯಗಳಲ್ಲೂ ಶನಿವಾರ ‘ನೋ ಕಿಂಗ್ಸ್’ ಹೆಸರಿನಡಿ ಬೃಹತ್ ಪ್ರತಿಭಟನೆ ನಡೆಯಿತು

‘ನಮಕ್ ಹರಾಮಿ’ಗಳ ಮತ ಬೇಡ: ಗಿರಿರಾಜ್

ಪಟ್ನಾ (ಪಿಟಿಐ): ಅಲ್ಪಸಂಖ್ಯಾತರನ್ನು ಉದ್ದೇಶಿಸಿ, ‘ನಮಕ್ ಹರಾಮಿಗಳ ಮತಗಳು ನನಗೆ ಅಗತ್ಯವಿಲ್ಲ’ ಎಂದು ಹೇಳಿಕೆ ನೀಡಿರುವ ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಮತ್ತೊಮ್ಮೆ ವಿವಾದಕ್ಕೀಡಾಗಿದ್ದಾರೆ.

ಗಿರಿರಾಜ್ ಸಿಂಗ್

ಬಿಹಾರದ ಅರ್ವಲ್ ಜಿಲ್ಲೆಯಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಶನಿವಾರ ಮಾತನಾಡಿದ ವೇಳೆ ಅವರು ಈ ಹೇಳಿಕೆ ನೀಡಿದ್ದಾರೆ.

‘ನೀವು ನನಗೆ ಮತ ಹಾಕಿದ್ದೀರಾ? ಎಂದು ಒಮ್ಮೆ ನಾನು ಮೌಲ್ವಿಯೊಬ್ಬರಿಗೆ ಕೇಳಿದೆ. ಅದಕ್ಕೆ ‘ಹೌದು’ ಅಂದರು. ದೇವರ ಮೇಲೆ ಪ್ರಮಾಣ ಮಾಡಿ ಹೇಳಿ ಎಂದಾಗ, ‘ಇಲ್ಲ, ಮತ ಹಾಕಿಲ್ಲ’ ಎಂದು ಉತ್ತರಿಸಿದರು’ ಎಂದರು.

‘ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ಹೊಂದಿದ್ದೀರಾ ಎಂದೂ ಅವರನ್ನು ಕೇಳಿದೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಉತ್ತರಿಸಿದರು. ಕಾರ್ಡ್ ಅನ್ನು ಹಿಂದೂ– ಮುಸ್ಲಿಂ ಆಧಾರದ ಮೇಲೆ ವಿತರಿಸಲಾಗಿದೆಯೇ? ಎಂದು ಕೇಳಿದೆ. ಅದಕ್ಕೆ ಅವರು ನಕಾರಾತ್ಮಕವಾಗಿ ಉತ್ತರಿಸಿದರು. ನಿಮ್ಮಂತಹ ‘ನಮಕ್ ಹರಾಮ್’ಗಳ ಮತಗಳನ್ನು ನಾವು ಬಯಸುವುದಿಲ್ಲ ಎಂದು ನಾನು ಅವರಿಗೆ ಹೇಳಿದೆ. ಮುಸ್ಲಿಮರು ಕೇಂದ್ರದ ಎಲ್ಲಾ ಯೋಜನೆಗಳನ್ನೂ ಪಡೆದುಕೊಳ್ಳುತ್ತಾರೆ. ಆದರೆ ಬಿಜೆಪಿಗೆ ಮತ ಹಾಕುವುದಿಲ್ಲ. ಅಂತವರನ್ನು ‘ನಮಕ್ ಹರಾಮ್’ ಎಂದು ಕರೆಯಲಾಗುತ್ತದೆ’ ಎಂದರು. ‘ಬಿಹಾರದ ಅಭಿವೃದ್ಧಿಗಾಗಿ ಎನ್‌ಡಿಎ ಸರ್ಕಾರವು ಸಾಕಷ್ಟು ಕಾರ್ಯಗಳನ್ನು ಮಾಡಿದೆ. ಬಿಹಾರ ಈಗ ಬದಲಾಗಿದೆ’ ಎಂದರು.

ಬಿಹಾರ: ಅ.24ರಿಂದ ಮೋದಿ ಪ್ರಚಾರ

ಪಟ್ನಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ವಾರದಿಂದ ಬಿಹಾರದಲ್ಲಿ ಬಿಜೆಪಿ ಪರ ಪ್ರಚಾರಕ್ಕೆ ಇಳಿಯಲಿದ್ದಾರೆ. ಈ ತಿಂಗಳ ಅಂತ್ಯದಲ್ಲಿ ನಾಲ್ಕು ಚುನಾವಣಾ ರ‍್ಯಾಲಿಗಳನ್ನು ನಿಗದಿ ಮಾಡಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಜೈಸ್ವಾಲ್ ತಿಳಿಸಿದರು.



ನರೇಂದ್ರ ಮೋದಿ

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಅಕ್ಟೋಬರ್ 24ರಂದು ಸಮಷ್ಟಿಪುರದಲ್ಲಿ ನಡೆಯುವ ರ‍್ಯಾಲಿ ಮೂಲಕ ನರೇಂದ್ರ ಮೋದಿ ಅವರು ಪ್ರಚಾರ ಆರಂಭಿಸಲಿದ್ದಾರೆ. ಅದೇ ದಿನ ಬೇಗುಸರಾಯ್‌ನಲ್ಲಿ ಮತ್ತೊಂದು ರ‍್ಯಾಲಿ ನಡೆಯಲಿದೆ ಎಂದರು.

ಜಗತ್ತಿನ ಅತಿದೊಡ್ಡ ನಾಯಕರಲ್ಲಿ ಒಬ್ಬರಾಗಿರುವ ಪ್ರಧಾನಿ ಮೋದಿ ಅವರು ಮೊದಲ ರ‍್ಯಾಲಿ ಆರಂಭಕ್ಕೂ ಮುನ್ನ, ಭಾರತರತ್ನ ಪುರಸ್ಕೃತ ಕರ್ಪೂರಿ ಠಾಕೂರ್ ಅವರ ಜನ್ಮಸ್ಥಳ ಕರ್ಪೂರಿ ಗ್ರಾಮಕ್ಕೆ ಭೇಟಿ ನೀಡಿ, ಅವರಿಗೆ ನಮನ ಸಲ್ಲಿಸಲಿದ್ದಾರೆ ಎಂದು ತಿಳಿಸಿದರು.

ಅಕ್ಟೋಬರ್ 30ರಂದು ಮುಜಫ್ಫರಪುರ, ಛಪ್ರಾ ನಗರದಲ್ಲಿ ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ನವೆಂಬರ್ 2, 3, 6 ಮತ್ತು 7ರಂದೂ ಮೋದಿ ಅವರ ರ‍್ಯಾಲಿಗಳು ನಿಗದಿಯಾಗಿವೆ ಎಂದು ಮಾಹಿತಿ ನೀಡಿದರು.

ಬಿಹಾರ ವಿಧಾನಸಭೆ ಚುನಾವಣೆಯು ಎರಡು ಹಂತಗಳಲ್ಲಿ ನವೆಂಬರ್ 6 ಮತ್ತು 11ರಂದು ನಡೆಯಲಿದೆ.

ಕದನ ವಿರಾಮದ ನಡುವೆಯೇ ಇಸ್ರೇಲ್ ದಾಳಿ

ಟೆಲ್ ಅವೀವ್(ಎಪಿ): ಕದನ ವಿರಾಮದ ನಡುವೆಯೇ ಇಸ್ರೇಲ್ ಸೇನೆ ಭಾನುವಾರ ಹಮಾಸ್ ಬಂಡುಕೋರರನ್ನು ಗುರಿಯಾಗಿಸಿ ಗಾಜಾಪಟ್ಟಿಯ ಹಲವೆಡೆ ದಾಳಿ ನಡೆಸಿದೆ.

ಸೇನೆಯ ನಿಯಂತ್ರಣದಲ್ಲಿರುವ ಗಾಜಾದಲ್ಲಿ ಹಮಾಸ್ ಬಂಡುಕೋರರು ಇಸ್ರೇಲ್ ಸೈನಿಕರ ಮೇಲೆ ಗುಂಡಿನ ದಾಳಿ ನಡೆಸಿ, ಕದನ ವಿರಾಮ ಉಲ್ಲಂಘಿಸಿದ್ದಕ್ಕಾಗಿ ಈ ದಾಳಿ ನಡೆಸಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ. ಆದರೆ, ಗಾಜಾಪಟ್ಟಿಯ ದಕ್ಷಿಣ ಭಾಗದ ರಫಾದಲ್ಲಿ ಯಾವುದೇ ಘರ್ಷಣೆಯಲ್ಲಿ ಭಾಗಿಯಾಗಿಲ್ಲ ಎಂದು ಹಮಾಸ್ ಹೇಳಿದೆ.

‘ಹಮಾಸ್‌ನಿಂದ ಕದನ ವಿರಾಮ ಉಲ್ಲಂಘನೆಯಾದರೆ ಕಠಿಣ ಕ್ರಮ ಕೈಗೊಳ್ಳಿ’ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಇಸ್ರೇಲ್ ಸೇನಾ ಮುಖ್ಯಸ್ಥರಿಗೆ ಸೂಚಿಸಿದ್ದಾರೆ. ಆದರೆ, ಮತ್ತೊಮ್ಮೆ ಯುದ್ಧ ಪುನರಾರಂಭಿಸುವ ಬೆದರಿಕೆ ಒಡ್ಡಿಲ್ಲ. ಇದರ ಬೆನ್ನಲ್ಲೇ, ಕದನ ವಿರಾಮಕ್ಕೆ ಸಂಬಂಧಿಸಿದ ಎರಡನೆಯ ಸುತ್ತಿನ ಮಾತುಕತೆ ಆರಂಭಗೊಂಡಿದೆ ಎಂದು ಪ್ಯಾಲೆಸ್ಟೀನ್ ಹೇಳಿದೆ. ಹಮಾಸ್‌ನ ಸಂಪೂರ್ಣ ನಿಶ್ಶಸ್ತ್ರೀಕರಣ, ಗಾಜಾದ ಭವಿಷ್ಯದ ಆಡಳಿತ ಎರಡನೆಯ ಸುತ್ತಿನ ಕದನ ವಿರಾಮ ಮಾತುಕತೆಯ ಪ್ರಮುಖ ಅಂಶಗಳು.

ಬಾಕಿ ಉಳಿದಿದ್ದ ಇಬ್ಬರು ಇಸ್ರೇಲ್ ಒತ್ತೆಯಾಳುಗಳನ್ನು ಹಮಾಸ್ ಶನಿವಾರ ರಾತ್ರೋರಾತ್ರಿ ಬಿಡುಗಡೆ ಮಾಡಿತ್ತು. ಇದರ ಬೆನ್ನಲ್ಲೇ, ಇಸ್ರೇಲ್ ಸೇನೆಯಿಂದ ದಾಳಿ ನಡೆದಿದೆ. ಹಮಾಸ್ ಕದನ ವಿರಾಮ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವರೆಗೆ ಗಾಜಾ–ಈಜಿಪ್ಟ್ ನಡುವಿನ ರಫಾ ಗಡಿಯನ್ನು ಮುಚ್ಚುವುದಾಗಿ ಇಸ್ರೇಲ್ ಎಚ್ಚರಿಸಿದೆ.

ಮೃತದೇಹ ಹಸ್ತಾಂತರ: ಕದನ ವಿರಾಮ ಘೋಷಣೆಯಾದ ನಂತರ, ಕಳೆದ ಒಂದು ವಾರದಲ್ಲಿ ಹಮಾಸ್ ಇಸ್ರೇಲ್‌ಗೆ 13 ಮೃತದೇಹಗಳನ್ನು ಹಸ್ತಾಂತರಿಸಿದೆ. ಇದರಲ್ಲಿ 12 ಮೃತದೇಹಗಳು ಒತ್ತೆಯಾಳುಗಳದ್ದು ಎಂದು ಇಸ್ರೇಲ್ ಸೇನೆ ಗುರುತಿಸಿದೆ. ಇಸ್ರೇಲ್, ಹಮಾಸ್‌ಗೆ 150 ಪ್ಯಾಲೆಸ್ಟೀನಿಯರ ಮೃತದೇಹಗಳನ್ನು ಹಸ್ತಾಂತರಿಸಿದೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಹೇಳಿದೆ.

ಲೂವ್ರಾ ಮ್ಯೂಸಿಯಂನಲ್ಲಿ ದರೋಡೆ

ಪ್ಯಾರಿಸ್ (ಎಪಿ): ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿರುವ ವಿಶ್ವವಿಖ್ಯಾತ ಲೂವ್ರಾ ಮ್ಯೂಸಿಯಂನಲ್ಲಿ ಭಾನುವಾರ ದರೋಡೆಯಾಗಿದೆ ಎಂದು ಫ್ರಾನ್ಸ್ ಸಾಂಸ್ಕೃತಿಕ ಮಂತ್ರಿ ರಚಿದಾ ದಾತಿ ತಿಳಿಸಿದ್ದಾರೆ.



‘ಇದು ನುರಿತ ದರೋಡೆಕೋರರ ಕೆಲಸವಾಗಿದ್ದು, ಯಾವುದೇ ಹಿಂಸಾಚಾರವಿಲ್ಲದೆ ದರೋಡೆ ಮಾಡಿದ್ದಾರೆ. ಪ್ರಕರಣದ ಕುರಿತು ತನಿಖೆ ನಡೆಸುವ ಸಲುವಾಗಿ ಒಂದು ದಿನ ಮ್ಯೂಸಿಯಂ ಅನ್ನು ಮುಚ್ಚಲಾಗಿದೆ’ ಎಂದು ದಾತಿ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ. ಆದರೆ ಕಳ್ಳತನದ ಕುರಿತು ಹೆಚ್ಚು ಮಾಹಿತಿಯನ್ನು ಅವರು ನೀಡಿಲ್ಲ.

ಅಪೊಲೊ ಗ್ಯಾಲರಿಯ ಕಿಟಕಿ ಒಡೆದು ದರೋಡೆ ಮಾಡಲಾಗಿದೆ. ಮೂರನೇ ನೆಪೋಲಿಯನ್ ಪತ್ನಿಯ ಕಿರೀಟ, ಚಿನ್ನ ಮತ್ತು ವಜ್ರಗಳ ಆಭರಣಗಳು ಲೂಟಿಯಾಗಿವೆ ಎಂದು ಫ್ರೆಂಚ್ ದಿನಪತ್ರಿಕೆ ‘ಲೆ ಪ್ಯಾರಿಸಿಯನ್’ ವರದಿ ಮಾಡಿದೆ.

ಪ್ರಪಂಚದಲ್ಲೇ ಅತಿ ದೊಡ್ಡ ಪುರಾತನ ವಸ್ತುಗಳ ಸಂಗ್ರಹ ಇಲ್ಲಿದ್ದು, ಜಗತ್ ಪ್ರಸಿದ್ಧ ಮೊನಾಲಿಸಾಳ ಮೂಲ ಚಿತ್ರವಿರುವುದು ಇಲ್ಲಿಯೇ. ಲೂವ್ರಾ ಮ್ಯೂಸಿಯಂಗೆ ಪ್ರತಿದಿನ 30,000 ವೀಕ್ಷಕರು ಭೇಟಿ ನೀಡುತ್ತಾರೆ.

ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಸೋಮವಾರ • ಅಕ್ಟೋಬರ್ 20, 2025

ಉತ್ತರ-ದಕ್ಷಿಣ ಸಂಪ್ರದಾಯಗಳ ಸಮ್ಮಿಲನ

ಸಿನಿಮಾ ಮೇಲಿನ ಪ್ರೀತಿಯಿಂದ ಸಾಫ್ಟ್‌ವೇರ್, ವೈದ್ಯಕೀಯ ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳಿಂದ ಚಿತ್ರರಂಗಕ್ಕೆ ಬಂದು ಯಶಸ್ವಿಯಾದ ಸಾಕಷ್ಟು ಜನರಿದ್ದಾರೆ. ಅದೇ ರೀತಿ ಶಿಕ್ಷಣ ಕ್ಷೇತ್ರದಿಂದ ಚಿತ್ರರಂಗದತ್ತ ಮುಖ ಮಾಡಿದವರು ಗೀತಪ್ರಿಯ. ಈಗಾಗಲೇ ಎರಡು ಸಿನಿಮಾಗಳನ್ನು ಪೂರೈಸಿರುವ ಅವರು ಮೂರನೇ ಚಿತ್ರದೊಂದಿಗೆ ಈ ವರ್ಷದ ದೀಪಾವಳಿಯನ್ನು ಸಂಭ್ರಮಿಸುತ್ತಿದ್ದಾರೆ...

'ನನಗೆ ನಟನೆ ಎಂದರೆ ಮೊದಲಿನಿಂದಲೂ ಆಸಕ್ತಿ. ಸೂಕ್ತ ಕಥೆಗಳಿಗೆ ಎದುರು ನೋಡುತ್ತಿದ್ದೆ. ನನ್ನ ಮೊದಲ ಸಿನಿಮಾ 'ತಾಯವ್ವ' ವಿಭಿನ್ನ ಕಥಾವಸ್ತುವಿನಿಂದ ಜನರ ಗಮನ ಸೆಳೆಯಿತು. ಅದಾದ ಬಳಿಕ ಒಂದರ ಹಿಂದೊಂದು ಸಿನಿಮಾಗಳನ್ನು ಮಾಡುತ್ತಿರುವೆ. ಹಣ ಗಳಿಸಬೇಕೆಂಬ ಇರಾದೆಯಿಂದ ಚಿತ್ರರಂಗಕ್ಕೆ ಬಂದಿಲ್ಲ. ಸಾಮಾಜಿಕ ಕಳಕಳಿ, ಉತ್ತಮ ಸಂದೇಶವುಳ್ಳ ಚಿತ್ರಗಳನ್ನು ಮಾಡುವ ಹಂಬಲವಿದೆ' ಎಂದು ಮಾತು ಪ್ರಾರಂಭಿಸಿದರು ಗೀತಪ್ರಿಯ.

ಸೂಲಗಿತ್ತಿಯರ ಕಥೆಯನ್ನು ಹೊಂದಿರುವ 'ತಾಯವ್ವ' ಚಿತ್ರದ ಮೂಲಕ ನಟಿ, ನಿರ್ಮಾಪಕಿಯಾಗಿ ಗುರುತಿಸಿಕೊಂಡರು. ಸದ್ಯ ಅವರು 'ಅಪರಿಚಿತೆ' ಎಂಬ ಇನ್ನೊಂದು ಮಹಿಳಾ ಪ್ರಧಾನ ಕಥೆಯನ್ನು ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರಕ್ಕೆ ವಿಶ್ವನಾಥ ಆ್ಯಕ್ಷನ್ ಕಟ್ ಹೇಳಿದ್ದು, ಸಿಂಧು ಲೋಕನಾಥ್, ಆರ್.ಜೆ.ನಿಖಿತಾ, ನಟ ಶ್ರೀನಾಥ್ ಹಾಗೂ ಶ್ರೀನಾಥ್ ಅವರ ಪುತ್ರ ರೋಹಿತ್ ಪ್ರಮುಖ ಪಾತ್ರದಲ್ಲಿದ್ದಾರೆ.

'ಅಪರಿಚಿತೆ' ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಸರಿಗಮಪ ರಿಯಾಲಿಟಿ ಶೋ ಮೆಂಟರ್ ಆಗಿರುವ ಶಶಿಕಲಾ ಒಂದು ಹಾಡನ್ನು ಹಾಡಿದ್ದಾರೆ. ಹಿನ್ನೆಲೆ ಸಂಗೀತದ ಕೆಲಸ ನಡೆಯುತ್ತಿದೆ. ಅನಿಲ್ ಸಿ.ಜೆ 'ಅಪರಿಚಿತೆ' ಶೀರ್ಷಿಕೆ ಗೀತೆಗೆ ಸಂಗೀತ ಸಂಯೋಜಿಸಿದ್ದಾರೆ. ಶೀಘ್ರದಲ್ಲಿಯೇ ಚಿತ್ರದ ಹಾಡು ಬಿಡುಗಡೆ ಮಾಡುತ್ತೇವೆ' ಎನ್ನುತ್ತಾರೆ ಅವರು.

ಮಕ್ಕಳ ಬದುಕಿನ ಆಶಾಕಿರಣ

'ಅಪರಿಚಿತೆ' ಸಿದ್ಧವಾಗುತ್ತಿರುವಾಗಲೇ 'ಆಶಾಕಿರಣ' ಎಂಬ ಮತ್ತೊಂದು ಸಿನಿಮಾವನ್ನು ಗೀತಪ್ರಿಯ ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರಕ್ಕೆ ಅವರೇ ಕಥೆ ಬರೆದಿದ್ದು ನಟನೆ ಜತೆಗೆ ನಿರ್ಮಾಣವನ್ನೂ ಮಾಡುತ್ತಿದ್ದಾರೆ. 'ಮಹಿಳಾ ಮತ್ತು ಮಕ್ಕಳ ಕಥೆ ಹೊಂದಿರುವ ಚಿತ್ರ. ಇದಕ್ಕೆ ನಾನೇ ಕಥೆ ಬರೆದಿರುವೆ. ಮುಂದಿನ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಮುಖ್ಯಮಂತ್ರಿ ಚಂದ್ರು ಸೇರಿದಂತೆ ಅನೇಕ ಜನಪ್ರಿಯ ಕಲಾವಿದರು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದು ಕೂಡ ಸಾಮಾಜಿಕ ಕಳಕಳಿಯ ಕಥಾವಸ್ತುವನ್ನು ಹೊಂದಿರುವ ಚಿತ್ರ. ಈ ರೀತಿ ಚಿತ್ರಗಳಲ್ಲಿಯೇ ನನಗೆ ಆಸಕ್ತಿ ಹೆಚ್ಚು. ನಾವು ಮಾಡುವ ಸಿನಿಮಾಗಳು ಸಮಾಜಕ್ಕೆ ಏನಾದರೂ ಸಂದೇಶ ನೀಡಬೇಕು. ಒಂದಷ್ಟು ಜನಕ್ಕೆ ಸ್ಫೂರ್ತಿಯಾಗುವಂತೆ ಇರಬೇಕು' ಎಂದು ಮಾತಿಗೆ ವಿರಾಮವಿತ್ತರು.

ಸಂಭ್ರಮದ ದೀಪಾವಳಿ

ಕೃಪಾನಿಧಿ ಶಿಕ್ಷಣ ಸಂಸ್ಥೆಗಳ ಮೂಲಕ ಶಿಕ್ಷಣೋದ್ಯಮಿಯಾಗಿ ಗುರುತಿಸಿಕೊಂಡ ಇವರದ್ದು ಬಹುಮುಖ ಪ್ರತಿಭೆ. ಸಮಾಜಸೇವೆ, ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜೊತೆಗೆ ಚಿತ್ರರಂಗದಲ್ಲಿಯೂ ಸಕ್ರಿಯರಾಗಿದ್ದಾರೆ.

'ನಮ್ಮಲ್ಲಿ ದೀಪಾವಳಿ ದೊಡ್ಡ ಹಬ್ಬ. ನರಕ ಚತುರ್ದಶಿ, ದೀಪಾವಳಿ, ಬಲಿಪಾಡ್ಯಮಿ ಎಂದು ಮೂರು ದಿನಗಳ ಕಾಲ ಈ ಹಬ್ಬವನ್ನು ಆಚರಿಸುತ್ತೇವೆ. ಮನೆಯಲ್ಲಿ ದೀಪಗಳ ಅಲಂಕಾರ ಅದ್ದೂರಿಯಾಗಿರುತ್ತದೆ. ಅತಿಥಿಗಳು, ಸ್ನೇಹಿತರು, ಸಂಬಂಧಿಗಳು ಬರುತ್ತಾರೆ. ಬಗೆಬಗೆಯ ಸಿಹಿತಿಂಡಿ ಮಾಡುತ್ತೇವೆ. ನನ್ನ ಪತಿ ನಾಗ್ಪಾಲ್ ಉತ್ತರ ಭಾರತದವರು. ನಾನು ಇಲ್ಲಿಯವಳು. ಹೀಗಾಗಿ ನಮ್ಮ ಮನೆಯಲ್ಲಿ ದೀಪಾವಳಿಯನ್ನು ಉತ್ತರ-ದಕ್ಷಿಣ ಎರಡೂ ಸಂಪ್ರದಾಯಗಳಂತೆ ಆಚರಿಸುತ್ತೇವೆ. ಪೂಜೆ ಇರುತ್ತದೆ. ಒಂದು ದಿನ ಪಾರ್ಟಿ ಇರುತ್ತದೆ. ಕತ್ತಲು ಕಳೆದು ಬೆಳಕು ಬರುವ ಹಬ್ಬವಿದು. ಸಾಕಷ್ಟು ಸಂಪ್ರದಾಯಗಳನ್ನು ಆಚರಿಸುತ್ತೇವೆ. ಲಕ್ಷ್ಮಿ ಪೂಜೆ, ದೇವಿ ಪೂಜೆ ಮಾಡುತ್ತೇವೆ' ಎಂದು ತಮ್ಮ ಮನೆಯಲ್ಲಿನ ದೀಪಾವಳಿ ಸಂಭ್ರಮದ ಕುರಿತು ವಿವರಿಸಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನಟ ಶ್ರೀನಾಥ್ ಅವರೊಂದಿಗೆ ಗೀತಪ್ರಿಯ

ರಾಧೇಯನಾದ ಅಜಯ್ ರಾವ್

ಅಜಯ್ ರಾವ್ ನಟನೆಯ 'ರಾಧೇಯ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವೇದಗುರು ಆ್ಯಕ್ಷನ್-ಕಟ್ ಹೇಳಿದ್ದಾರೆ.

'ಮಹಾಭಾರತದ ಕರ್ಣನ ಇನ್ನೊಂದು ಹೆಸರು 'ರಾಧೇಯ'. ಕರ್ಣನ ಸಾಕು ತಾಯಿ ಹೆಸರು ರಾಧಾ. ಹಾಗಂತ ಆ ಕರ್ಣನಿಗೂ ಈ ಕಥೆಗೂ ಸಂಬಂಧವಿಲ್ಲ. ಆದರೆ ಅವನ ತ್ಯಾಗದ ಅಂಶ ನಮ್ಮ ಚಿತ್ರದಲ್ಲಿದೆ. ರಾಧೇಯ ತನ್ನ ಪ್ರೀತಿಯನ್ನು ಹೇಗೆ ಉಳಿಸಿಕೊಳ್ಳುತ್ತಾನೆ, ಅದಕ್ಕಾಗಿ ಏನೆಲ್ಲ ಸಮಸ್ಯೆಗಳನ್ನು ದಾಟಿ ಬರುತ್ತಾನೆ ಎಂಬುದನ್ನು ಪ್ರೇಮಕಥೆಯೊಂದಿಗೆ ಹೇಳಿದ್ದೇನೆ. ಬೆಂಗಳೂರು ಸುತ್ತಮುತ್ತ ಚಿತ್ರದ ಶೂಟಿಂಗ್ ಮಾಡಿದ್ದೇವೆ. ನಿರ್ದೇಶನದ ಜತೆಗೆ ಚಿತ್ರಕ್ಕೆ ಬಂಡವಾಳವನ್ನೂ ಹೂಡಿದ್ದೇನೆ' ಎಂದರು ನಿರ್ದೇಶಕ.

ಸೋನಲ್ ಮೊಂತೆರೋ ನಾಯಕಿ. ನವೆಂಬರ್ 21ರಂದು ಚಿತ್ರ ತೆರೆಗೆ ಬರಲಿದೆ. 'ನನ್ನ ಸಿನಿ ಪಯಣದಲ್ಲಿ ಈ ಚಿತ್ರಕ್ಕೆ ವಿಶೇಷ ಜಾಗವಿದೆ. ನನಗೆ ವೇದಗುರು ಅವರೇ ಈ ಚಿತ್ರದ ಹೀರೊ ಎನ್ನಿಸುತ್ತಾರೆ. ಸಾಕಷ್ಟು ಕಷ್ಟಪಟ್ಟು ಚಿತ್ರವನ್ನು ಈ ಹಂತಕ್ಕೆ ತಂದಿದ್ದಾರೆ. ನಾನೂ ಒಬ್ಬ ನಿರ್ಮಾಪಕನಾಗಿದ್ದರಿಂದ ಅವರ ಕಷ್ಟ ಏನೆಂದು ಗೊತ್ತಾಗಿದೆ. ಕ್ರಿಮಿನಲ್ ಆಗಿ ಜೈಲಿನಲ್ಲಿರುವವನ ಪಾತ್ರದ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ನನ್ನ ಪಾತ್ರ ಸೈಕ್ ರೀತಿ ಇದೆ. ಇಂಥ ಪಾತ್ರ ನನಗೆ ಹೊಸದು' ಎಂದರು ಅಜಯ್ ರಾವ್.

ವಿಯಾನ್(ಸ್ಯಾಂಡಿ) ಸಂಗೀತ ಸಂಯೋಜನೆ, ರಮ್ಮಿ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಅವರ ಸಂಕಲನ ಈ ಚಿತ್ರಕ್ಕಿದೆ.

ಅಜಯ್ ರಾವ್, ಸೋನಲ್

ಜಾನ್ವಿಕಾ

ನ.14ಕ್ಕೆ 'ಲವ್ ಒಟಿಪಿ'

ಅನೀಶ್ ತೇಜೇಶ್ವರ್ ನಟಿಸಿ, ನಿರ್ದೇಶಿಸಿರುವ 'ಲವ್ ಒಟಿಪಿ' ನವೆಂಬರ್ 14ರಂದು ತೆರೆಗೆ ಬರಲಿದೆ. ತಂದೆ ಮಗನ ಸಂಬಂಧ, ಪ್ರೀತಿ, ಪ್ರೇಮ ಸೇರಿದಂತೆ ಕಮರ್ಷಿಯಲ್ ಅಂಶಗಳನ್ನು ಹೊಂದಿರುವ ಚಿತ್ರ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಿದ್ಧಗೊಂಡಿದೆ.

'ಸ್ನೇಹಿತ ವಿಜಯ್ ರೆಡ್ಡಿ ಅವರ ಸಹಕಾರದಿಂದ ಉತ್ತಮ ಚಿತ್ರ ಮಾಡಿದ್ದೇನೆ. ಚಿತ್ರ ನೋಡಿದವರು ಶ್ಲಾಘಿಸುತ್ತಿದ್ದಾರೆ. ಪ್ರೇಮಕಥೆಯ ಜತೆಗೆ ಮನರಂಜನೆ ಅಂಶಗಳನ್ನು ಹೊಂದಿರುವ ಚಿತ್ರ. ತೆಲುಗಿನ ಹಿರಿಯ ಕಲಾವಿದ ರಾಜೀವ್ ಕನಕಾಲ ಮೊದಲ ಬಾರಿಗೆ ಕನ್ನಡದಲ್ಲಿ ನಟಿಸಿದ್ದಾರೆ. ಜತೆಗೆ ಡಬ್ ಕೂಡ ಮಾಡಿದ್ದಾರೆ' ಎಂದರು ಅನೀಶ್.

ವಿಜಯ್ ರೆಡ್ಡಿ ಭಾವಪ್ರೀತ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ. ಜಾನ್ವಿಕಾ ಅನೀಶ್‌ಗೆ ಜೋಡಿಯಾಗಿದ್ದಾರೆ. ರವಿ ಭಟ್, ಪ್ರಮೋದಿನಿ, ತುಳಸಿ, ಚೇತನ್, ಸ್ವರೂಪಿಣಿ ಮುಂತಾದವರು ಚಿತ್ರದಲ್ಲಿದ್ದಾರೆ.

'ಕನ್ನಡದಲ್ಲಿ ನನ್ನ ಮೂರನೇ ಚಿತ್ರ. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ಚಿತ್ರೀಕರಣಗೊಂಡಿದ್ದು, ಎರಡರಲ್ಲಿಯೂ ನಟಿಸಿದ್ದೇನೆ. ಫಿಸಿಯೊ ಥೆರಪಿಸ್ಟ್ ಪಾತ್ರ. ಸವಾಲಿನಿಂದ ಕೂಡಿದ ಪಾತ್ರವಾಗಿತ್ತು' ಎಂದರು ಜಾನ್ವಿಕಾ.

'ನಾಲ್ವರು ಕಾಣಿಸುತ್ತಿಲ್ಲ' ಎಂದ ಹೊಸಬರು

ಬಹುತೇಕ ಹೊಸಬರಿಂದಲೇ ಕೂಡಿರುವ '4.30 - 6 ಮುಹೂರ್ತ. ನಾಲ್ವರು ಕಾಣಿಸುತ್ತಿಲ್ಲ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಪೂರ್ವ ಸುರೇಶ್ ಹಾಗೂ ಶಿವರಾಜ್ ನಿರ್ದೇಶನವಿದೆ. ಧರ್ಮಶ್ರೀ ಮಂಜುನಾಥ್ ಮತ್ತು ಡಿ.ಯೋಗರಾಜ್ ನಿರ್ಮಾಣವಿದೆ.

'ಸಂಬಂಧಗಳ ಮೌಲ್ಯಗಳನ್ನು ತಿಳಿಸುವ ಕಥಾಹಂದರ ಹೊಂದಿರುವ ಚಿತ್ರ. 90ರ ದಶಕದಲ್ಲಿ ಮದುವೆ ಅಂದರೆ ಒಂದು ಸಂಭ್ರಮ. ಪ್ರತಿಯೊಬ್ಬರ ಮನೆಗೂ ಹೋಗಿ ಪತ್ರಿಕೆ ಕೊಟ್ಟು ಮದುವೆಗೆ ಕರೆಯುತ್ತಿದ್ದರು. ಈಗ ಹಾಗಲ್ಲ. ಎಲ್ಲಾ ಮೊಬೈಲ್‌ನಲ್ಲೇ. ಹಾಗಾಗಿ ಈಗಿನ ಜನತೆಗೆ ಅಂದಿನ ಸಂಬಂಧಗಳು ಹೇಗಿತ್ತು ಎಂದು ತೋರಿಸುವ ಪ್ರಯತ್ನವನ್ನು ಈ ಚಿತ್ರದ ಮೂಲಕ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆಯಲಿದೆ. ಹಾಡುಗಳ ಚಿತ್ರೀಕರಣ ಚಿಕ್ಕಮಗಳೂರು, ಮಂಗಳೂರು ಮುಂತಾದೆಡೆ ನಡೆಯಲಿದೆ' ಎಂದರು ನಿರ್ದೇಶಕರು. ಎಂ.ಎನ್.ಸುಚಿತ್‌ಗೆ ಸಾತ್ವಿಕಾ ಜೋಡಿಯಾಗಿದ್ದಾರೆ. ಅನಿಲ್, ಧನ್ಯಾ, ರಮೇಶ್ ರೈ, ರೇಖಾದಾಸ್ ಮುಂತಾದವರು ಚಿತ್ರದಲ್ಲಿದ್ದಾರೆ.

ಸಾತ್ವಿಕಾ, ಎಂ.ಎನ್.ಸುಚಿತ್

ಡಿಕ್ರಿ ಅಮಲ್ಜಾರಿ: 8.82 ಲಕ್ಷ ಅರ್ಜಿ ಬಾಕಿ

ನವದೆಹಲಿ (ಪಿಟಿಐ): ದೇಶದಾದ್ಯಂತ ವಿವಿಧ ನ್ಯಾಯಾಲಯಗಳಲ್ಲಿ 8.82 ಲಕ್ಷಕ್ಕೂ ಹೆಚ್ಚು ಡಿಕ್ರಿ ಅಮಲ್ಜಾರಿ ಪ್ರಕರಣಗಳ ಅರ್ಜಿಗಳು ಬಾಕಿ ಇರುವುದು ಅತ್ಯಂತ ನಿರಾಶಾದಾಯಕ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಬೇಸರ ವ್ಯಕ್ತಪಡಿಸಿದೆ.

ಸಿವಿಲ್ ವಿವಾದಗಳಲ್ಲಿ ನ್ಯಾಯಾಲಯಗಳು ಹೊರಡಿಸಿದ ಆದೇಶಗಳನ್ನು ಜಾರಿಗೊಳಿಸುವಂತೆ ಕೋರಿ ಡಿಕ್ರಿ ಹೊಂದಿರುವವರು ಈ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

'ಎಲ್ಲ ಹೈಕೋರ್ಟ್‌ಗಳು ಮುಂದಿನ ಆರು ತಿಂಗಳೊಳಗೆ ಈ ಅರ್ಜಿಗಳ ಕುರಿತು ನಿರ್ಧಾರ ತೆಗೆದುಕೊಳ್ಳುವಂತೆ ತನ್ನ ವ್ಯಾಪ್ತಿಯ ಸಿವಿಲ್ ನ್ಯಾಯಾಲಯಗಳಿಗೆ ಸೂಚಿಸಬೇಕು' ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಪಂಕಜ್ ಮಿಥಲ್ ಅವರ ಪೀಠ ಮಾರ್ಚ್ 6ರಂದು ನಿರ್ದೇಶನ ನೀಡಿತ್ತು.

'ಈ ವಿಷಯದಲ್ಲಿ ಯಾವುದೇ ವಿಳಂಬ ಆಗಬಾರದು. ಒಂದು ವೇಳೆ ವಿಳಂಬ ಆದರೆ ಸಂಬಂಧಿಸಿದ ಅಧಿಕಾರಿಗಳು ಹೊಣೆಗಾರರಾಗುತ್ತಾರೆ' ಎಂದು ಪೀಠ ಸ್ಪಷ್ಟಪಡಿಸಿತ್ತು.

3.85 ಲಕ್ಷ ಅರ್ಜಿಗಳ ವಿಲೇವಾರಿ: 'ಮಾರ್ಚ್ 6ರಿಂದ ಆರು ತಿಂಗಳಲ್ಲಿ ಈ ರೀತಿಯ ಒಟ್ಟು 3,38,685 ಅರ್ಜಿಗಳನ್ನು ತೀರ್ಮಾನಿಸಿ ವಿಲೇವಾರಿ ಮಾಡಲಾಗಿದೆ ಎಂಬ ಮಾಹಿತಿ ಬಂದಿದೆ. ಆದರೆ ಇನ್ನೂ 8,82,578 ಅರ್ಜಿಗಳು ಬಾಕಿಯಿವೆ' ಎಂದು ಪೀಠ ಹೇಳಿದೆ.

'ಆದೇಶ ನೀಡಿದ ನಂತರ ಅದನ್ನು ಜಾರಿಗೊಳಿಸಲು ಹಲವು ವರ್ಷಗಳೇ ಬೇಕು ಎನ್ನುವುದು ಅರ್ಥಹೀನ ಮತ್ತು ನ್ಯಾಯದ ಅಣಕವಲ್ಲವೇ' ಎಂದು ಪೀಠವು ಅಕ್ಟೋಬರ್ 16ರ ನಿರ್ದೇಶನದಲ್ಲಿ ಉಲ್ಲೇಖಿಸಿದೆ.

ಬಾಕಿ ಇರುವ ಡಿಕ್ರಿ ಅಮಲ್ಜಾರಿ ಅರ್ಜಿಗಳ ಪರಿಣಾಮಕಾರಿ ಮತ್ತು ತ್ವರಿತ ವಿಲೇವಾರಿಗೆ ಹೈಕೋರ್ಟ್‌ಗಳು ಜಿಲ್ಲಾ ನ್ಯಾಯಾಲಯಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಪೀಠ ಮತ್ತೊಮ್ಮೆ ಸೂಚನೆ ನೀಡಿದೆ.

ಕರ್ನಾಟಕದಿಂದ ವಿವರಣೆ ಕೇಳಿದ ಪೀಠ

ಸುಪ್ರೀಂ ಕೋರ್ಟ್ ಕೇಳಿದ್ದ ಅಗತ್ಯ ದತ್ತಾಂಶಗಳನ್ನು ಕರ್ನಾಟಕ ಹೈಕೋರ್ಟ್ ಒದಗಿಸುವಲ್ಲಿ ವಿಫಲವಾಗಿದೆ ಎಂಬುದನ್ನು ಪೀಠ ಇದೇ ವೇಳೆ ಗಮನಿಸಿತು.

ಆರು ತಿಂಗಳಲ್ಲಿ ವಿಲೇವಾರಿ ಮಾಡಿರುವ ಮತ್ತು ಬಾಕಿ ಇರುವ ಡಿಕ್ರಿ ಅಮಲ್ಜಾರಿ ಅರ್ಜಿಗಳ ಬಗ್ಗೆ ಮಾಹಿತಿ ಒದಗಿಸುವಂತೆ ಕರ್ನಾಟಕ ಹೈಕೋರ್ಟ್‌ಗೆ ಇನ್ನೊಮ್ಮೆ ಜ್ಞಾಪನೆ ಪತ್ರ ಕಳುಹಿಸುವಂತೆ ಪೀಠ ಸೂಚನೆ ನೀಡಿತು. ಅಲ್ಲದೆ ನಿಗದಿತ ಅವಧಿಯಲ್ಲಿ ಏಕೆ ಮಾಹಿತಿ ನೀಡಿಲ್ಲ ಎಂಬುದರ ಕುರಿತು ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರು ಎರಡು ವಾರಗಳಲ್ಲಿ ವಿವರಣೆ ನೀಡಬೇಕು ಎಂದೂ ಪೀಠ ತಿಳಿಸಿತು.

ಪ್ರಕರಣದ ವಿಚಾರಣೆಯನ್ನು 2026ರ ಏಪ್ರಿಲ್ 10ಕ್ಕೆ ಮುಂದೂಡಿದ ಪೀಠವು, 'ಮುಂದಿನ ವಿಚಾರಣೆ ವೇಳೆಗೆ ಎಲ್ಲ ಹೈಕೋರ್ಟ್‌ಗಳು ಈ ಕುರಿತ ಅರ್ಜಿಗಳ ಸ್ಥಿತಿಗತಿಗೆ ಸಂಬಂಧಿಸಿದ ಪೂರ್ಣ ದತ್ತಾಂಶ ಒದಗಿಸಬೇಕು' ಎಂದು ನಿರ್ದೇಶಿಸಿತು.

ತಮಿಳುನಾಡಿನಲ್ಲಿ ಇಬ್ಬರು ವ್ಯಕ್ತಿಗಳ ನಡುವೆ ಉಂಟಾಗಿದ್ದ ಜಮೀನಿನ ಕುರಿತ ಸಿವಿಲ್ ವಿವಾದದ ವಿಚಾರಣೆ ವೇಳೆ ಪೀಠವು ದೇಶದಾದ್ಯಂತ ಬಾಕಿ ಇರುವ ಡಿಕ್ರಿ ಅಮಲ್ಜಾರಿ ಅರ್ಜಿಗಳ ಬಗ್ಗೆ ಮಾಹಿತಿ ಕೇಳಿತ್ತು.

ಎಸ್‌ಒಪಿ ಮಾರ್ಪಾಡು

ನವದೆಹಲಿ (ಪಿಟಿಐ): ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ (ಡಿಎಲ್‌ಎಸ್‌ಎ) ಮೂಲಕ ರಾಜ್ಯ ಸರ್ಕಾರಗಳು ವಿಚಾರಣಾಧೀನ ಬಡ ಕೈದಿಗಳ ಜಾಮೀನು ಮೊತ್ತ ಪಾವತಿಸುವ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನವನ್ನು (ಎಸ್‌ಒಪಿ) ಸುಪ್ರೀಂ ಕೋರ್ಟ್ ಮಾರ್ಪಡಿಸಿದೆ.

ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಮತ್ತು ಅಮಿಕಸ್ ಕ್ಯೂರಿ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ ಅವರ ಸಲಹೆಯನ್ನು ಸ್ವೀಕರಿಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನೊಳಗೊಂಡ ಪೀಠವು ಈ ಆದೇಶ ಹೊರಡಿಸಿದೆ.

ಸುಪ್ರೀಂ ಕೋರ್ಟ್ ಕಳೆದ ವರ್ಷದ ಫೆ.13ರಂದು ಹೊರಡಿಸಿದ್ದ ತನ್ನ ಹಿಂದಿನ ಎಸ್‌ಒಪಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿತು.

ಜಿಲ್ಲಾಧಿಕಾರಿ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್, ಡಿಎಲ್‌ಎಸ್‌ಎ ಕಾರ್ಯದರ್ಶಿ, ಪೊಲೀಸ್ ವರಿಷ್ಠಾಧಿಕಾರಿ, ಸಂಬಂಧಪಟ್ಟ ಜೈಲಿನ ಅಧೀಕ್ಷಕರು/ಉಪಾಧೀಕ್ಷಕರು ಮತ್ತು ಸಂಬಂಧಪಟ್ಟ ಜೈಲಿನ ಉಸ್ತುವಾರಿ ನ್ಯಾಯಧೀಶರನ್ನು ಒಳಗೊಂಡ ಅಧಿಕಾರ ಸಮಿತಿಯನ್ನು ರಚಿಸಲಾಗುವುದು ಎಂದು ಆದೇಶಿಸಿತು.

ಡಿಎಲ್‌ಎಸ್‌ಎ ಕಾರ್ಯದರ್ಶಿ ಅಧಿಕಾರ ಸಮಿತಿಯ ಸಭೆಗಳ ಸಂಚಾಲಕರಾಗಿರುತ್ತಾರೆ ಎಂದಿದೆ.

ಜಾಮೀನು ಮಂಜೂರು ಆದೇಶ ಹೊರಡಿಸಿದ ಏಳು ದಿನಗಳ ಒಳಗೆ ವಿಚಾರಣಾಧೀನ ಕೈದಿಯನ್ನು ಜೈಲಿನಿಂದ ಬಿಡುಗಡೆ ಮಾಡದಿದ್ದರೆ, ಜೈಲು ಪ್ರಾಧಿಕಾರದ ಕಾರ್ಯದರ್ಶಿ ಡಿಎಲ್‌ಎಸ್‌ಎಗೆ ತಿಳಿಸಬೇಕು ಎಂದು ನ್ಯಾಯಪೀಠವು ಹೇಳಿದೆ.

ಮಾಹಿತಿ ಪಡೆದ ಡಿಎಲ್‌ಎಸ್‌ಎ ಕಾರ್ಯದರ್ಶಿಯು, ವಿಚಾರಣಾಧೀನ ಬಡ ಕೈದಿಯು ತನ್ನ ಉಳಿತಾಯ ಖಾತೆಯಲ್ಲಿ ಹಣ ಹೊಂದಿದ್ದಾರೆಯೇ ಎಂದು ಪರಿಶೀಲಿಸಲಿದ್ದಾರೆ. ಹಣ ಇಲ್ಲದಿದ್ದರೆ ಐದು ದಿನಗಳಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲಿದ್ದಾರೆ ಎಂದಿದೆ.

ಜಿಲ್ಲಾ ಮಟ್ಟದ ಅಧಿಕಾರ ಸಮಿತಿಯು (ಡಿಎಲ್‌ಇಸಿ) ವರದಿ ಸ್ವೀಕರಿಸಿದ ದಿನದಿಂದ ಐದು ದಿನದ ಅವಧಿಯಲ್ಲಿ ಡಿಎಲ್‌ಎಸ್‌ಎ ಶಿಫಾರಸಿನ ಮೇರೆಗೆ ಜಾಮೀನಿಗಾಗಿ ನಿಗದಿ ಪಡಿಸಿದ ಹಣವನ್ನು ಬಿಡುಗಡೆ ಮಾಡಲಿದೆ ಎಂದು ನ್ಯಾಯಾಲಯ ತಿಳಿಸಿದೆ. ಡಿಎಲ್‌ಎಸ್‌ಎ ಶಿಫಾರಸು ಮಾಡಿದ ಪ್ರಕರಣಗಳನ್ನು ಪರಿಗಣಿಸಲು ಡಿಎಲ್‌ಇಸಿ ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಸೋಮವಾರ ಸಭೆ ಸೇರಲಿದೆ.

'ಪತಿಯ ಮನೆಯಲ್ಲಿ ನೆಲಸುವುದು ಪತ್ನಿ ಹಕ್ಕು'

ನವದೆಹಲಿ (ಪಿಟಿಐ): ವಿವಾಹದ ನಂತರ ಮಹಿಳೆಯು ತನ್ನ ಪತಿಯ ಮನೆಯಲ್ಲಿ ನೆಲಸುವ ಹಕ್ಕನ್ನು ಪಡೆಯುತ್ತಾಳೆ. ಪತಿಯನ್ನು ಆತನ ಪೋಷಕರು ಮನೆಯಿಂದ ಹೊರಹಾಕಿದರೂ ಸೊಸೆಯು ಆ ಮನೆಯಲ್ಲಿ ಇರುವ ಹಕ್ಕನ್ನು ಹೊಂದಿರುತ್ತಾಳೆ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಮಹಿಳೆಯ ಅತ್ತೆ ಮತ್ತು ಮಾವ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸಂಜೀವ್ ನರೂಲಾ ವಜಾಗೊಳಿಸಿದರು.

ಪ್ರಕರಣ ಏನು?: 2010ರಲ್ಲಿ ಅರ್ಜಿದಾರರ ಮಗನ ವಿವಾಹವಾಗಿತ್ತು. ಬಳಿಕ ದಂಪತಿ ಮತ್ತು ಅರ್ಜಿದಾರರು ಒಂದೇ ಮನೆಯಲ್ಲಿ ವಾಸವಿದ್ದರು. ಒಂದು ವರ್ಷದ ಬಳಿಕ ಸಂಬಂಧ ಹಳಸಿ, ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಪರಸ್ಪರ ದಾಖಲಿಸಿಕೊಂಡಿದ್ದರು. ಈ ಮಧ್ಯೆ ಅರ್ಜಿದಾರರು, ತಾವು ವಾಸವಿರುವ ನಿವಾಸವು ಸ್ವಯಾರ್ಜಿತ ಎಂದು ಕೋರ್ಟ್ ಮೆಟ್ಟಿಲೇರಿದ್ದರು.

96 ಲಕ್ಷ ನಕಲಿ ಮತದಾರರು–ರಾಜ್ ಠಾಕ್ರೆ

ರಾಜ್ ಠಾಕ್ರೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮತದಾರರ ಪಟ್ಟಿಗೆ 96 ಲಕ್ಷ ನಕಲಿ ಹೆಸರುಗಳನ್ನು ಸೇರಿಸಲಾಗಿದೆ ಎಂದು ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಭಾನುವಾರ ಆರೋಪಿಸಿದರು.

ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸದೆಯೇ ರಾಜ್ಯದಲ್ಲಿ ಸ್ಥಳೀಯ ಚುನಾವಣೆಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ ಎಂದು ಚುನಾವಣಾ ಆಯೋಗಕ್ಕೆ ಸವಾಲು ಹಾಕಿದರು.

ಮಹಾರಾಷ್ಟ್ರ ನವನಿರ್ಮಾಣ ಸೇನೆಯ (ಎಂಎನ್‌ಎಸ್) ಬೂತ್ ಮಟ್ಟದ ಏಜೆಂಟ್‌ಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಮತಗಳ್ಳತನದ ಮೂಲಕ ಚುನಾವಣೆ ನಡೆಸಿದಲ್ಲಿ ಅದು ದೇಶದ ಮತ್ತು ರಾಜ್ಯದ ಮತದಾರರಿಗೆ ಮಾಡುವ ಅತಿದೊಡ್ಡ ಅವಮಾನ ಎಂದರು.

ನಕಲಿ ಮತದಾರರನ್ನು ಪತ್ತೆ ಮಾಡಲು ಮತದಾರರ ಪಟ್ಟಿಯನ್ನು ಪರಿಶೀಲಿಸಿ ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

'ಪ್ರಾದೇಶಿಕ ಪಕ್ಷಗಳನ್ನು 'ಮುಗಿಸಲು' ಮತ ಅಕ್ರಮ ಎಸಗಲಾಗಿದೆ. ಮಹಾರಾಷ್ಟ್ರದ ಮುಂದಿನ ಚುನಾವಣೆಗಾಗಿ 96 ಲಕ್ಷ ನಕಲಿ ಮತದಾರರನ್ನು ಸೇರ್ಪಡೆ ಮಾಡಲಾಗಿದೆ' ಎಂದು ಆರೋಪಿಸಿದರು.

ಮುಂಬೈ ನಗರವೊಂದರಲ್ಲಿಯೇ 8 ಲಕ್ಷದಿಂದ 10 ಲಕ್ಷ ನಕಲಿ ಮತದಾರರ ಹೆಸರನ್ನು ಸೇರ್ಪಡೆ ಮಾಡಲಾಗಿದೆ. ಠಾಣೆ, ಪುಣೆ ಮತ್ತು ನಾಸಿಕ್‌ನಲ್ಲಿ 8ರಿಂದ 8.50 ಲಕ್ಷ ಮತದಾರರನ್ನು ಸೇರಿಸಲಾಗಿದೆ ಎಂದರು.

'ದಲಿತ ವಿದ್ಯಾರ್ಥಿಗೆ ತಾರತಮ್ಯ'

ಪ್ರಜಾವಾಣಿ ವಾರ್ತೆ

ಮುಂಬೈ: ಪುಣೆ ಮೂಲದ ಶಿಕ್ಷಣ ಸಂಸ್ಥೆಯೊಂದು ದಲಿತ ಸಮುದಾಯಕ್ಕೆ ಸೇರಿದ ತನ್ನ ಹಳೆಯ ವಿದ್ಯಾರ್ಥಿಯ ಮೇಲೆ ಜಾತಿ ತಾರತಮ್ಯ ಎಸಗಿದೆ ಎಂಬ ಆರೋಪ ಕೇಳಿಬಂದಿದೆ. ಈ ವಿಷಯವು ಮಹಾರಾಷ್ಟ್ರದ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಪ್ರೇಮವರ್ಧನ್ ಬಿರ್ಹಾಡೆ ಹೆಸರಿನ ವಿದ್ಯಾರ್ಥಿ ಪುಣೆಯ ಮಾಡರ್ನ್ ಕಾಲೇಜ್ ಆಫ್ ಆರ್ಟ್ಸ್‌ನಲ್ಲಿ 2024ರಲ್ಲಿ ಬಿಬಿಎ ಪೂರೈಸಿದ ಬಳಿಕ ಇಂಗ್ಲೆಂಡ್‌ನ ಸಸೆಕ್ಸ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿದ್ದಾರೆ. ಲಂಡನ್‌ನ ಹೀತ್ರೂ ವಿಮಾನ ನಿಲ್ದಾಣದಲ್ಲಿ ಉದ್ಯೋಗ ಸಿಕ್ಕಿದರೂ, ಪುಣೆಯ ಕಾಲೇಜಿನವರು ಸೂಕ್ತ ಸಮಯದಲ್ಲಿ ವ್ಯಾಸಂಗ ದೃಢೀಕರಣ ಪತ್ರ ನೀಡದ ಕಾರಣ ಉದ್ಯೋಗ ಕಳೆದುಕೊಳ್ಳಬೇಕಾಯಿತು ಎಂದು ಬಿರ್ಹಾಡೆ ಆರೋಪಿಸಿದ್ದಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ಮಹಾ ವಿಕಾಸ ಆಘಾಡಿ ಮೈತ್ರಿಕೂಟವು ಆಡಳಿತಾರೂಢ ಮಹಾಯುತಿ ಸರ್ಕಾರದ ವಿರುದ್ಧ ಟೀಕೆ ಮಾಡಿದೆ. ಆದರೆ, ಮಾಡರ್ನ್ ಕಾಲೇಜಿನ ಪ್ರಾಂಶುಪಾಲರಾದ ನಿವೇದಿತಾ ಗಜಾನನ ಏಕಬೋಟೆ ಈ ಆರೋಪ ಅಲ್ಲಗಳೆದಿದ್ದಾರೆ. ವಂಚಿತ್ ಬಹುಜನ ಆಘಾಡಿ ಪಕ್ಷದ ಸ್ಥಾಪಕ, ಮಾಜಿ ಸಂಸದ ಪ್ರಕಾಶ್ ಅಂಬೇಡ್ಕರ್ ಅವರು ಈ ವಿಷಯವನ್ನು ಪ್ರಸ್ತಾಪಿಸಿ ಬಿಜೆಪಿ ವಿರುದ್ಧ ಟೀಕೆ ಮಾಡಿದ್ದಾರೆ.

'ಲಂಡನ್‌ನ ಹೀತ್ರೂ ವಿಮಾನ ನಿಲ್ದಾಣದಲ್ಲಿ ಕಷ್ಟಪಟ್ಟು ಸಂಪಾದಿಸಿದ ಉದ್ಯೋಗವನ್ನು ಬಿರ್ಹಾಡೆ ಕಳೆದುಕೊಳ್ಳಬೇಕಾಯಿತು. ಪುಣೆಯ ಕಾಲೇಜು ಅವರ ಶೈಕ್ಷಣಿಕ ದೃಢೀಕರಣ ಪತ್ರ ನೀಡಲು ನಿರಾಕರಿಸಿದೆ. ಬಿರ್ಹಾಡೆ ಅವರೊಬ್ಬ ದಲಿತ ಎಂಬುದೇ ಇದಕ್ಕೆ ಕಾರಣ' ಎಂದು ಪ್ರಕಾಶ್ ಆರೋಪಿಸಿದ್ದಾರೆ.

'ಕಾಲೇಜಿನ ಪ್ರಾಂಶುಪಾಲರಾದ ಏಕಬೋಟೆ, ಬಿಜೆಪಿಯ ಯುವ ಸಂಘಟನೆ ಭಾರತೀಯ ಜನತಾ ಯುವ ಮೋರ್ಚಾದ ಮಹಾರಾಷ್ಟ್ರ ಘಟಕದ ಉಪಾಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಮನುವಾದಿ ಬಿಜೆಪಿಯ ಪರ ಕೆಲಸ ಮಾಡುವ ಅವರು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವಿದ್ಯಾರ್ಥಿಗಳ ವಿರುದ್ಧ ಯಾವ ರೀತಿ ಜಾತಿ ತಾರತಮ್ಯ ತೋರಿರಬಹುದು ಎಂಬುದನ್ನು ನೀವೇ ಊಹಿಸಬಹುದು' ಎಂದಿದ್ದಾರೆ.

ಅಶಿಸ್ತಿನ ವರ್ತನೆ: ಪ್ರಾಂಶುಪಾಲೆ

'ವಿದ್ಯಾರ್ಥಿಗೆ ಈ ಹಿಂದೆ ಕಾಲೇಜು ಆಡಳಿತವು ಮೂರು ಸಲ ಶಿಫಾರಸು ಪತ್ರ (ಎಲ್‌ಒಆರ್) ಮತ್ತು ಒಮ್ಮೆ ವ್ಯಾಸಂಗ ದೃಢೀಕರಣ ಪ್ರಮಾಣಪತ್ರ ನೀಡಿದೆ. ಈಚೆಗೆ ಅವನು ಮತ್ತೊಮ್ಮೆ ಕಾಲೇಜನ್ನು ಸಂಪರ್ಕಿಸಿ, ಉದ್ಯೋಗದ ಉದ್ದೇಶಕ್ಕಾಗಿ ನನ್ನ ಸಹಿ ಇರುವ ವ್ಯಾಸಂಗ ದೃಢೀಕರಣ ಪತ್ರ ನೀಡುವಂತೆ ಮನವಿ ಮಾಡಿದ್ದ. ವಿದ್ಯಾರ್ಥಿಯಾಗಿದ್ದ ಅವಧಿಯಲ್ಲಿ ಅವನ ಅತೃಪ್ತಿಕರ ನಡವಳಿಕೆ ಮತ್ತು ಅಶಿಸ್ತಿನ ವರ್ತನೆಯನ್ನು ಗಮನಿಸಿ ಸಂಸ್ಥೆಯ ನಿಯಮದ ಪ್ರಕಾರ ಯಾವುದೇ ಪತ್ರ ನೀಡದಿರಲು ನಿರ್ಧರಿಸಿತು' ಎಂದು ಪ್ರಾಂಶುಪಾಲೆ ನಿವೇದಿತಾ ಗಜಾನನ ಏಕಬೋಟೆ ಹೇಳಿದ್ದಾರೆ.

ಲಡಾಖ್ ಪ್ರತಿನಿಧಿಗಳೊಂದಿಗೆ 22ರಂದು ಸಭೆ

ಲೇಹ್ (ಪಿಟಿಐ): 'ಅಕ್ಟೋಬರ್ 22ರಂದು ತನ್ನ ಉಪಸಮಿತಿ ಸಭೆಯಲ್ಲಿ ಭಾಗವಹಿಸುವಂತೆ ಗೃಹ ಸಚಿವಾಲಯವು ನೀಡಿದ ಆಹ್ವಾನವನ್ನು ಲಡಾಖ್‌ನ ಪ್ರತಿನಿಧಿಗಳು ಸ್ವೀಕರಿಸಿದ್ದಾರೆ' ಎಂದು ಲೇಹ್ ಅಪೆಕ್ಸ್ ಬಾಡಿ ಸಹ ಅಧ್ಯಕ್ಷ ಚೆರಿಂಗ್ ದೋರ್ಜೆ ಲಕ್ರೂಕ್ ತಿಳಿಸಿದ್ದಾರೆ.

ಆ ಮೂಲಕ ಕೇಂದ್ರದೊಂದಿಗಿನ ಮಾತುಕತೆಗೆ ಸಂಬಂಧಿಸಿದಂತೆ ತಿಂಗಳಿನಿಂದ ನಡೆಯುತ್ತಿದ್ದ ಬಿಕ್ಕಟ್ಟು ಕೊನೆಗೊಂಡಿದೆ.

'ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ), ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್‌ನ (ಕೆಡಿಎ) ತಲಾ ಮೂವರು ಪ್ರತಿನಿಧಿಗಳು, ಲಡಾಖ್ ಸಂಸದ ಮೊಹಮ್ಮದ್ ಹನೀಫಾ ಹಾಗೂ ಅವರ ವಕೀಲರು ಭಾಗವಹಿಸಲಿದ್ದಾರೆ. ಪ್ರತ್ಯೇಕ ರಾಜ್ಯದ ಸ್ಥಾನಮಾನ ನೀಡಬೇಕು, ಕೇಂದ್ರಾಡಳಿತದ ಹಿತರಕ್ಷಿಸುವ ನಿಟ್ಟಿನಲ್ಲಿ ಸಂವಿಧಾನದ 6ನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ಪ್ರಾಥಮಿಕ ಬೇಡಿಕೆಗೆ ಬದ್ಧವಾಗಿರಲಿದ್ದೇವೆ' ಎಂದು ಲಕ್ರೂಕ್ ಹೇಳಿದ್ದಾರೆ.

ಕೆಮ್ಮಿನ ಸಿರಪ್ ವಶ

ಸೋನ್‌ಭಂದ್ರ (ಪಿಟಿಐ): ಪೊಲೀಸ್ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳನ್ನು ಒಳಗೊಂಡ ಜಂಟಿ ತಂಡವು ₹3 ಕೋಟಿ ಮೌಲ್ಯದ ಕೆಮ್ಮಿನ ನಿಷೇಧಿತ ಸಿರಪ್ ಅನ್ನು ವಶಕ್ಕೆ ಪಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅನಿಲ್ ಕುಮಾರ್ ಅವರು, 'ಗಜಿಯಾಬಾದ್‌ನಿಂದ ಜಾರ್ಖಂಡ್‌ಗೆ ಸಾಗಿಸಲಾಗುತ್ತಿದ್ದ 1.19 ಲಕ್ಷ ಬಾಟಲಿ ನಿಷೇಧಿತ ಸಿರಪ್ ಅನ್ನು ಉತ್ತರ ಪ್ರದೇಶದ ಸೋನ್‌ಭಂದ್ರ ಜಿಲ್ಲೆಯ ಚುರ್ಕ್ ಸಮೀಪ ಶನಿವಾರ ಸಂಜೆ ವಶಕ್ಕೆ ಪಡೆಯಲಾಯಿತು' ಎಂದು ತಿಳಿಸಿದರು.

ಟಿಕೆಟ್ ಹಿಂಪಡೆದ ಜೆಡಿಯು

ಪಟ್ನಾ (ಪಿಟಿಐ): ಬಿಹಾರದ ಅಮೌರ್ ವಿಧಾನಸಭಾ ಕ್ಷೇತ್ರದ ಜೆಡಿಯು ಅಭ್ಯರ್ಥಿಯಾಗಿ ಘೋಷಿಸಲಾಗಿದ್ದ ಮಾಜಿ ಸಂಸದ ಸಬಿರ್ ಅಲಿ ಅವರಿಗೆ ಟಿಕೆಟ್ ಅನ್ನು ನಿರಾಕರಿಸಲಾಗಿದೆ. ಈಗಾಗಲೇ ಆ ಕ್ಷೇತ್ರದಿಂದ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಸಾಬಾ ಜಾಫರ್ ನಾಮಪತ್ರ ಸಲ್ಲಿಸಿದ್ದಾರೆ.

2014ರಲ್ಲಿ ಪಕ್ಷದಿಂದ ಉಚ್ಚಾಟನೆಯಾಗಿದ್ದ ಅಲಿ ಅವರನ್ನು ಅಮೌರ್ ಕ್ಷೇತ್ರದ ಅಭ್ಯರ್ಥಿಯಾಗಿ ಶನಿವಾರ ಜೆಡಿಯು ಘೋಷಿಸಿತ್ತು. ಪಕ್ಷದ ಈ ಹಠಾತ್ ನಿರ್ಧಾರವು ಕಾರ್ಯಕರ್ತರು ಮತ್ತು ನಾಯಕರನ್ನು ಅಚ್ಚರಿಗೊಳಿಸಿತ್ತು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಾಜಿತ ಅಭ್ಯರ್ಥಿ ಮತ್ತು 2010ರಲ್ಲಿ ಬಿಜೆಪಿಯಿಂದ ಆರಿಸಿ ಬಂದಿದ್ದ ಜಾಫರ್ ಅವರ ಹೆಸರು ಕಳೆದ ವಾರ ಜೆಡಿಯು ಪ್ರಕಟಿಸಿದ ಅಭ್ಯರ್ಥಿಗಳ ಪಟ್ಟಿಯಲ್ಲಿತ್ತು.

'ನಮ್ಮಲ್ಲಿ ಯಾವುದೇ ಗೊಂದಲಗಳಿಲ್ಲ. ಅಲಿ ಅವರು ಪಕ್ಷಕ್ಕೆ ಮರಳಿರುವುದರಿಂದ ಸೀಮಾಂಚಲ ಪ್ರದೇಶದಲ್ಲಿ ಪಕ್ಷದ ಬಲ ಮತ್ತಷ್ಟು ಹಿಗ್ಗಿದಂತಾಗಿದೆ. ನಾನು ಶನಿವಾರವೇ ನಾಮಪತ್ರ ಸಲ್ಲಿಸಿದ್ದೇನೆ. ಅದನ್ನು ಹಿಂಪಡೆಯುವಂತೆ ಯಾರೂ ಕೇಳಿಲ್ಲ' ಎಂದು ಜಾಫರ್ ಪ್ರತಿಕ್ರಿಯಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅಲಿ, 'ಪಕ್ಷವೇ ನನ್ನನ್ನು ಅಭ್ಯರ್ಥಿ ಎಂದು ಘೋಷಿಸಿದ್ದು ಸತ್ಯ. ಅದು ಪಕ್ಷದ ಅಧಿಕೃತ ವೇದಿಕೆಗಳಲ್ಲಿ ಬಿತ್ತರವಾಗಿದೆ. ಈ ಬೆಳವಣಿಗೆಗಳನ್ನು ನಾನೇನು ಗಂಭೀರವಾಗಿ ತೆಗೆದುಕೊಂಡಿಲ್ಲ' ಎಂದರು.

ಪಟಾಕಿ ಸ್ಫೋಟ:4 ಸಾವು

ಚೆನ್ನೈ (ಪಿಟಿಐ): ತಂದುರೈನ ಮನೆಯೊಂದರಲ್ಲಿ ಸಂಗ್ರಹಿಸಿಟ್ಟಿದ್ದ ಸ್ಥಳೀಯವಾಗಿ ತಯಾರಿಸಿದ ಪಟಾಕಿಗಳು ಭಾನುವಾರ ಸ್ಫೋಟಗೊಂಡು ನಾಲ್ವರು ಮೃತಪಟ್ಟಿದ್ದಾರೆ ಎಂದು ಆವಡಿ ಪೊಲೀಸರು ತಿಳಿಸಿದ್ದಾರೆ.

ಸ್ಫೋಟದಿಂದಾಗಿ ಮನೆಯ ಆವರಣದ ಹಲವಾರು ಭಾಗಗಳು ಹಾನಿಗೊಳಗಾಗಿವೆ ಎಂದು ಅವರು ಹೇಳಿದ್ದು, ಅಗ್ನಿಶಾಮಕ ಮತ್ತು ರಕ್ಷಣಾ ಸಿಬ್ಬಂದಿ ಬೆಂಕಿ ನಂದಿಸಿದರು ಎಂದು ತಿಳಿಸಿದ್ದಾರೆ.

ಮನೆಯನ್ನು ಪಟಾಕಿ ಸಂಗ್ರಹ ಕೇಂದ್ರ ಮತ್ತು ಚಿಲ್ಲರೆ ಮಾರಾಟ ಸ್ಥಳವನ್ನಾಗಿ ಬಳಸಲಾಗುತ್ತಿತ್ತು. ಸ್ಫೋಟಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯಲು ತನಿಖೆ ನಡೆಯುತ್ತಿದೆ ಎಂದು ಆವಡಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆಸ್ಟ್ರೇಲಿಯಾಕ್ಕೆ ಸುಲಭ ಗೆಲುವು

ಮೊದಲ ಏಕದಿನ ಪಂದ್ಯದಲ್ಲಿ ನಡೆಯದ 'ರೋ–ಕೊ' ಆಟ • ಮಿಂಚಿದ ಮಾರ್ಷ್

ಪರ್ತ್ (ಪಿಟಿಐ): ಭಾರತ ತಂಡಕ್ಕೆ ಮರಳಿದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಇಬ್ಬರೂ ಒಟ್ಟು 22 ಎಸೆತಗಳನ್ನು ಆಡಿದರಷ್ಟೇ. ಭಾನುವಾರ ಮಳೆಯಿಂದ ಓವರುಗಳ ಕಡಿತಗೊಂಡ ಮೊದಲ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಏಳು ವಿಕೆಟ್‌ಗಳಿಂದ ಜಯಗಳಿಸಿದ್ದು, ಈ ದಿಗ್ಗಜರ ವೈಫಲ್ಯ ಪ್ರಮುಖವಾಗಿ ಕಾಣಿಸಿತು.

ಮುಖ್ಯಾಂಶಗಳು

- 500ನೇ ಅಂತರ ರಾಷ್ಟ್ರೀಯ ಪಂದ್ಯ ಆಡಿದ ರೋಹಿತ್ ಶರ್ಮಾ
- 2025ರಲ್ಲಿ ಭಾರತಕ್ಕೆ ಏಕದಿನ ಪಂದ್ಯಗಳಲ್ಲಿ ಮೊದಲ ಸೋಲು
- ಸತತ ಎಂಟು ಪಂದ್ಯಗಳಲ್ಲಿ ಜಯ ಗಳಿಸಿದ್ದ ಭಾರತ ತಂಡ

ಮಳೆಯಿಂದಾಗಿ ಪಂದ್ಯಕ್ಕೆ ಕೆಲವು ಬಾರಿ ಅಡಚಣೆಯಾಯಿತು. ಅಂತಿಮವಾಗಿ ತಲಾ 26 ಓವರುಗಳಿಗೆ ಪಂದ್ಯ ಇಳಿಸಲಾಯಿತು. ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಭಾರತ 9 ವಿಕೆಟ್‌ಗೆ 136 ರನ್ ಗಳಿಸಿತು. ಡಕ್ವರ್ಥ್ ಲೂಯಿಸ್ ನಿಯಮದ ಆಧಾರದಲ್ಲಿ ಆಸ್ಟ್ರೇಲಿಯಾ ತಂಡದ ಗುರಿಯನ್ನು 26 ಓವರುಗಳಲ್ಲಿ 131 ರನ್‌ಗಳಿಗೆ ನಿಗದಿಗೊಳಿಸಲಾಯಿತು. ಆತಿಥೇಯರು 21.1 ಓವರುಗಳಲ್ಲಿ 3 ವಿಕೆಟ್‌ಗೆ ಈ ಮೊತ್ತ ಗಳಿಸಿ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಪಡೆದರು.

ಈ ಹಿಂದೆ ಭಾರತವನ್ನು ಕಾಡಿರುವ ಟ್ರಾವಿಸ್ ಹೆಡ್ (8) ಬೇಗನೆ ಔಟಾದರು. ಅರ್ಷದೀಪ್ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿ ಡೀಪ್ ಥರ್ಡ್ ಮ್ಯಾನ್‌ಗೆ ಕ್ಯಾಚಿತ್ತರು. ಮ್ಯಾಥ್ಯೂ ಶಾರ್ಟ್ (8) ಕೂಡ ವಿಫಲರಾದರು.

ಆದರೆ ನಾಯಕ ಮಿಚೆಲ್ ಮಾರ್ಷ್ (ಅಜೇಯ 46, 52ಎ) ಬಾಹುಬಲ ಮೆರೆದರು. ಜೋಶ್ ಫಿಲಿಪ್ (37, 29ಎ) ಜೊತೆ ಮೂರನೇ ವಿಕೆಟ್‌ಗೆ 55 ರನ್ ಜೊತೆಯಾಟವಾಡಿ ಆಸ್ಟ್ರೇಲಿಯಾವನ್ನು ನೂರರ ಹೊಸ್ತಿಲಿಗೆ ತಲುಪಿಸಿದರು. ಪದಾರ್ಪಣೆಗೈದ ಮ್ಯಾಥ್ಯೂ ರೆನ್‌ಶಾ (ಔಟಾಗದೇ 21, 24ಎ) ಜೊತೆಗೂಡಿ ಗೆಲುವಿನ ಔಪಚಾರವನ್ನೂ ಮಾರ್ಷ್ ಪೂರೈಸಿದರು.

ಆಸ್ಟ್ರೇಲಿಯಾ ಬೌಲರ್‌ಗಳು ತೋರಿದ ನಿಯಂತ್ರಣ, ಅರ್ಷದೀಪ್, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ ಬೌಲಿಂಗ್‌ನಲ್ಲಿ ಕಾಣಲಿಲ್ಲ. ಮಾರ್ಷ್ ಅಂತೂ ಈ ಮೂವರ ಬೌಲಿಂಗ್‌ನಲ್ಲೂ ಒಂದೊಂದು ಸಿಕ್ಸರ್ ಎತ್ತಿದರು.

ಅಬ್ಬರಿಸದ ರೊ–ಕೊ: ಮಳೆಯಿಂದಾಗಿ ಆಗಾಗ ಪಂದ್ಯ ನಿಲುಗಡೆ, ಆಸ್ಟ್ರೇಲಿಯಾದ ಬಿರುವೇಗದ ದಾಳಿಯೆದುರು ಭಾರತದ ಆಟ ಸಪ್ಪೆಯೆನಿಸಿತು. ಮಳೆಯಾಗುವ ಮೊದಲೇ ಆಸ್ಟ್ರೇಲಿಯಾದ ವೇಗದ ಬೌಲರ್‌ಗಳು ಒಪ್ಟಸ್ ಕ್ರೀಡಾಂಗಣದಲ್ಲಿ ಭಾರತದ ಬ್ಯಾಟರ್‌ಗಳ ಮೇಲೆರಗಿದ್ದರು.

ಭಾರತಕ್ಕೆ 500ನೇ ಪಂದ್ಯ ಆಡಿದ ರೋಹಿತ್ ಜೊತೆ ನೂತನ ನಾಯಕ ಗಿಲ್ ಅವರು ಮೈದಾನಕ್ಕಿಳಿದಾಗ ಹರ್ಷೋದ್ಗಾರಗಳು ಮೊಳಗಿದವು. ಆದರೆ ರೋಹಿತ್ ಅವರು 14 ಎಸೆತಗಳನ್ನಷ್ಟೇ ಆಡಿದರು. ಒಂದು ನೇರ ಡ್ರೈವ್ ಮೂಲಕ ಬೌಂಡರ ಗಿಟ್ಟಿಸಿದರು. ಆದರೆ ಹೇಜಲ್‌ವುಡ್ ಬೌಲಿಂಗ್‌ನಲ್ಲಿ ಬೌನ್ಸ್ ಅಂದಾಜಿಸುವಲ್ಲಿ ಎಡವಿದ ಮುಂಬೈನ ಆಟಗಾರ ಎರಡನೇ ಸ್ಲಿಪ್‌ನಲ್ಲಿ ಕ್ಯಾಚಿತ್ತರು.

ಹರ್ಷೋದ್ಗಾರಗಳ ನಡುವೆ ಆಡಲಿಳಿದ ಕೊಹ್ಲಿ ಎದುರಿಸಿದ್ದು ಎಂಟು ಎಸೆತಗಳನ್ನು ಮಾತ್ರ. ಆಸ್ಟ್ರೇಲಿಯಾ ವಿರುದ್ಧವೂ ಸೇರಿದಂತೆ ಹಲವು ಸ್ಮರಣೀಯ ಇನಿಂಗ್ಸ್ ಆಡಿರುವ ಕೊಹ್ಲಿ ಅವರು ಮಿಚೆಲ್ ಸ್ಟಾರ್ಕ್ ಬೌಲಿಂಗ್‌ನಲ್ಲಿ ಡ್ರೈವ್ ಯತ್ನದಲ್ಲಿ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಕೂಪರ್ ಕಾನೊಲಿ ಹಿಡಿದ ಅಮೋಘ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ಇದು ಆಸ್ಟ್ರೇಲಿಯಾದಲ್ಲಿ ಕೊಹ್ಲಿ ಗಳಿಸಿದ ಮೊದಲ 'ಡಕ್'.

ನಾಲ್ಕು ರನ್‌ಗಳ ತರುವಾಯ ಗಿಲ್, ನಥಾನ್ ಎಲಿಸ್ ಬೌಲಿಂಗ್‌ನಲ್ಲಿ ಫ್ಲಿಕ್‌ಗೆ ಯತ್ನಿಸಿ ವಿಕೆಟ್‌ಕೀಪರ್ ಫಿಲಿಪ್ ಲೆಗ್‌ಸೈಡ್‌ನತ್ತ ಜಿಗಿದು ಪಡೆದ ಕ್ಯಾಚಿಗೆ ಔಟಾದರು. ಉಪ ನಾಯಕ ಶ್ರೇಯಸ್ ಅಯ್ಯರ್ ಇದೇ ಮಾದರಿಯಲ್ಲಿ ನಿರ್ಗಮಿಸಿದರು.

ಅಕ್ಷರ್ ಪಟೇಲ್ (31, 38ಎ) ಮತ್ತು ಕೆ.ಎಲ್.ರಾಹುಲ್ (38, 31ಎ) ನಡುವಣ ಐದನೇ ವಿಕೆಟ್‌ಗೆ 39 ರನ್‌ಗಳು ಬಂದವು. ಸ್ಪಿನ್ನರ್ ಮ್ಯಾಥ್ಯೂ ಕುನೆಮನ್ ಈ ಜೊತೆಯಾಟ ಮುರಿದರು. ರಾಹುಲ್ ವಿಶ್ವಾಸದಿಂದ ಆಡಿದರು. ಎಲಿಸ್ ಬೌಲಿಂಗ್‌ನಲ್ಲಿ ಸತತ ಬೌಂಡರಿಗಳನ್ನು ಹೊಡೆದರು. ಶಾರ್ಟ್ ಬೌಲಿಂಗ್‌ನಲ್ಲಿ ಸತತ ಸಿಕ್ಸರ್‌ಗಳನ್ನು ಎತ್ತಿದರು. ರಾಹುಲ್ ಮತ್ತು ವಾಷಿಂಗ್ಟನ್ ಸುಂದರ್ ನಡುವೆ ಆರನೇ ವಿಕೆಟ್‌ಗೆ 31 ರನ್‌ಗಳು ಬಂದವು. ಆದರೆ ನಂತರ ಮತ್ತಷ್ಟು ವಿಕೆಟ್‌ಗಳು ಉರುಳಿದ್ದರಿಂದ ರನ್‌ವೇಗ ತಗ್ಗಿತು.

ಆಸ್ಟ್ರೇಲಿಯಾದ ಮಿಚೆಲ್ ಮಾರ್ಷ್ ಹೊಡೆತವೊಂದನ್ನು ಪ್ರಯೋಗಿಸಲು ಮುಂದಾಗಿದ್ದು ಹೀಗೆ.... ಎಪಿ/ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ: 9ಕ್ಕೆ 136 (26 ಓವರ್‌ಗಳಲ್ಲಿ)

ರೋಹಿತ್ ಸಿ ರೆನ್‌ಶಾ ಬಿ ಹೇಜಲ್‌ವುಡ್ 8 (14ಎ, 4x1)
ಗಿಲ್ ಸಿ ಫಿಲಿಪ್ ಬಿ ಎಲಿಸ್ 10 (18ಎ, 4x2)
ಕೊಹ್ಲಿ ಸಿ ಕಾನೊಲಿ ಬಿ ಸ್ಟಾರ್ಕ್ 0 (8ಎ)
ಶ್ರೇಯಸ್ ಸಿ ಫಿಲಿಪ್ ಬಿ ಹೇಜಲ್‌ವುಡ್ 11 (24ಎ, 4x1)
ಅಕ್ಷರ್ ಸಿ ರೆನ್‌ಶಾ ಬಿ ಕುನ್ಹೆಮನ್ 31 (39ಎ, 4x3)
ರಾಹುಲ್ ಸಿ ರೆನ್‌ಶಾ ಬಿ ಓವೆನ್ 38 (31ಎ, 4x2, 6x2)
ವಾಷಿಂಗ್ಟನ್ ಬಿ ಕುನ್ಹೆಮನ್ 10 (10ಎ, 4x1)
ನಿತೀಶ್ ಕುಮಾರ್ ರೆಡ್ಡಿ ಔಟಾಗದೇ 19 (10ಎ, 6x2)
ಹರ್ಷಿತ್ ಸಿ ಫಿಲಿಪ್ ಬಿ ಓವೆನ್ 1 (2ಎ)
ಅರ್ಷದೀಪ್ ರನೌಟ್ (ಎಲಿಸ್/ಕುನ್ಹೆಮನ್) 0 (0ಎ)
ಮೊಹಮ್ಮದ್ ಸಿರಾಜ್ ಔಟಾಗದೇ 0 (0)
ಇತರೆ: 8 (ಲೆಗ್‌ಬೈ 2, ವೈಡ್ 6)
ವಿಕೆಟ್ ಪತನ: 1-13 (ರೋಹಿತ್ ಶರ್ಮಾ, 3.4), 2-21 (ವಿರಾಟ್ ಕೊಹ್ಲಿ, 6.1), 3-25 (ಶುಭಮನ್ ಗಿಲ್, 8.1), 4-45 (ಶ್ರೇಯಸ್ ಅಯ್ಯರ್, 13.2), 5-84 (ಅಕ್ಷರ್ ಪಟೇಲ್, 19.6), 6-115 (ವಾಷಿಂಗ್ಟನ್ ಸುಂದರ್, 23.3), 7-121 (ಕೆ.ಎಲ್. ರಾಹುಲ್, 24.3), 8-123 (ಹರ್ಷಿತ್ ರಾಣಾ, 24.6), 9-124 (ಅರ್ಷದೀಪ್ ಸಿಂಗ್, 25.2)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 6–1–22–1, ಜೋಶ್ ಹೇಜಲ್‌ವುಡ್ 7–2–20–2, ನಥಾನ್ ಎಲಿಸ್ 5–1–29–1, ಮಿಚೆಲ್ ಓವೆನ್ 3–0–20–2, ಮ್ಯಾಥ್ಯೂ ಕುನ್ಹೆಮನ್ 4–0–26–2, ಮ್ಯಾಥ್ಯೂ ಶಾರ್ಟ್ 1–0–17–0

ಆಸ್ಟ್ರೇಲಿಯಾ: 3ಕ್ಕೆ 131 (21.1 ಓವರ್‌ಗಳಲ್ಲಿ) (ಗುರಿ 131)

ಮಿಚೆಲ್ ಮಾರ್ಷ್ ಔಟಾಗದೇ 46 (52ಎ, 4x2, 6x3)
ಹೆಡ್ ಸಿ ರಾಣಾ ಬಿ ಅರ್ಷದೀಪ್ 8 (5ಎ, 4x2)
ಶಾರ್ಟ್ ಸಿ ಶರ್ಮಾ ಬಿ ಅಕ್ಷರ್ 8 (17ಎ, 4x1)
ಫಿಲಿಪ್ ಸಿ ಅರ್ಷದೀಪ್ ಬಿ ವಾಷಿಂಗ್ಟನ್ 37 (29ಎ, 4x3, 6x2)
ಮ್ಯಾಥ್ಯೂ ರೆನ್‌ಶಾ ಔಟಾಗದೇ 21 (14ಎ, 4x1, 6x1)
ಇತರೆ: 11 (ಲೆಗ್‌ಬೈ 3, ವೈಡ್ 8)
ವಿಕೆಟ್ ಪತನ: 1-10 (ಟ್ರಾವಿಸ್ ಹೆಡ್, 1.2), 2-44 (ಮ್ಯಾಥ್ಯೂ ಶಾರ್ಟ್, 7.5), 3-99 (ಜೋಶ್ ಫಿಲಿಪ್, 15.2)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–1–21–0, ಅರ್ಷದೀಪ್ ಸಿಂಗ್ 5–0–31–1, ಹರ್ಷಿತ್ ರಾಣಾ 4–0–27–0, ಅಕ್ಷರ್ ಪಟೇಲ್ 4–0–19–1, ನಿತೀಶ್ ಕುಮಾರ್ ರೆಡ್ಡಿ 2.1–0–16–0, ವಾಷಿಂಗ್ಟನ್ ಸುಂದರ್ 2–0–14–1
ಪಂದ್ಯದ ಆಟಗಾರ: ಮಿಚೆಲ್ ಮಾರ್ಷ್

ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ ಏಳು ವಿಕೆಟ್‌ಗಳ ಜಯ, ಸರಣಿ 1–0 ಮುನ್ನಡೆ

ಫಲ ನೀಡದ ಮಂದಾನ, ಕೌರ್ ಅರ್ಧಶತಕಗಳ ಆಟ

ಹೀದರ್ ಶತಕ: ಸೆಮಿಗೆ ಇಂಗ್ಲೆಂಡ್

ಇಂದೋರ್ (ಪಿಟಿಐ): ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಲಯಕ್ಕೆ ಮರಳಿ ಅರ್ಧ ಶತಕಗಳನ್ನು ಬಾರಿಸಿದರೂ ಭಾರತ ಗೆಲ್ಲಲಾಗಲಿಲ್ಲ. ಭಾನುವಾರ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಗೆಲುವಿನ ಹಾದಿಯಲ್ಲಿದ್ದ ಆತಿಥೇಯರು ಕೊನೆಗಳಿಗೆಯಲ್ಲಿ ಇಂಗ್ಲೆಂಡ್ ಬೌಲರ್‌ಗಳ ಒತ್ತಡಕ್ಕೆ ಸಿಲುಕಿ ನಾಲ್ಕು ರನ್‌ಗಳಿಂದ ಸೋತರು.

ಇಂದಿನ ಪಂದ್ಯ
ಶ್ರೀಲಂಕಾ Vs ಬಾಂಗ್ಲಾದೇಶ (ಮಧ್ಯಾಹ್ನ 3)
ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಇಂಗ್ಲೆಂಡ್ ಮೂರನೇ ಕ್ರಮಾಂಕದ ಆಟಗಾರ್ತಿ ಹೀದರ್ ನೈಟ್ (109, 91ಎ, 4x15, 6x1) ಅವರ ಅಧಿಕಾರಯುತ ಶತಕದ ನೆರವಿನಿಂದ 8 ವಿಕೆಟ್‌ಗೆ 288 ರನ್ ಗಳಿಸಿತು. ಉತ್ತರವಾಗಿ ಭಾರತ 6 ವಿಕೆಟ್‌ಗೆ 284 ರನ್ ಗಳಿಸಿ ಹೋರಾಟ ಮುಗಿಸಿ, ಸತತ ಮೂರನೇ ಸೋಲು ಕಂಡಿತು.

ಒಂದು ಹಂತದಲ್ಲಿ ಉಪ ನಾಯಕಿ ಮಂದಾನ (88, 94ಎ) ಮತ್ತು ಹರ್ಮನ್‌ಪ್ರೀತ್ (70, 70ಎ) ಅವರ ಆಟದಿಂದ ಭಾರತ ಆರಂಭಿಕ ಕುಸಿತದಿಂದ ಚೇತರಿಸಿ ಉತ್ತಮ ಸ್ಥಿತಿಗೆ ತಲುಪಿತ್ತು. ಕೊನೆಯ ಐದು ಓವರುಗಳಿದ್ದಾಗ (4 ವಿಕೆಟ್‌ಗೆ 253 ರನ್) ಗೆಲುವಿಗೆ 36 ರನ್‌ಗಳಷ್ಟೇ ಬೇಕಿದ್ದವು. ಆದರೆ, ಈ ಹಂತದಲ್ಲಿ ಇಂಗ್ಲೆಂಡ್ ಚೇತರಿಸಿಕೊಂಡಿತು.

ರಿಚಾ ಘೋಷ್ (8, 10ಎ) 46ನೇ ಓವರಿನಲ್ಲಿ ಮತ್ತು ದೀಪ್ತಿ ಶರ್ಮಾ (50, 57ಎ) 47ನೇ ಓವರಿನಲ್ಲಿ ನಿರ್ಗಮಿಸುವುದರೊಂದಿಗೆ ಆಂಗ್ಲರ ಬಳಗಕ್ಕೆ ಮೇಲುಗೈ ದೊರೆಯಿತು. ಈ ಮೊದಲು ಹರ್ಮನ್‌ಪ್ರೀತ್ ಅವರ ಮಹತ್ವದ ವಿಕೆಟ್ ಪಡೆದಿದ್ದ ಇಂಗ್ಲೆಂಡ್ ನಾಯಕಿ ನಾಟ್ ಶಿವರ್ ಬ್ರಂಟ್ (47ಕ್ಕೆ2), ರಿಚಾ ಘೋಷ್ ಅವರ ವಿಕೆಟ್ ಸಹ ಪಡೆದರು.

ಪ್ರತಿಕಾ ರಾವಲ್ ಅವರನ್ನು ಭಾರತ ಮೂರನೇ ಓವರ್‌ನಲ್ಲೇ ಕಳೆದುಕೊಂಡಿತು. ಐದು ಬೌಂಡರಿಗಳೊಡನೆ ಬಿರುಸಿನ ಆಟಕ್ಕೆ ಮುಂದಾಗಿದ್ದ ಹರ್ಲೀನ್ ಡಿಯೋಲ್ (24) ಅವರು ತಂಡದ ಮೊತ್ತ 42 ರನ್ ಆಗಿದ್ದಾಗ ನಿರ್ಗಮಿಸಿದರು. ಈ ವಿಶ್ವಕಪ್‌ನಲ್ಲಿ ತಲಾ ಒಂದು ಅರ್ಧಶತಕ ಬಾರಿಸಿದ್ದ ಮಂದಾನ ಮತ್ತು ಕೌರ್ ಈ ಹಂತದಲ್ಲಿ ಚೇತರಿಕೆ ನೀಡಿ, ಮೂರನೇ ವಿಕೆಟ್‌ಗೆ 125 ರನ್ ಸೇರಿಸಿದರು. ಆದರೆ, ಈ ಅಡಿಪಾಯದ ಮೇಲೆ ಗೆಲುವಿನ ಸೌಧ ಕಟ್ಟಲು ಉಳಿದ ಆಟಗಾರ್ತಿಯರಿಗೆ ಸಾಧ್ಯವಾಗಲಿಲ್ಲ.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಇದಕ್ಕೆ ಮೊದಲು, ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಇಂಗ್ಲೆಂಡ್ ತಂಡಕ್ಕೆ, 300ನೇ ಪಂದ್ಯ ಆಡಿದ ಹೀದರ್ ಶತಕದ ಮೂಲಕ ಆಸರೆಯಾದರು. ಅರ್ಧ ಶತಕ ಬಾರಿಸಿದ ಆಮಿ ಜೋನ್ಸ್ (56, 68ಎ, 4X8) ಜೊತೆ ಎರಡನೇ ವಿಕೆಟ್‌ಗೆ 25 ರನ್ ಸೇರಿಸಿದ ನೈಟ್, ಮೂರನೇ ವಿಕೆಟ್‌ಗೆ ಶಿವರ್ ಬ್ರಂಟ್ ಜೊತೆ ಲಗುಬಗನೇ 113 ರನ್ ಸೇರಿಸಿದರು. ಆಗ ಮೊತ್ತ 38.5 ಓವರುಗಳಲ್ಲಿ 211. ಇದು ನೈಟ್ ಅವರಿಗೆ ಏಕದಿನ ಪಂದ್ಯಗಳಲ್ಲಿ ಮೂರನೇ ಶತಕ.

ಈ ಹಂತದಲ್ಲಿ ಇಂಗ್ಲೆಂಡ್ 300 ರನ್‌ಗಳ ಗಡಿ ದಾಟುವಂತೆ ಕಂಡಿತ್ತು. ಆದರೆ ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ (51ಕ್ಕೆ4) ನೇತೃತ್ವದಲ್ಲಿ ಭಾರತ ತಂಡದ ಬೌಲರ್‌ಗಳು ಆಂಗ್ಲರ ನಾಗಾಲೋಟಕ್ಕೆ ಕಡಿವಾಣ ಹಾಕಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 50 ಓವರುಗಳಲ್ಲಿ 8 ವಿಕೆಟ್‌ಗೆ 288 (ಆಮಿ ಜೋನ್ಸ್ 56, ಹೀದರ್ ನೈಟ್ 109, ನಾಟ್ ಶಿವರ್ ಬ್ರಂಟ್ 38, ಚಾರ್ಲಿ ಡೀನ್ ಔಟಾಗದೇ 19; ಶ್ರೀಚರಣಿ 68ಕ್ಕೆ2, ದೀಪ್ತಿ ಶರ್ಮಾ 51ಕ್ಕೆ4); **ಭಾರತ:** 50 ಓವರುಗಳಲ್ಲಿ 6 ವಿಕೆಟ್‌ಗೆ 284 (ಸ್ಮೃತಿ ಮಂದಾನ 88, ಹರ್ಲೀನ್ ಡಿಯೋಲ್ 24, ಹರ್ಮನ್‌ಪ್ರೀತ್ ಕೌರ್ 70, ದೀಪ್ತಿ ಶರ್ಮಾ 50, ಅಮನ್ಜೋತ್ ಕೌರ್ ಔಟಾಗದೇ 18, ಸ್ನೇಹ ರಾಣಾ ಔಟಾಗದೇ 10; ನಾಟ್ ಶಿವರ್ ಬ್ರಂಟ್ 47ಕ್ಕೆ2).
ಪಂದ್ಯದ ಆಟಗಾರ್ತಿ: ಹೀದರ್ ನೈಟ್

109	91	15	1
ರನ್	ಎಸೆತ	ಬೌಂಡರಿ	ಸಿಕ್ಸರ್

ಶತಕ ದಾಖಲಿಸಿದ ಹೀದರ್ ನೈಟ್ ಪಿಟಿಐ ಚಿತ್ರ

ಮಹಿಳೆಯರ ಕ್ರಿಕೆಟ್ ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆಸ್ಟ್ರೇಲಿಯಾ	5	4	0	1	9	1.818
ಇಂಗ್ಲೆಂಡ್	5	4	0	1	9	1.490
ದಕ್ಷಿಣ ಆಫ್ರಿಕಾ	5	4	1	0	8	-0.440
ಭಾರತ	5	2	3	0	4	0.526
ನ್ಯೂಜಿಲೆಂಡ್	5	1	2	2	4	-0.245
ಬಾಂಗ್ಲಾದೇಶ	5	1	4	0	2	-0.676
ಶ್ರೀಲಂಕಾ	5	0	3	2	2	-1.564
ಪಾಕಿಸ್ತಾನ	5	0	3	2	2	-1.887

ನಾಲ್ಕನೇ ತಂಡಕ್ಕೆ ಪೈಪೋಟಿ

ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಬಳಿಕ ಇಂಗ್ಲೆಂಡ್ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿದ ಮೂರನೇ ತಂಡವೆನಿಸಿತು.

ನಾಲ್ಕನೇ ತಂಡಕ್ಕಾಗಿ ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಪೈಪೋಟಿ ಏರ್ಪಟ್ಟಿದೆ. ಎರಡೂ ತಂಡಗಳಿಗೆ ತಲಾ ಎರಡು ಪಂದ್ಯಗಳು ಬಾಕಿ ಉಳಿದಿವೆ. ಇದೇ 23ರಂದು ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ನವಿ ಮುಂಬೈನಲ್ಲಿ ಮುಖಾಮುಖಿ ಯಾಗಲಿದ್ದು, ಈ ಪಂದ್ಯ ನಿರ್ಣಾಯಕವಾಗಿದೆ.

ವಿಶ್ವ ಜೂ. ಬ್ಯಾಡ್ಮಿಂಟನ್: ಥಾಯ್ಲೆಂಡ್‌ನ ಅನ್ಯಪತ್‌ಗೆ ಚಿನ್ನ

ಬೆಳ್ಳಿ ಪದಕ ಗೆದ್ದ ತನ್ವಿ ಶರ್ಮಾ

ಗುವಾಹಟಿ (ಪಿಟಿಐ): ಚಿನ್ನ ಗೆದ್ದು ಇತಿಹಾಸ ನಿರ್ಮಿಸುವ ಆತಿಥೇಯ ಭಾರತದ ಯುವ ಆಟಗಾರ್ತಿ ತನ್ವಿ ಶರ್ಮಾ ಅವರ ಆಸೆ ಈಡೇರಲಿಲ್ಲ. ಥಾಯ್ಲೆಂಡ್‌ನ ಅನ್ಯಪತ್ ಫಿಚಿಟ್‌ಪ್ರೀಚಸಕ್ ಅವರು ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಭಾನುವಾರ ನೇರ ಆಟಗಳಿಂದ ಅಗ್ರ ಶ್ರೇಯಾಂಕದ ಭಾರತದ ಆಟಗಾರ್ತಿಯನ್ನು ಅವರನ್ನು ಮಣಿಸಿ ಚಾಂಪಿಯನ್ ಆದರು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ಸೈನಾ ನೆಹ್ವಾಲ್ ಮತ್ತು ಅಪರ್ಣಾ ಪೋಪಟ್ ಬಳಿಕ ಈ ಟೂರ್ನಿಯ ಫೈನಲ್ ತಲುಪಿದ ಭಾರತದ ಮೂರನೇ ಆಟಗಾರ್ತಿ ಎನಿಸಿರುವ 16 ವರ್ಷ ವಯಸ್ಸಿನ ತನ್ವಿ 7–15, 12–15 ರಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿಗೆ ಸೋತರು.

ಇದು 17 ವರ್ಷಗಳಲ್ಲಿ ಭಾರತದ ಆಟಗಾರ್ತಿಯೊಬ್ಬರು ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಗೆಲ್ಲುತ್ತಿರುವ ಮೊದಲ ಬೆಳ್ಳಿ ಪದಕವಾಗಿದೆ. ಸೈನಾ (2008ರಲ್ಲಿ ಚಿನ್ನ, 2006ಲ್ಲಿ ಬೆಳ್ಳಿ), ಅಪರ್ಣಾ (1996ರಲ್ಲಿ ಬೆಳ್ಳಿ) ಈ ಹಿಂದೆ ಪದಕ ಗೆದ್ದ ಭಾರತದ ಇನ್ನಿಬ್ಬರು ಆಟಗಾರ್ತಿಯರಾಗಿದ್ದಾರೆ.

ಲಿಯು ಯಾಂಗ್‌ಗೆ ಪ್ರಶಸ್ತಿ: ಇದೇ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಚೀನಾದ ಲಿಯು ಯಾಂಗ್ ಮಿಂಗ್ ಯು ಅವರು 15–10, 15–11 ರಿಂದ ಇಂಡೊನೇಷ್ಯಾದ ಮೊಹಮ್ಮದ್ ಝುಕಿ ಉಬೈದಿಲ್ಲಾ ಅವರನ್ನು ಸೋಲಿಸಿದರು. ಮೂರನೇ ಶ್ರೇಯಾಂಕದ ಆಟಗಾರ, ಅಗ್ರ ಶ್ರೇಯಾಂಕದ ಉಬೈದಿಲ್ಲಾ ಅವರನ್ನು ಮಣಿಸಲು 35 ನಿಮಿಷ ತೆಗೆದುಕೊಂಡರು.

ಬೆಳ್ಳಿ ಪದಕ ಗೆದ್ದ ಭಾರತದ ತನ್ವಿ ಶರ್ಮಾ ಪಿಟಿಐ ಚಿತ್ರ

ಶರಣ್ ರಾವ್‌ಗೆ ಪ್ರಶಸ್ತಿ ಡಬಲ್

ಮಂಗಳೂರು: ಮಂಗಳೂರಿನ ಶರಣ್ ರಾವ್ ಅವರು ಕರ್ನಾಟಕ ರಾಜ್ಯ ಫಿಡೆ ರೇಟೆಡ್ ರ್‍ಯಾಪಿಡ್, ಬ್ಲಿಟ್ಜ್ ಮುಕ್ತ ಚೆಸ್ ಟೂರ್ನಿಯ ಎರಡೂ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡರು.

ರ್‍ಯಾಪಿಡ್‌ನಲ್ಲಿ ಆರವ್ ಸರ್ಬಾಲಿಯ ಹಾಗೂ ಬ್ಲಿಟ್ಜ್‌ನಲ್ಲಿ ಬೆಂಗಳೂರಿನ ಆರ್ಯನ್ ಪುತಾನೆ ರನ್ನರ್ ಅಪ್ ಆದರು.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ ನಗರದಲ್ಲಿ ಆಯೋಜಿಸಿದ್ದ ಎರಡು ದಿನಗಳ ಟೂರ್ನಿಯ ರ್‍ಯಾಪಿಡ್ ವಿಭಾಗ ದಲ್ಲಿ ಶರಣ್ 8 ಪಾಯಿಂಟ್ ಗಳಿಸಿದರೆ ಬ್ಲಿಟ್ಜ್‌ನಲ್ಲಿ 8.5 ಅಂಕ ಕಲೆ ಹಾಕಿದರು.

ಮೊದಲ ದಿನವಾದ ಶನಿವಾರ ರ್‍ಯಾಪಿಡ್ ವಿಭಾಗದ ಆರು ಸುತ್ತುಗಳ ಮುಕ್ತಾಯಕ್ಕೆ ಮಂಗಳೂರಿನ ಲಕ್ಷಿತ್ ಸಾಲ್ಯಾನ್ ಮತ್ತು ಆಗಸ್ಟಿನ್ ತಲಾ 6 ಪಾಯಿಂಟ್‌ಗಳನ್ನು ಗಳಿಸಿ ಅಗ್ರಸ್ಥಾನ ಹಂಚಿಕೊಂಡಿದ್ದರು. ಅಗ್ರ ಶ್ರೇಯಾಂಕಿತ ಶರಣ್ ರಾವ್ ಒಂದು ಪಂದ್ಯ ಡ್ರಾ ಮಾಡಿಕೊಂಡು 5.5 ಪಾಯಿಂಟ್ ಗಳಿಸಿದ ಏಕೈಕ ಆಟಗಾರ ಆಗಿದ್ದರು. ಭಾನುವಾರದ 3 ಸುತ್ತುಗಳ ಪೈಕಿ 2ರಲ್ಲಿ ಗೆದ್ದು ಒಂದನ್ನು ಡ್ರಾ ಮಾಡಿಕೊಂಡರು. 16ನೇ ಶ್ರೇಯಾಂಕಿತ ಆರವ್ ಸರ್ಬಾಲಿಯ ಕೂಡ 8 ಪಾಯಿಂಟ್ ಗಳಿಸಿದರು. ಉತ್ತಮ ಟೈ ಬ್ರೇಕರ್ ಆಧಾರದಲ್ಲಿ ಶರಣ್‌ಗೆ ಚಾಂಪಿಯನ್ ಪಟ್ಟ ನೀಡಲಾಯಿತು.

ಪಂಕಜ್ ಭಟ್, ವಿಹಾನ್ ಸಚ್‌ದೇವ್ ಮತ್ತು ಅಭಿನವ್ ಆನಂದ್ ತಲಾ 7.5 ಪಾಯಿಂಟ್ ಗಳಿಸಿ ಕ್ರಮವಾಗಿ 3, 4 ಮತ್ತು 5ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಆಗಸ್ಟಿನ್ 6 ಮತ್ತು ಲಕ್ಷಿತ್ 8ನೇ ಸ್ಥಾನಕ್ಕೆ ಕುಸಿದರು. 2ನೇ ಶ್ರೇಯಾಂಕಿತೆ ಇಶಾ ಶರ್ಮಾ 10ನೇ ಸ್ಥಾನ ಗಳಿಸಿದರು.

ಏಷ್ಯನ್ ರೋಯಿಂಗ್: ಭಾರತಕ್ಕೆ 10 ಪದಕ

ನವದೆಹಲಿ (ಪಿಟಿಐ): ಒಲಿಂಪಿಯನ್ ಬಲರಾಜ್ ಪನ್ವರ್ ನೇತೃತ್ವದಲ್ಲಿ ವಿಯೆಟ್ನಾಮಿನ ಹಾಯ್ ಫಾಂಗ್‌ನಲ್ಲಿ ನಡೆದ ಏಷ್ಯನ್ ರೋಯಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಉತ್ತಮ ಸಾಧನೆ ತೋರಿತು. ಈ ಕೂಟದಲ್ಲಿ ಮೂರು ಚಿನ್ನ, ಐದು ಬೆಳ್ಳಿ, ಎರಡು ಕಂಚು ಸೇರಿ ಒಟ್ಟು 10 ಪದಕಗಳನ್ನು ಗೆದ್ದುಕೊಂಡಿತು.

ಇತ್ತೀಚಿನ ವರ್ಷಗಳಲ್ಲಿ ಭಾರತ ತಂಡದ ಶ್ರೇಷ್ಠ ಪ್ರದರ್ಶನ ಇದೆನಿಸಿತು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗಿಯಾಗಿದ್ದ ಪನ್ವರ್ ಪುರುಷರ ಸಿಂಗಲ್ ಸ್ಕಲ್ (ಎಂ1ಎಕ್ಸ್) ರೇಸ್‌ನಲ್ಲಿ ಅಧಿಕಾರಯುತ ಪ್ರದರ್ಶನದೊಡನೆ ಚಿನ್ನ ಗೆದ್ದರು.

ಲೈಟ್‌ವೇಟ್ ಮೆನ್ಸ್ ಡಬಲ್ ಸ್ಕಲ್‌ನಲ್ಲಿ ಭಾರತ ಮತ್ತೊಂದು ಚಿನ್ನ ಗೆದ್ದುಕೊಂಡಿತು. ಲಕ್ಷಯ್ ಮತ್ತು ಅಜಯ್ ತ್ಯಾಗಿ ಈ ತಂಡದಲ್ಲಿದ್ದರು. ಪುರುಷರ ಕ್ವಾಡ್ರಾಪಲ್ ಸ್ಕಲ್ ಸ್ಪರ್ಧೆಯಲ್ಲೂ ತಂಡದ (ಕುಲ್ವಿಂದರ್ ಸಿಂಗ್, ನವದೀಪ್ ಸಿಂಗ್, ಸತ್ನಾಮ್ ಸಿಂಗ್ ಮತ್ತು ಜೇಕರ್ ಖಾನ್) ಉತ್ತಮ ಸಮನ್ವಯದಿಂದ ಚಿನ್ನ ಒಲಿಯಿತು.

ಅಫ್ಗನ್ ಬದಲು ಜಿಂಬಾಬ್ವೆ ಕಣಕ್ಕೆ

ಲಾಹೋರ್ (ಪಿಟಿಐ): ಪಾಕಿಸ್ತಾನದಲ್ಲಿ ನ.17ರಿಂದ ನಡೆಯಲಿರುವ ತ್ರಿಕೋನ ಸರಣಿಯಲ್ಲಿ ಅಫ್ಗಾನಿಸ್ತಾನದ ಬದಲು ಜಿಂಬಾಬ್ವೆ ಕಣಕ್ಕಿಳಿಯಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ತಿಳಿಸಿದೆ.

ಪಿಕೆಎಲ್: ತೆಲುಗು ಟೈಟನ್ಸ್‌ಗೆ ಜಯ

ನವದೆಹಲಿ (ಪಿಟಿಐ): ಅಂತಿಮ ಹಂತದಲ್ಲಿ ಒತ್ತಡ ನಿಭಾಯಿಸಿಕೊಂಡು ಆಡಿದ ತೆಲುಗು ಟೈಟನ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಭಾನುವಾರ ಗುಜರಾತ್ ಜೈಂಟ್ಸ್ ತಂಡವನ್ನು 30–25 ಅಂಕಗಳಿಂದ ಸೋಲಿಸಿತು.

ತ್ಯಾಗರಾಜ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡವು ಟೈಬ್ರೇಕರ್‌ನಲ್ಲಿ (7-5) ಹರಿಯಾಣ ಸ್ಟೀಲರ್ಸ್ ತಂಡವನ್ನು ಮಣಿಸಿತು. ನಿಗದಿತ ಅವಧಿಯ ಪಂದ್ಯ 37–37ರಿಂದ ಟೈ ಆಗಿತ್ತು. ದಿನದ ಮೂರನೇ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವು 38–27ರಿಂದ ಪುಣೇರಿ ಪಲ್ಟನ್ ತಂಡವನ್ನು ಸೋಲಿಸಿತು.

ಕರ್ನಾಟಕಕ್ಕೆ ಜಯ ನಿರಾಕರಿಸಿದ ರೈಲ್ವೇಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೇಸ್‌ನ ಕೆಳಮಧ್ಯಮ ಕ್ರಮಾಂಕದ ವಿರಾಟ್ ಜೈಸ್ವಾಲ್ ಮತ್ತು ಅಭಿಷೇಕ್ ಕೌಶಲ್ ಅವರು ಹೋರಾಟದ ಶತಕಗಳ ಮೂಲಕ ಸಿ.ಕೆ. ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಕರ್ನಾಟಕಕ್ಕೆ ಗೆಲುವನ್ನು ನಿರಾಕರಿಸಿದರು. ನಾಲ್ಕು ದಿನಗಳ ಈ ಪಂದ್ಯ ಭಾನುವಾರ ರೋಚಕ ಡ್ರಾ ಆಯಿತು.

ಡಿ ಗುಂಪಿನ ಪಂದ್ಯದಲ್ಲಿ ಫಾಲೊ ಆನ್‌ಗೆ ಒಳಗಾದ ರೈಲ್ವೇಸ್ 343 ರನ್‌ಗಳಿಂದ ಹಿಂದುಳಿದಿದ್ದು, ಆತಿಥೇಯರು ಗೆಲುವಿನ ನಿರೀಕ್ಷೆಯಲ್ಲಿದ್ದರು. ಶನಿವಾರ ಎರಡನೇ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 41 ರನ್ ಗಳಿಸಿದ್ದ ರೈಲ್ವೇಸ್ ಒಂದು ಹಂತದಲ್ಲಿ 8 ವಿಕೆಟ್‌ಗೆ 202 ರನ್ ಗಳಿಸಿ ಸೋಲಿನ ಸುಳಿಯಲ್ಲಿತ್ತು. ಎಡಗೈ ಸ್ಪಿನ್ನರ್ ಹಾರ್ದಿಕ್ ರಾಜ್ 87 ರನ್ನಿಗೆ 6 ವಿಕೆಟ್ ಕಬಳಿಸಿದ್ದರು. ಆದರೆ ರೈಲ್ವೇಸ್ ಹಳಿತಪ್ಪಿಸಲು ಆಗಲಿಲ್ಲ.

ವಿರಾಟ್ (ಅಜೇಯ 108, 223 ಎಸೆತ, 4x21, 6x1) ಅವರು ಅಭಿಷೇಕ್ (102, 202ಎ, 4x8, 6x3) ಅವರು 9ನೇ ವಿಕೆಟ್‌ಗೆ 117 ರನ್ ಸೇರಿಸಿ ಕರ್ನಾಟಕದ ಗುರಿಗೆ ಅಡ್ಡಿಯಾದರು. ಇದಕ್ಕೆ ಮೊದಲು ಆಡುವಾಗ ಗಾಯಾಳಾದ್ದ ಅಭಿಷೇಕ್ ಎಂಟನೇ ವಿಕೆಟ್ ಬಿದ್ದಾಗ ಆಡಲು ಮರಳಿದ್ದರು.

95ನೇ ಓವರಿನಲ್ಲಿ ಅಭಿಷೇಕ್ ಔಟಾದರೂ, ಕೊನೆಯ ಆಟಗಾರ ಉಮರ್ ಮಲಿಕ್ (1 ರನ್, 47ಎ) ಜೊತೆ ವಿರಾಟ್ ಬರೋಬರಿ ನೂರು ಎಸೆತಗಳನ್ನು ಆಡಿ ತಂಡಕ್ಕೆ ಆಪತ್ಬಾಂಧವರಾದರು. ತಂಡ 111 ಓವರುಗಳಲ್ಲಿ 9 ವಿಕೆಟ್‌ಗೆ 339 ರನ್ ಗಳಿಸಿ ಪಂದ್ಯ ಮುಗಿಸಿತು. ಕೊನೆಯ ವಿಕೆಟ್‌ಗೆ 20 ರನ್ ಜೊತೆಯಾಟ ಅಮೂಲ್ಯವಾಯಿತು.

ಕರ್ನಾಟಕ 11 ಪಾಯಿಂಟ್‌ಗಳೊಡನೆ ಡಿ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ. ಉತ್ತರಾಖಂಡ (12), ಉತ್ತರ ಪ್ರದೇಶ (11) ಮೊದಲ ಎರಡು ಸ್ಥಾನದಲ್ಲಿವೆ. ಹಿಮಾಚಲ (7) ಮತ್ತು ಛತ್ತೀಸಗಢ (6) ಕೊನೆಯ ಎರಡು ಸ್ಥಾನದಲ್ಲಿವೆ. ಕರ್ನಾಟಕ ಇದೇ 25 ರಿಂದ ನಡೆಯುವ ಮುಂದಿನ ಪಂದ್ಯದಲ್ಲಿ ಉತ್ತರ ಪ್ರದೇಶ ವಿರುದ್ಧ ಆಡಲಿದೆ.

ಸ್ಕೋರುಗಳು: ಮೊದಲ ಇನಿಂಗ್ಸ್: ಕರ್ನಾಟಕ: 7 ವಿಕೆಟ್‌ಗೆ 529 ಡಿ; ರೈಲ್ವೇಸ್: 186 (ಫಾಲೋಆನ್) ಮತ್ತು ಎರಡನೇ ಇನಿಂಗ್ಸ್: 111 ಓವರುಗಳಲ್ಲಿ 9 ವಿಕೆಟ್‌ಗೆ 339 (ಅಂಚಿತ್ ಯಾದವ್ 47, ಅನ್ಶ್ ಯಾದವ್ 32, ಅಭಿಷೇಕ್ ಕೌಶಲ್ 102, ವಿರಾಟ್ ಜೈಸ್ವಾಲ್ ಔಟಾಗದೇ 108; ಹಾರ್ದಿಕ್ ರಾಜ್ 87ಕ್ಕೆ6, ಧ್ರುವ್ ಪ್ರಭಾಕರ್ 47ಕ್ಕೆ2).4

ರೈಲ್ವೇಸ್ ತಂಡದ ಅಭಿಷೇಕ್ ಕೌಶಲ್

ಹೈದರಾಬಾದ್ ರೇಸ್

ಎನ್‌ಆರ್‌ಐ ಹೈ ಪವರ್ ಗೆಲ್ಲುವ ನಿರೀಕ್ಷೆ

ಮುಸ್ತಾಕ್ ಆಲಿಖಾನ್ ಮೆಮೋರಿಯಲ್ ಕಪ್ ಸೋಮವಾರದ ಹ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎನ್‌ಆರ್‌ಐ ಹೈ ಪವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:50ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ನೂರಿಯನ್ 11, ಶಾರಂಗ 1, ಮಾವಿಶ್ 2
2ನೇ ರೇಸ್: ಆರಿಜೋನ ಸನ್ 3, ರಿಯಲ್ ತಲೈವಾ 5, ಎಲಿಗೆಂಟ್ ಲೇಡಿ 2
3ನೇ ರೇಸ್: ಹುಗ್ ಕೆಪೆಟ್ 2, ಡಿ ಮಿಂಚು 1, ಮ್ಯಾವೆರಿಕ್ 3
4ನೇ ರೇಸ್: ಎನ್‌ಆರ್‌ಐ ಹೈ ಪವರ್ 4, ಜೂಜ 5, ಎಮಿರಾಲ್ಡ್ ಟಚ್ 8
5ನೇ ರೇಸ್: ಆಲ್ಫೊಹಾಲ್ ಫ್ರೀ 1, ಫ್ಲಾಶಿಂಗ್ ಮೆಮೋರೀಸ್ 10, ಫಾರ್ಚೂನ್ ಆರ್ಟ್ 9
6ನೇ ರೇಸ್: ಫಾಕ್ಸಿ ಗರ್ಲ್ 1, ಏಕ್ 5, ಡ್ರೀಮ್ ಟು ಫ್ಲೈ 3

ಉತ್ತಮ ಬೆಟ್: ಆರಿಜೋನ ಸನ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
2,3,4,5,6	1,2,3	4,5,6

ರೇಸ್ ತರಬೇತುದಾರ ಪದ್ಮನಾಭನ್ ನಿಧನ

ಬೆಂಗಳೂರು: ಕುದುರೆ ರೇಸ್ ತರಬೇತಿಯಲ್ಲಿ ಉನ್ನತ ಮಟ್ಟದಲ್ಲಿ ಹೆಸರು ಮಾಡಿದ್ದ ಎಸ್. ಪದ್ಮನಾಭನ್ (71) ಅವರು ಅನಾರೋಗ್ಯದಿಂದ ಬೆಂಗಳೂರಿನಲ್ಲಿ ಭಾನುವಾರ ನಿಧನರಾದರು. ಅವರು ಅಭಿಮಾನಿ ವಲಯದಲ್ಲಿ 'ಪದ್ದು' ಎಂದೇ ಕರೆಯಿಸಿಕೊಳ್ಳುತ್ತಿದ್ದರು.

ದೇಶದಲ್ಲಿ ರೇಸ್ ತರಬೇತಿಯ ದಂತಕತೆಗಳಾದ ರಶೀದ್ ಬೈರಾಮ್ಜಿ, ಆರಿಸ್ ಡೇವಿಡ್ ಅವರ ನಂತರದ ಸ್ಥಾನ ಪದ್ಮನಾಭನ್ ಅವರಿಗೆ ಸಲ್ಲುತ್ತದೆ. ಅವರ ಪ್ರಮುಖ ಗುರಿ ಕ್ಲಾಸಿಕ್ ರೇಸ್‌ಗಳನ್ನು ಗೆಲ್ಲುವುದೇ ಆಗಿತ್ತು. ತಮ್ಮ ವೃತ್ತಿಜೀವನದಲ್ಲಿ ಸುಮಾರು 1000ಕ್ಕೂ ಹೆಚ್ಚಿನ ಕುದುರೆಗಳನ್ನು ಗೆಲ್ಲಿಸಿರುತ್ತಾರೆ.

ದೇಶದ ಅತ್ಯುತ್ತಮ ಹಾಗೂ ಶ್ರೇಷ್ಠ ರೇಸ್ 'ಇಂಡಿಯನ್ ಇನ್ವಿಟೇಷನ್ ಕಪ್' ಅನ್ನು ಐದು ಬಾರಿ ಹಾಗೂ ಶ್ರೀಮಂತ ರೇಸ್ 'ಇಂಡಿಯನ್ ಡರ್ಬಿ' ಅನ್ನು ಮೂರು ಬಾರಿ ಗೆದ್ದಿರುವುದು ಅವರ ಪ್ರಮುಖ ಸಾಧನೆ. ದೇಶದ ಎಲ್ಲಾ ರೇಸ್ ಕ್ಲಬ್‌ಗಳು ನಡೆಸುವ ಕ್ಲಾಸಿಕ್ ರೇಸ್‌ಗಳಲ್ಲಿ 113 ಜಯಶಾಲಿಯಾಗಿದ್ದಾರೆ ಮತ್ತು 200 ಗ್ರೇಡೆಡ್ ರೇಸ್‌ಗಳನ್ನು ಗೆದ್ದಿರುತ್ತಾರೆ.

ತರಬೇತುದಾರನಾಗಿ ಅಲ್ಲದೆ ಕರ್ನಾಟಕ ಟ್ರೈನರ್ಸ್ ಸಂಸ್ಥೆ, ಇಂಡಿಯನ್ ರೇಸ್‌ಹಾರ್ಸ್ ಟ್ರೈನರ್ಸ್ ಸಂಸ್ಥೆ ಮತ್ತು ಕರ್ನಾಟಕ ರೇಸ್‌ಹಾರ್ಸ್ ಓನರ್ಸ್ ಸಂಸ್ಥೆಯಲ್ಲಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಟರ್ಫ್ ಕ್ಲಬ್ ಆಫ್ ಇಂಡಿಯಾ ಅವರನ್ನು ಕಾಯಂ ಆಹ್ವಾನಿತರನ್ನಾಗಿ ಗೌರವಿಸಿತ್ತು.

ಸೋಮವಾರ ಬೆಳಿಗ್ಗೆ 10ರಿಂದ ಸಂಜಯನಗರದ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 3 ಗಂಟೆಗೆ ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಾಂಗ್ಲಾಕ್ಕೆ ಮಣಿದ ವೆಸ್ಟ್ ಇಂಡೀಸ್

ಮೀರ್‌ಪುರ್ (ಬಾಂಗ್ಲಾದೇಶ) (ಪಿಟಿಐ): ಲೆಗ್ ಸ್ಪಿನ್ನರ್ ರಶೀದ್ ಹುಸೇನ್ (35ಕ್ಕೆ 6) ಅವರ ಜೀವನಶ್ರೇಷ್ಠ ಬೌಲಿಂಗ್ ನೆರವಿನಿಂದ ಬಾಂಗ್ಲಾದೇಶ ತಂಡವು ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಮುಖಾಮುಖಿಯಲ್ಲಿ 74 ರನ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ: 49.4 ಓವರ್‌ಗಳಲ್ಲಿ 207 (ತೌಹಿದ್ ಹೃದಯ್ 51, ಮಹಿದುಲ್ ಇಸ್ಲಾಂ 46; ಜೇಡನ್ ಸೀಲ್ಸ್ 48ಕ್ಕೆ3, ರೋಸ್ಟನ್ ಚೇಸ್ 30ಕ್ಕೆ2, ಜಸ್ಟಿನ್ ಗ್ರೀವ್ಸ್ 32ಕ್ಕೆ2). ವೆಸ್ಟ್ ಇಂಡೀಸ್: 39 ಓವರ್‌ಗಳಲ್ಲಿ 133 (ಬ್ರ್ಯಾಂಡನ್ ಕಿಂಗ್ 44, ; ರಶೀದ್ ಹುಸೇನ್ 35ಕ್ಕೆ6, ಮುಸ್ತಫಿಜುರ್ ರೆಹಮಾನ್ 16ಕ್ಕೆ2).

ಸೂಪರ್ ಎಂಟರ ಘಟ್ಟಕ್ಕೆ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡವು ಭಾನುವಾರ ನಡೆದ ಮಹಿಳಾ ಟಿ20 ಟ್ರೋಫಿಯ ಪಂದ್ಯದಲ್ಲಿ 75 ರನ್‌ಗಳಿಂದ ಹೈದರಾಬಾದ್ ತಂಡವನ್ನು ಮಣಿಸಿ, ಸೂಪರ್ ಎಂಟರ ಘಟ್ಟಕ್ಕೆ ಅರ್ಹತೆ ಪಡೆಯಿತು.

ಗ್ವಾಲಿಯರ್‌ನ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವೃಂದಾ ದಿನೇಶ್ (50) ಮತ್ತು ಶಿಶಿರಾ ಗೌಡ (51) ಅವರ ಅರ್ಧಶತಕಗಳ ನೆರವಿನಿಂದ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 167 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಹೈದರಾಬಾದ್ ತಂಡವು 92 ರನ್‌ಗಳಿಗೆ ಆಲೌಟ್ ಆಯಿತು. ಈ ಗೆಲುವಿನೊಂದಿಗೆ ಎಲೀಟ್ ಸಿ ಗುಂಪಿನಲ್ಲಿ ಕರ್ನಾಟಕ ತಂಡವು ಎರಡನೇ ಸ್ಥಾನ ಪಡೆಯಿತು.

ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಕಬಡ್ಡಿ ಟೂರ್ನಿ

ದಕ್ಷಿಣ ಕನ್ನಡ ತಂಡಕ್ಕೆ ಅವಳಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ತುಮಕೂರು: ದಕ್ಷಿಣ ಕನ್ನಡ ಜಿಲ್ಲಾ ತಂಡಗಳು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯಗೊಂಡ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕಬಡ್ಡಿ ಟೂರ್ನಿಯ ಬಾಲಕರ ಮತ್ತು ಬಾಲಕಿಯರ ವಿಭಾಗಗಳ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡವು.

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಆಶ್ರಯದಲ್ಲಿ ನಡೆದ ಎರಡು ದಿನಗಳ ಟೂರ್ನಿಯಲ್ಲಿ 30 ಜಿಲ್ಲೆಗಳಿಂದ ಒಟ್ಟು 66 ತಂಡಗಳು ಭಾಗವಹಿಸಿದ್ದವು.

ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ದಕ್ಷಿಣ ಕನ್ನಡ ತಂಡವು 36–26 ಅಂಕಗಳಿಂದ ವಿಜಯಪುರ ತಂಡವನ್ನು ಮಣಿಸಿ ಚಾಂಪಿಯನ್ ಆಯಿತು. ವಿಜಯಪುರ ರನ್ನರ್ಸ್ ಅಪ್ ಆಯಿತು.

ಬಾಲಕಿಯರ ವಿಭಾಗದಲ್ಲಿ ಚಿಕ್ಕೋಡಿ ಮತ್ತು ದಕ್ಷಿಣ ಕನ್ನಡ ತಂಡಗಳ ಮಧ್ಯೆ ಪ್ರಶಸ್ತಿಗೆ ಪೈಪೋಟಿ ಏರ್ಪಟ್ಟಿತು. ರೋಚಕವಾಗಿದ್ದ ಈ ಪಂದ್ಯವು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿತು. ದಕ್ಷಿಣ ಕನ್ನಡದ ಬಾಲಕಿಯರು 46–44ರಿಂದ ಚಿಕ್ಕೋಡಿ ತಂಡವನ್ನು ಸೋಲಿಸಿ ಸಂಭ್ರಮಿಸಿದರು.

ಬಾಲಕರಲ್ಲಿ ಉತ್ತಮ ರೇಡರ್ ಸಂದೀಪ್ (ವಿಜಯಪುರ), ಉತ್ತಮ ಡಿಫೆಂಡರ್ ಆನಂದ್ (ದಕ್ಷಿಣ ಕನ್ನಡ), ಉತ್ತಮ ಆಲ್‌ರೌಂಡರ್ ಸಯೀಮ್ (ಉಡುಪಿ), ಬಾಲಕಿಯರಲ್ಲಿ ಉತ್ತಮ ರೇಡರ್ ಹಂಷಿತಾ (ದಕ್ಷಿಣ ಕನ್ನಡ), ಉತ್ತಮ ಡಿಫೆಂಡರ್ ರುಕ್ಸಾನಾ (ಹಾವೇರಿ), ಉತ್ತಮ ಆಲ್‌ರೌಂಡರ್ ಸುರಕ್ಷಾ (ಚಿಕ್ಕೋಡಿ) ವೈಯಕ್ತಿಕ ಪ್ರಶಸ್ತಿ ಪಡೆದರು.

ತುಮಕೂರಿನಲ್ಲಿ ಭಾನುವಾರ ಮುಕ್ತಾಯವಾದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ವಿಜೇತರಾದ ದಕ್ಷಿಣ ಕನ್ನಡ ತಂಡದ ಆಟಗಾರರಿಗೆ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಪ್ರಶಸ್ತಿ ವಿತರಿಸಿದರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿ.ಪಂ ಸಿಇಒ ಜಿ.ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಡಿಡಿಪಿಯು ಬಾಲಗುರುಮೂರ್ತಿ ಹಾಜರಿದ್ದರು

'ಜನವರಿಯಲ್ಲಿ ರಾಜ್ಯ ಒಲಿಂಪಿಕ್ಸ್'

ತುಮಕೂರು: 'ಮುಂದಿನ ವರ್ಷದ ಜನವರಿ 15ರಿಂದ 7 ದಿನ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಒಲಿಂಪಿಕ್ಸ್ ಕ್ರೀಡಾಕೂಟ ನಡೆಯಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ ಹೇಳಿದರು.

'ಅಥ್ಲೆಟಿಕ್ಸ್, ಟೆನಿಸ್, ಕಬಡ್ಡಿ, ಈಜು ಸ್ಪರ್ಧೆ ಸೇರಿದಂತೆ 27 ಕ್ರೀಡೆಗಳು ನಡೆಯಲಿವೆ. ರಾಜ್ಯದ ವಿವಿಧೆಡೆಯಿಂದ 4,600 ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಇದೆ' ಎಂದು ಅವರು ಮಾಹಿತಿ ನೀಡಿದರು.

LG
ಪೈ ಇಂಟರ್‌ನ್ಯಾಷನಲ್
Celebrating Trust Across Generations
ಮೆಗಾ ಫೆಸ್ಟಿವಲ್ ಸೇಲ್
Generations change, the celebrations continue with
LG – India's Most Trusted Brand*
CELEBRATION OFFERS
Up to 26%* Cashback (On Select Debit/Credit Cards)
Max. up to ₹50000 (On Select Models)
Fixed EMI ₹ 888* Onwards (On Select Models)
LG BEST Care
Ask for AMC*
*Annual Maintenance Contract
ಗೆಲ್ಲಿರಿ 25 ಕಾರುಗಳು*
ಗೆಲ್ಲಿರಿ 17 ಕೋಟಿ
ಪೈ ಲಾಯಲ್ಟಿ ಪಾಯಿಂಟ್ಸ್*
LG OLED evo AI
WORLD'S No.1 OLED TV FOR 12 YEARS
3 YEAR* WARRANTY
UP TO 26%* CASHBACK Max. up to ₹26000
FIXED EMI STARTING FROM ₹2999*
RANGE STARTS FROM : ₹109990*
LG QNED evo AI
MiniLED
3 YEAR* WARRANTY
UP TO 10%* CASHBACK Max. up to ₹10000
FIXED EMI STARTING FROM ₹1999*
RANGE STARTS FROM : ₹45990*
LG NanoCell AI
3 YEAR* WARRANTY
UP TO 10%* CASHBACK Max. up to ₹10000
UP TO 30%* OFF ON LG SOUNDBAR (With Select 4K TVs)
RANGE STARTS FROM : ₹36990*
LG UHD AI
3 YEAR* WARRANTY
UP TO 10%* CASHBACK Max. up to ₹7500
FIXED EMI STARTING FROM ₹1999*
RANGE STARTS FROM : ₹31990*
SOUND BAR
Dolby Atmos
World's 1st CENTRE UP-FIRING SPEAKER
NO DRILLING REQUIRED
UP TO 5%* CASHBACK Max. up to ₹2500 (On Select Models)
FIXED EMI STARTING FROM ₹ 999*
RANGE STARTS FROM : ₹11799*
SIDE-BY-SIDE REFRIGERATOR
FREE* MINI REFRIGERATOR worth up to ₹13999* & ₹11999* (On Select Side-by-Side Refrigerators)
FIXED EMI STARTING FROM ₹2999*
RANGE STARTS FROM : ₹71990*
TOP FREEZER REFRIGERATOR
BOTTOM FREEZER REFRIGERATOR
FIXED EMI STARTING FROM ₹1499*
RANGE STARTS FROM : ₹23990*
SINGLE DOOR REFRIGERATOR
SMART INVERTER COMPRESSOR 10 YEAR WARRANTY
Smart Inverter Compressor
FIXED EMI STARTING FROM ₹999*
RANGE STARTS FROM : ₹12990*
FRONT LOAD WASHING MACHINE
DD MOTOR Direct Drive Motor 10 YEAR WARRANTY
FIXED EMI STARTING FROM ₹1999*
RANGE STARTS FROM : ₹29990*
TOP LOAD WASHING MACHINE
DD MOTOR Direct Drive Motor 10 YEAR WARRANTY
AI DD®
TurboWash™
FIXED EMI STARTING FROM ₹1499*
RANGE STARTS FROM : ₹18990*
DISHWASHER
INVERTER DIRECT DRIVE MOTOR 10 YEAR WARRANTY
FIXED EMI STARTING FROM ₹2999* (On Select Models)
RANGE STARTS FROM : ₹46900*
AIR CONDITIONERS
New 2025 SERIES
Dual Inverter COMPRESSOR
6in1
Energy Manager*
AI
10 YEAR
5 YEAR
10% RETURN AVAILABLE AS CASHBACK up to ₹4000*
FREE STANDARD INSTALLATION** on Split ACs
FIXED EMI STARTING FROM @ ₹1999* (Offer on 5 Star/Hot and Cold ACs)
RANGE STARTS FROM : ₹36990*
YOUR HOME CHEF
Wi-Fi ENABLED MICROWAVE OVEN
401
40* SCAN TO COOK MENU
CHARCOAL Lighting Heater™
FREE* GLASS BOWL SET (On Select Convection Models)
FIXED EMI STARTING FROM ₹1499*
RANGE STARTS FROM : ₹7990*
AMERICAN EXPRESS
AXIS BANK
BOBCARD CREDIT REIMAGINED
DBS
FEDERAL BANK YOUR PERFECT BANKING PARTNER
HDFC BANK
ICICI Bank
IDFC FIRST Bank Credit & Debit Cards
J&K Bank Serving To Empower
SBI card
Pai INTERNATIONAL
PRODUCT & SERVICE RELATED ENQUIRIES
+91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY
FOR REFRIGERATORS, WASHING MACHINES, LED TV'S
24 HOURS DELIVERY CHALLENGE*
GET 100% ADDITIONAL LUCKY DRAW COUPON* IF NOT DELIVERED WITHIN 24 HOURS (Within City Limits)
WE ARE CELEBRATING 220+ OUTLETS
STORE LOCATOR
*Terms and Conditions Apply. For more information please visit www.lg.com

ಪೂರ್ವಿಕಾ
ದೀಪಗಳ ಹೊನಲು ಹರಡಲಿ ಮನದೊಳಗೆ!
ಸಂತೋಷವನ್ನು ತರಲಿ ನಿಮ್ಮ ಮೊಗದೊಳಗೆ!
ದೀಪಾವಳಿ ಹಬ್ಬದ ಶುಭಾಶಯಗಳು
ಪೂರ್ವಿಕಾ ನಮ್ಮ ಮನೆ ದೀಪಾವಳಿ
Win
iPhone 15 (128 GB) MRP ₹59,900 Effective Price ₹54,990* Per Day EMI ₹79*
iPhone 16 (128 GB) MRP ₹69,900 Effective Price ₹62,990* Per Day EMI ₹93*
iPhone 17 (256 GB) MRP ₹82,900 Effective Price ₹49,900* Per Day EMI ₹115*
iPhone 17 Pro (256 GB) MRP ₹1,34,900 Effective Price ₹1,03,900* Per Day EMI ₹187*
Pixel 9A 5G ₹5,000* Discount + 2 MORE OFFER
Google Pixel 10 Pro Fold 5G ₹10,000 INSTANT CASHBACK + 2 MORE OFFER
SAMSUNG Galaxy A36 5G (8+128GB) ₹2,500 BANK CASHBACK + 3 MORE OFFER
SAMSUNG Galaxy A56 5G (8+256GB) 0 DOWN PAYMENT + 3 MORE OFFER
SAMSUNG Galaxy S25 FE 5G (8+512GB) ₹5,000 BANK CASHBACK + 2 MORE OFFER
SAMSUNG Galaxy S25 5G (12+512GB) ₹6,000 BANK CASHBACK + 3 MORE OFFER
SAMSUNG Galaxy S25 Ultra 5G (12+256 GB) ₹11,000 BANK CASHBACK + 4 MORE OFFER
vivo V60e 5G (8+128GB) ₹3,000 INSTANT CASHBACK + 3 MORE OFFER
vivo X200 FE 5G (12+256GB) ₹5,500 INSTANT CASHBACK + 2 MORE OFFER
oppo F31 5G (8+128 GB) 10% INSTANT CASHBACK + 3 MORE OFFER
oppo F31 PRO 5G (8+128 GB) 10%* INSTANT CASHBACK + 3 MORE OFFER
oppo RENO 14 5G (8+256 GB) ₹3,000 INSTANT CASHBACK + 3 MORE OFFER
oppo RENO 14 PRO 5G (12+256 GB) ₹4,500 INSTANT CASHBACK + 3 MORE OFFER
NOTHING Phone (3a) 5G (8+128 GB) ₹2,000 INSTANT CASHBACK + 3 MORE OFFER
NOTHING Phone (3a pro) 5G (8+128 GB) ₹2,000 INSTANT CASHBACK + 3 MORE OFFER
realme C73 5G (4+64 GB) ₹500 DISCOUNT + 2 MORE OFFER
realme 15X 5G (6+128 GB) ₹1,000 INSTANT CASHBACK + 4 MORE OFFER
realme 15T 5G (8+128 GB) ₹2,000 INSTANT CASHBACK + 3 MORE OFFER
realme 15 LITE 5G (8+128 GB) 0 DOWN PAYMENT + 3 MORE OFFER
realme 15 5G (8+128 GB) 10% INSTANT CASHBACK + 3 MORE OFFER
SAMSUNG Galaxy A06 5G (4+64GB) Start @ ₹9,899
SAMSUNG Galaxy A17 5G (6+128GB) ₹1,000 BANK CASHBACK + 2 MORE OFFER
SAMSUNG Galaxy F17 5G (4+128GB) 0 DOWN PAYMENT + 1 MORE OFFER
vivo Y31 5G (4+128GB) ₹1,000 INSTANT CASHBACK + 2 MORE OFFER
vivo Y31 Pro 5G (8+128GB) ₹1,500 INSTANT CASHBACK + 2 MORE OFFER
vivo Y400 5G (8+128GB) 10% INSTANT CASHBACK + 2 MORE OFFER
vivo Y19 5G (4+64GB) Starts @ ₹10,499* + 2 MORE OFFER
TECNO Pova Slim 5G (8+128 GB) 0 DOWN PAYMENT + 3 MORE OFFER
TECNO Spark GO 5G (4+128 GB) EMI @ ₹1,111* + 2 MORE OFFER
vivo T4 Lite 5G (4+128 GB) 5% INSTANT CASHBACK + 2 MORE OFFER
ONEPLUS Nord CE 5G (8+128GB) ₹2,000* INSTANT CASHBACK + 3 MORE OFFER
ONEPLUS Nord 5 5G ₹2,000* INSTANT CASHBACK + 3 MORE OFFER
ONEPLUS 13R 5G (12+256GB) ₹5,000* DISCOUNT + 3 MORE OFFER
oppo A5X 5G (4+128GB) ₹1,000* INSTANT CASHBACK + 3 MORE OFFER
oppo A5 5G (6+128GB) 0 DOWN PAYMENT + 3 MORE OFFER
oppo A5 PRO 5G (8+128GB) 0 DOWN PAYMENT + 3 MORE OFFER
oppo K13X 5G (4+128GB) ₹2,000 INSTANT CASHBACK + 2 MORE OFFER
vivo T4X 5G (6+128 GB) 5% INSTANT CASHBACK + 2 MORE OFFER
vivo Y400 Pro 5G (8+128 GB) 10% INSTANT CASHBACK + 2 MORE OFFER
vivo V60 5G (8+256 GB) 10% INSTANT CASHBACK + 2 MORE OFFER
Redmi 14C 5G (4+64 GB) Starts @ ₹8,999* + 2 MORE OFFER
Redmi 15 5G (6+128 GB) 0 DOWN PAYMENT + 2 MORE OFFER
Redmi Note 14 5G (8+128 GB) ₹1,250 INSTANT CASHBACK + 3 MORE OFFER
Redmi Note 14 Pro 5G (8+128 GB) ₹1,250 INSTANT CASHBACK + 3 MORE OFFER
LAPTOP ₹29,990 ₹23,990
LAPTOP R5 starts @ ₹39,490
LAPTOP BUY LAPTOP & GET Laptop Bag & Keyboard Mouse Combo Worth ₹3,499 FREE
ASUS SAMSUNG Lenovo DELL hp
₹10,000 CASHBACK *On leading Banks
SMART TV LED
xiaomi 4K TV X 2025 43
0 DOWN PAYMENT OR 5% INSTANT CASHBACK EMI ₹3,500
Upto ₹5,000 CASHBACK* BAJAJ FINSERV
Upto ₹8,800 INSTANT DISCOUNT kotak
ONEASSIST PROTECT YOUR SMARTPHONE Against Accidental & Liquid Damage Plan Starts@ ₹699*
Paytm Pine Labs
*EMI OPTIONS AVAILABLE ON SELECTED SHOWROOM ONLY
JBL Tune 520BT Headphone 40% Discount Now @ ₹2,999
FIRE-BOLTT Cyclone 90% Discount Now @ ₹1,199
boAt TWS Airdopes 313 40% Discount Now @ ₹1,299
conekt Insane 2090 (2.1Ch 160W) Sound Bar 40% Discount Now @ ₹5,999
YARR Sonic In Ear Earphones 60% Discount Now @ ₹199
ZEBRONICS Zeb-Vita Pro RGB 24W BT Speaker 65% Discount Now @ ₹1299
T&c apply. Offer applicable for selected brand and models
HDFC BANK
FESTIVE TREATS Upto ₹13000 Instant Discount* with HDFC Bank Credit Cards
Buy SMARTPHONE Get any
Neckband 90% DISCOUNT ₹1,999 ₹199
Personal Fan 80% DISCOUNT ₹1,999 ₹399
FIRE-BOLTT Dominion Smartwatch 95% DISCOUNT ₹21,000 ₹999
conekt 80W Soundbar 79% DISCOUNT ₹13,999 ₹2,999
JBL Truewireless 60% DISCOUNT ₹7,499 ₹2999
UP TO ₹13,000 INSTANT DISCOUNT* SBI card
*Min. Trxn.: ₹20,000; Max. Discount: ₹13,000 per card; Valid only on EMI Trxns.; Validity: 20 Sep - 26 Oct 2025. T&C Apply.
SCAN QR CODE
Upto 5% INSTANT DISCOUNT
IDFC FIRST Bank AXIS BANK Bank of Baroda one card scapia HSBC kotak DBS
#Min. Trxn.: 10,000; Max. cashback: 7,500 per card; Valid only on EMI Trxns.
Customer Helpline : 99406 88855
Shop online @ www.poorvika.com
ಪೂರ್ವಿಕಾ